# ಜನಶಕ್ತಿ


ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 । ಸಂಚಿಕೆ 48 । ನವೆಂಬರ್ 23–29, 2020 । ಪುಟ 16 । ರೂ. 10

https://janashakthi.wordpress.com e-mail : js_weekly@yahoo.com


## 'ನೂರು ಅಡಿ ಬಣ್ಣದ ನಡೆ' ಖ್ಯಾತಿಯ ಸೊಲಬಕ್ಕನವರ್ ಇನ್ನಿಲ್ಲ







## ಎಲ್.ಡಿ.ಎಫ್. ಸರ್ಕಾರಕ್ಕೆ ಕಳಂಕ ಹಚ್ಚುವ ಹುನ್ನಾರ




## ಕಾರ್ಪೊರೇಟ್ ಕೃಷಿ ಹೇರಿಕೆಗೆ ಲೂಟಿಗೆ ಮತ್ತೆ ಸುಗ್ರೀವಾಜ್ಞೆ





## ಎಂಗೆಲ್ಸ್ 200 ಕಾರ್ಮಿಕ ವರ್ಗದ ಪಥ ಪ್ರದರ್ಶಕ



## ಜಾತಿ ಒಕ್ಕಲಿಗರ ಪ್ರಾಧಿಕಾರ ರಚನೆ

## ಲಿಥಿಯಂ, ಮಸ್ಕ್ ಮತ್ತು ಬೊಲಿವಿಯ ಕ್ಷಿಪ್ರ ದಂಗೆ



# ಕೇಂದ್ರೀಯ ಏಜೆನ್ಸಿಗಳು ಬಿಜೆಪಿ ಸರಕಾರದ ರಾಜಕೀಯ ಅಂಗಗಳಂತೆ ವರ್ತಿಸುತ್ತಿವೆ

**ಜಾರಿ ನಿರ್ದೇಶನಾಲಯ(ಇ.ಡಿ.) ಮತ್ತು ಇತರ ಕೇಂದ್ರೀಯ ತನಿಖಾ ಏಜೆನ್ಸಿಗಳನ್ನು ಕೇರಳದ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಎಲ್‌ಡಿಎಫ್ ಸರಕಾರವನ್ನು ಅಸ್ಥಿರಗೊಳಿಸಲು ಮತ್ತು ರಾಜ್ಯದ ಮುಖ್ಯಮಂತ್ರಿಗಳ ಮೇಲೆ ಗುರಿಯಿಡಲು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ.**

ಯುಪಿಎ ಅಡಿಯಲ್ಲಿ ನಡೆಯುತ್ತಿರುವ ಕೇಂದ್ರೀಯ ತನಿಖೆಗಳನ್ನು ಚಿನ್ನ ಕಳ್ಳಸಾಗಾಣಿಕೆಯ ಮೂಲಕ ಪಡೆದ ಹಣವನ್ನು ರಾಷ್ಟ್ರ–ವಿರೋಧಿ ಚಟುವಟಿಕೆಗಳಿಗೆ ಬಳಸಲಾಗುತ್ತಿದೆ ಎಂಬ ಆಪಾದನೆಯ ಬಗ್ಗೆ ಮಾಡುವ ಬದಲು, ಕೇರಳದಲ್ಲಿನ ಆಳುವ ಎಲ್‌ಡಿಎಫ್ ಸರಕಾರದ ರಾಜಕೀಯ ಮುಖಂಡತ್ವವನ್ನು ಸಿಗಿಸಿ ಹಾಕಲು ಬಳಸಲಾಗುತ್ತಿದೆ.

ಈಗ ತನಿಖಾ ಸಂಸ್ಥೆಗಳ ವಶದಲ್ಲಿರುವ ಆರೋಪಿಗಳಲ್ಲಿ ಇಬ್ಬರು, ತಮ್ಮ ಮೇಲೆ ರಾಜಕೀಯ ಮುಖಂಡತ್ವವನ್ನು ಹೆಸರಿಸಲು ಒತ್ತಡ ತರಲಾಗುತ್ತಿದೆ, ಅದಕ್ಕೆ ಪ್ರತಿಯಾಗಿ ಅವರನ್ನು ಆರೋಪಿಗಳ ಬದಲಾಗಿ ಅಪ್ರೂವರ್ ಆಗಿ ಮಾಡಲಾಗುವುದು ಎಂದು ಹೇಳಲಾಗುತ್ತಿದೆ ಎಂದು ತಿಳಿಸಿದ್ದಾರೆ. ಒಬ್ಬ ಮಹಿಳೆಯ ಆಡಿಯೋ ರೆಕಾರ್ಡಿಂಗ್ ಮತ್ತು ಒಬ್ಬ ಅಮಾನತಾಗಿರುವ ಐಎಎಸ್ ಅಧಿಕಾರಿಯ ಜಾಮೀನು ಅರ್ಜಿ ಎರಡೂ ಇದನ್ನು ಹೇಳಿವೆ.

ಇದು ಅತ್ಯಂತ ಅಸಹ್ಯಕಾರಿ ಮತ್ತು ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಬಿಜೆಪಿ ಕೇಂದ್ರ ಸರಕಾರ ಕೇಂದ್ರೀಯ ಏಜೆನ್ಸಿಗಳನ್ನು ಭಾರತೀಯ ಸಂವಿಧಾನದ ಮೂಲ ತತ್ವಗಳನ್ನು ಶಿಥಿಲಗೊಳಿಸಲು ಮಾಡಲು ಮತ್ತು ಇಂತಹ ಅಸಂವಿಧಾನಿಕ ಸಾಧನಗಳ ಮೂಲಕ ತಮ್ಮ ರಾಜಕೀಯ ಹಿತಗಳನ್ನು ಈಡೇರಿಸಿಕೊಳ್ಳಲು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂದು ಅದು ಹೇಳಿದೆ.

ಇಂತಹ ನಡೆಗಳನ್ನು ವಿರೋಧಿಸುವುದಾಗಿ ಹೇಳಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ನ್ಯಾಯಾಂಗ ಮತ್ತು ಇತರ ಸ್ವತಂತ್ರ ಸಂಸ್ಥೆಗಳು ಸಂವಿಧಾನವನ್ನು ಎತ್ತಿ ಹಿಡಿಯಬೇಕು ಎಂದು ಕರೆ ನೀಡಿದೆ. ಇಂತಹ ದುಷ್ಟ ಹಂಚಿಕೆಗಳ ವಿರುದ್ಧ ಪ್ರತಿಭಟಿಸಿ ಎದ್ದು ನಿಲ್ಲಬೇಕು ಎಂದು ಅದು ಜನತೆಗೆ ಕರೆ ನೀಡಿದೆ. ಕೇರಳದ ಜನತೆ ರಾಜ್ಯದಲ್ಲಿ ಪರಸ್ಪರ ಕೈಜೋಡಿಸಿ ಕೆಲಸ ಮಾಡುತ್ತಿರುವ ಬಿಜೆಪಿ ಮತ್ತು ಯುಡಿಎಫ್‌ನ ಕುತಂತ್ರಗಳಿಗೆ ತಕ್ಕ ಉತ್ತರ ಕೊಡುತ್ತಾರೆ ಎಂಬ ವಿಶ್ವಾಸವನ್ನು ಪೊಲಿಟ್‌ಬ್ಯುರೊ ವ್ಯಕ್ತಪಡಿಸಿದೆ.

# ‘ನವಂಬರ್ 26 ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಮುನ್ನಡೆಯಿರಿ’

## ಕಾರ್ಮಿಕ ಸಂಘಗಳ ಜಂಟಿ ವೇದಿಕೆಯ ಕರೆ–ರೈತರ ನವಂಬರ್ 26–27 ಐಕ್ಯ ಚಳುವಳಿಗೆ ಸಮಸ್ತ ಬೆಂಬಲ

**ದೇಶ ಕಾರ್ಮಿಕರು ಮತ್ತು ರೈತರ ದೇಶವ್ಯಾಪಿ ಸಮರಧೀರ ಹೋರಾಟಗಳು ಒಟ್ಟುಗೂಡಿರುವುದನ್ನು ಕಾಣುತ್ತಿದೆ, ಜನ–ವಿರೋಧಿ ಕಾರ್ಮಿಕ–ವಿರೋಧಿ, ರಾಷ್ಟ್ರ–ವಿರೋಧಿ ವಿನಾಶಕಾರೀಧೋರಣೆಗಳ ವಿರುದ್ಧ ನವಂಬರ್ 26 ರ ಬೃಹತ್ ಮುಷ್ಕರ ಮತ್ತು ಜನವರಿ 26–27ರ ರೈತರ ‘ಚಕ್ಕಾ ಜಾಮ್’ (ರಸ್ತೆ ತಡೆ) ಮತ್ತು ‘ದಿಲ್ಲಿ ಚಲೋ’ ಸರಕಾರದ ಇಂತಹ ಧೋರಣೆಗಳಿಗೆ ಜನಗಳ ನಿರಾಕರಣೆ ಮತ್ತು ಅಸಹಕಾರದ ದಿಕ್ಕಿನಲ್ಲಿ ಜನಗಳ ತೀವ್ರ ಹೋರಾಟದ ಒಂದು ಹೊಸ ಹೆಜ್ಜೆಯ ಆರಂಭವನ್ನು ಸೂಚಿಸುತ್ತವೆ ಎಂದು ನವಂಬರ್ 16 ರಂದು ಸೇರಿದ ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ವಲಯವಾರು ಒಕ್ಕೂಟಗಳ, ಸಂಘಗಳ ಜಂಟಿ ಸಭೆ ಅಭಿಪ್ರಾಯ ಪಟ್ಟಿದೆ.**

ನವಂಬರ್ 26 ರ ಸಾರ್ವತ್ರಿಕ ಮುಷ್ಕರದ ಕರೆಗೆ, ಈ ಕುರಿತ ಪ್ರಚಾರಾಂದೋಲನಕ್ಕೆ ಕಾರ್ಮಿಕರಿಂದಲೂ, ಜನಗಳಿಂದಲೂ ಭಾರೀ ಸ್ಪಂದನ ದೊರೆಯುತ್ತಿದೆ ಎಂದು ಮುಷ್ಕರದ ಸಿದ್ಧತೆಯ ಪರಿಶೀಲನೆ ನಡೆಸಿದ ಜಂಟಿ ವೇದಿಕೆ ತೃಪ್ತಿ ವಕ್ತಪಡಿಸಿದೆ.

ಮೋದಿ ಸರಕಾರದ ವಿನಾಶಕಾರಿ ಧೋರಣೆಗಳ ವಿರುದ್ಧ ಈ ಸಾರ್ವತ್ರಿಕ ಮುಷ್ಕರದ ಸಿದ್ಧತಾ ಪ್ರಚಾರ ದೇಶಾದ್ಯಂತ ಹುರುಪಿನಿಂದ ಸಾಗಿದೆ. ರಾಜ್ಯ ಮಟ್ಟಗಳಲ್ಲಿ, ಜಿಲ್ಲಾ ಮತ್ತು ಸ್ಥಳೀಯ ಮಟ್ಟಗಳಲ್ಲಿ ಜಂಟಿ ಸಮಾವೇಶಗಳು ನಡೆಯುತ್ತಿವೆ, ಕಾರ್ಮಿಕ ಸಂಘಗಳು ಜಂಟಿಯಾಗಿಯೂ, ವಲಯುವಾರಾಗಿಯೂ, ಸ್ವತಂತ್ರವಾಗಿಯೂ ಪೋಸ್ಟರುಗಳು, ಕರಪತ್ರಗಳುಗಳನ್ನು ಹಂಚುತ್ತಿವೆ. ಮುಷ್ಕರ ನೋಟೀಸುಗಳನ್ನು ಕೊಟ್ಟಾಗಿದೆ. ಅಲ್ಲದೆ ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ರೈತರು, ಅವರ ಸಂಘಟನೆಗಳು ಸಾರ್ವತ್ರಿಕ ಮುಷ್ಕರಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಿವೆ ಎಂದು ಸಭೆಯ ನಂತರ ಜಂಟಿ ವೇದಿಕೆ ಪ್ರಕಟಿಸಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

ರೈತರ ಸಂಘಟನೆಗಳ ಐಕ್ಯ ವೇದಿಕೆಯಾದ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ (ಎಐಕೆಎಸ್‌ಸಿಸಿ) ಕಾರ್ಮಿಕರ ಸಾರ್ವತ್ರಿಕ ಮುಷ್ಕರಕ್ಕೆ ಸಂಪೂರ್ಣ ಹಾರ್ದಿಕ ಬೆಂಬಲ ನೀಡಿರುವುದನ್ನು ಸ್ವಾಗತಿಸಿದ ಜಂಟಿ ವೇದಿಕೆ, ಮೋದಿ ಸರಕಾರದ ಕರಾಳ ಕೃಷಿ ಶಾಸನಗಳ ವಿರುದ್ಧ ಸ್ವತಃ ತೀವ್ರ ಹೋರಾಟದಲ್ಲಿರುವ ರೈತರು ಕಾರ್ಮಿಕ–ವಿರೋಧಿ ಕ್ರಮಗಳ ವಿರುದ್ಧ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿರುವುದು ಸಂತೋಷ ತರುವ ವಿಷಯ ಎಂದಿದೆ.



ಕಾರ್ಮಿಕ ಸಂಘಗಳ ಜಂಟಿ ವೇದಿಕೆ ಆರಂಭದಿಂದಲೂ ಇತ್ತೀಚೆಗೆ ತಂದ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕೆಂಬ ರೈತರ ಬೇಡಿಕೆಗೆ ಸಕ್ರಿಯ ಬೆಂಬಲ ವ್ಯಕ್ತಪಡಿಸಿಕೊಂಡು ಬಂದಿದೆ, ಅದನ್ನು ನವಂಬರ್ 26ರ ಸಾರ್ವತ್ರಿಕ ಮುಷ್ಕರದ ಒಂದು ಪ್ರಮುಖ ಬೇಡಿಕೆಯಾಗಿಯೂ ಇಟ್ಟಿದೆ.

ನವಂಬರ್ 26–27ರಂದು ರೈತರು ನಡೆಸಲಿರುವ ದೇಶವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಗಳು ದಿಲ್ಲಿ ಚಲೋ ಕಾರ್ಯಕ್ರಮಕ್ಕೆ ಕೇಂದ್ರೀಯ ಕಾರ್ಮಿಕ ಸಂಘಗಳ ಜಂಟಿ ವೇದಿಕೆ ತನ್ನ ಸಕ್ರಿಯ ಬೆಂಬಲವನ್ನು ಪುನರುಚ್ಚರಿಸಿದೆ.

# ನವಂಬರ್ 26, 2020 ಗ್ರಾಮೀಣ ಹರತಾಳ–ಕಿಸಾನ್ ಸಭಾಗಳ ಜಂಟಿ ಕರೆ

## ಗ್ರಾಮ ಮಟ್ಟಗಳಲ್ಲಿ ‘ಚಕ್ಕಾ ಜಾಮ್’: ಹೋರಾಟಗಳಲ್ಲಿ ಕಾರ್ಮಿಕ–ರೈತ ಐಕ್ಯತೆ

ಕಾರ್ಮಿಕ ಸಂಘಗಳ ಸಾರ್ವತ್ರಿಕ ಮುಷ್ಕರದ ಐಕ್ಯ ಕರೆಗೆ ಸೌಹಾರ್ದವನ್ನು ವ್ಯಕ್ತಪಡಿಸುತ್ತ ನವಂಬರ್ 26ರಂದು ಗ್ರಾಮೀಣ ಹರತಾಳ ನಡೆಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ(ಅಜೊಯ್ ಭವನ) ಮತ್ತು ಅಖಿಲ ಬಾರತ ಕಿಸಾನ್ ಸಭಾ(ಪಂಡಿತ ಶುಕ್ಲಾ ಮಾರ್ಗ) ಜಂಟಿಯಾಗಿ ಎಲ್ಲ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಕರೆ ನೀಡಿವೆ. ಎರಡೂ ಎಐಕೆಎಸ್ ಸಂಘಟನೆಗಳ ಗ್ರಾಮ ಘಟಕಗಳು ಸೇರಿಕೊಂಡು ಅಂದು ಗ್ರಾಮ /ಬ್ಲಾಕ್ ಕೇಂದ್ರಗಳಲ್ಲಿ ‘ಚಕ್ಕಾಜಾಮ್’(ರಸ್ತೆ ತಡೆ) ನಡೆಸುತ್ತವೆ.

ಎರಡೂ ಎಐಕೆಎಸ್‌ಗಳ ಹರ್ಯಾಣ, ಪಂಜಾಬ್ ಮತ್ತು ಪಶ್ಚಿಮ ಉತ್ತರಪ್ರದೇಶದ ಘಟಕಗಳು ಎಐಕೆಸ್‌ಸಿಸಿಯ ‘ದಿಲ್ಲಿ ಚಲೋ’ ಕಾರ್ಯಕ್ರಮದಲ್ಲಿ ಭಾಗವಹಿಸುತ್ತವೆ. ಝರ್ಖಂಡ್‌ನ ಎಲ್ಲ ರೈತ ಸಂಘಟನೆಗಳು ನವಂಬರ್ 26 ರಂದು ಜಾಜ್ಯಪಾಲರ ನಿವಾಸಕ್ಕೆ ಮೆರವಣಿಗೆ ನಡೆಸುತ್ತವೆ, ನವಂಬರ್ 27 ರಂದು ಮನವಿ ಪತ್ರವನ್ನು ಸಲ್ಲಿಸುತ್ತವೆ.

ಗ್ರಾಮ ಮಟ್ಟದಲ್ಲಿ ಕರಪತ್ರ ಹಂಚಿಕೆ, ಸಮಾವೇಶಗಳು, ಸಾರ್ವಜನಿಕ ಸಭೆಗಳು, ಜೀಪ್/ಸೈಕಲ್/ಪಾದಯಾತ್ರೆಗಳ ಮೂಲಕ ಗ್ರಾಮೀಣ ಹರತಾಳ ಮತ್ತು ಸಾರ್ವತ್ರಿಕ ಮುಷ್ಕರದ ಸಂದೇಶವನ್ನು ಮತ್ತು ಕಾರ್ಪೊರೇಟ್–ಪರವಾದ ಮೂರು ಕೃಷಿ ಕಾಯ್ದೆಗಳನ್ನು ಹಾಗೂ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದುಮಾಡಬೇಕೆಂಬ ಬೇಡಿಕೆಯನ್ನು ಪಸರಿಸಲಾಗುತ್ತಿದೆ.

ಬಿಜೆಪಿ–ಆರೆಸ್ಸೆಸ್ ನೇತೃತ್ವದ ಕೇಂದ್ರ ಸರಕಾರ ನವ–ಉದಾರವಾದದ ಶಕ್ತಿಗಳ ಎದುರು ಮಂಡಿಯೂರಿ ಜನಸಾಮಾನ್ಯರ ಬದುಕನ್ನು ನರಕ ಮಾಡುತ್ತಿದೆ ಎಂಬ ಸಂದೇಶ ದೇಶದ ಮೂಲೆ–ಮೂಲೆಗೂ ತಲುಪುತ್ತಿದೆ.

**ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗಗಳ ಹೆಚ್ಚುತ್ತಿರುವ ಐಕ್ಯತೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ರೈತರ ಅತಿ ದೊಡ್ಡ ಐಕ್ಯವೇದಿಕೆಯಾದ ಎಐಕೆಎಸ್‌ಸಿಸಿ ಜಂಟಿಯಾಗಿ ನಡೆಸಿದ ಆಗಸ್ಟ್ 9ರ ಜೈಲ್ ಭರೋ ಆಂದೋಲನ ಮತ್ತು ಸಪ್ಟಂಬರ್ 25ರಂದು ಮೂರು ಕೃಷಿ ಮಸೂದೆಗಳ ವಿರುದ್ಧ ಅಖಿಲ ಭಾರತ ಪ್ರತಿಭಟನಾ ದಿನದಂದು ವ್ಯಕ್ತಗೊಂಡಿವೆ. ಹೋರಾಟದ ಪ್ರಸ್ತುತ ಘಟ್ಟ ಸದ್ಯದಲ್ಲೆ ಆರೆಸ್ಸೆಸ್–ಬಿಜೆಪಿ ಸರಕಾರದ ನವ–ಉದಾರವಾದ ಮತ್ತು ಕಾರ್ಪೊರೇಟ್–ಪ್ರೇರಿತ ಧೋರಣೆಗಳ ವಿರುದ್ದ ಒಂದು ದೇಶವ್ಯಾಪಿ, ಬಲಿಷ್ಟ ಮತ್ತು ಬೃಹತ್ ಸ್ವರೂಪದ ರೈತ–ಕಾರ್ಮಿಕ ಐಕ್ಯ ಆಂದೋಲನವಾಗಿ ಬೆಳೆಯುತ್ತದೆ ಎಂದು ಈ ಎರಡು ಸಂಘಟನೆಗಳು ಹೇಳಿವೆ.**

# ಕಾರ್ಮಿಕರ ಸಾರ್ವತ್ರಿಕ ಮುಷ್ಕರಕ್ಕೆ ಮತ್ತು ರೈತರ ದಿಲ್ಲಿ ಚಲೋಗೆ ಕೃಷಿ ಕಾರ್ಮಿಕರ ಬೆಂಬಲ

ಕೃಷಿ ಕಾರ್ಮಿಕರ ನಡುವೆ ಕೆಲಸ ಮಾಡುತ್ತಿರುವ ಐದು ಸಂಘಟನೆಗಳು ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ನವಂಬರ್ 26ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ ನೀಡಲು ಮತ್ತು ಅದರಲ್ಲಿ ಸಕ್ರಿಯವಾಗಿ ಭಾಗವಹಿಸಲು ನಿರ್ಧರಿಸಿವೆ. ಹಳ್ಳಿಗಳಲ್ಲಿ ಕೃಷಿ ಕಾರ್ಮಿಕರು ಗ್ರಾಮೀಣ ಮುಷ್ಕರವನ್ನು ನಡೆಸುತ್ತಾರೆ.

ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ಮೂರು ಕರಾಳ ಕೃಷಿ ಕಾಯ್ದೆಗಳ ವಿರುದ್ಧ ಕರೆ ನೀಡಿರುವ ‘ದಿಲ್ಲಿ ಚಲೋ’ದಲ್ಲೂ ಭಾಗವಹಿಸಲು ಅವು ನಿರ್ಧರಿಸಿವೆ.

ನವಂಬರ್ 18 ರಂದು ದಿಲ್ಲಿಯಲ್ಲಿ ಸೇರಿದ ಈ ಸಭೆಯಲ್ಲಿ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಭಾರತೀಯ ಖೇತ್ ಮಜ್ದೂರ್ ಯೂನಿಯನ್, ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಶ್ರಮಿಕರ ಸಂಘ, ಸಂಯುಕ್ತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಅಗ್ರಗಾಮೀ ಕೃಷಿ ಶ್ರಮಿಕ ಯೂನಿಯನ್ ಭಾಗವಹಿಸಿದ್ದವು

ಕೃಷಿ ಕಾರ್ಮಿಕರ ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ಧೋರಣೆಗಳೇ ಕಾರಣ. ಕನಿಷ್ಟ ಕೂಲಿ ಕಾನೂನುಗಳನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ, ಮನರೇಗದಲ್ಲಿ ಕೂಲಿಗಳ ಪಾವತಿ ವಿಳಂಬವಾಗುತ್ತಿದೆ, ಅಥವ ಕೊಡುತ್ತಲೇ ಇಲ್ಲ. ಸರಕಾರ ಕೊವಿಡ್ ಸೋಂಕಿನ ಮರೆಯಲ್ಲಿ ಸಾಮಾಜಿಕ ಇದ್ದ ಕಲ್ಯಾಣ ಯೋಜನೆಗಳನ್ನೂ ದುರ್ಬಲಗೊಳಿಸುತ್ತಿದೆ, ಕೃಷಿ ಕಾರ್ಮಿಕರಿಗೆ ಶೋಷಣೆಯಿಂದ ರಕ್ಷಣೆ ನೀಡುವ ಕಾನೂನೇ ಇಲ್ಲವಾಗಿದೆ. ಆದ್ದರಿಂದ ಕೃಷಿ ಕೂಲಿಕಾರರಿಗೆ ಒಂದು ಸಮಗ್ರ ಶಾಸನ ಅತ್ಯಗತ್ಯವಾಗಿದೆ.

ಮತ್ತೊಂದೆಡೆಯಲ್ಲಿ ಬಿಜೆಪಿಯು ಹಿಂದುತ್ವ ಅಜೆಂಡಾ ಕೋಮುವಾದಿ ಧ್ರುವೀಕರಣವನ್ನು ತರುತ್ತಿದೆಯಷ್ಟೇ ಅಲ್ಲ, ದಲಿತರ ಮೇಲೆ ಹಲ್ಲೆಗಳು ಹೆಚ್ಚುವಂತೆ ಮಾಡಿದೆ. ಬಿಜೆಪಿ ಸರಕಾರ ಹಲ್ಲೆಕೋರರ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಅವರಿಗೆ ರಕ್ಷಣೆ ನೀಡುತ್ತಿದೆ. ಇದು ಅಂಚಿಗೆ ತಳ್ಳಲ್ಪಟ್ಟಿರುವ ಜನಗಳ ಗೋಳನ್ನು ಮತ್ತಷ್ಟು ಹೆಚ್ಚಿಸಿವೆ.

ಈ ಹಿನ್ನೆಲೆಯಲ್ಲಿ ಈ **ಐದು ಕೃಷಿ ಕಾರ್ಮಿಕ ಸಂಘಟನೆಗಳು ಡಾ. ಅಂಬೇಡ್ಕರ್ ನಿಧನರಾದ ದಿನವಾದ ಡಿಸೆಂಬರ್ 6 ರಂದು ‘ಸಂವಿಧಾನ ಉಳಿಸಿ’ ದಿನಾಚರಣೆ ನಡೆಸಲು ನಿರ್ಧರಿಸಿವೆ.**

**ಮತ್ತು ಡಿಸೆಂಬರ್ 9 ರಂದು ದಲಿತ ಪ್ರಶ್ನೆಗಳು ಮತ್ತು ಜಾತಿ ಅತ್ಯಾಚಾರಗಳ ಪ್ರಶ್ನೆಯ ಮೇಲೆ ಅಖಿಲ ಭಾರತ ಸಮಾವೇಶವನ್ನು ನಡೆಸಲು ನಿರ್ಧರಿಸಿವೆ.**

ಸಂಪಾದಕೀಯ

# ಸಮುದಾಯಗಳ ಓಲೈಕೆಗೆ ನಿಯಮ/ಪ್ರಾಧಿಕಾರಿಗಳ ಸ್ಥಾಪನೆ

ಬಿಜೆಪಿ ಬತ್ತಳಿಕೆಯಲ್ಲಿನ ಚುನಾವಣಾ ಅಸ್ತ್ರಗಳು ಎಲ್ಲಾ ಖಾಲಿಯಾದಂತೆ ಕಾಣುತ್ತದೆ. 'ಆಪರೇಷನ್ ಕಮಲ' ದಂತಹ ಅಸ್ತ್ರಗಳು ದೂರದ ಪ್ರಯೋಗಕ್ಕೆ ಮೀಸಲಿಡುವುದು ಬಿಜೆಪಿಯ ಸಂಪ್ರದಾಯ. ಉಪ ಚುನಾವಣೆಗಳಲ್ಲಿ ಬಳಸಲು ಯಡಿಯೂರಪ್ಪ ಬೇರೆ ತಂತ್ರಗಳ ಹುಡುಕಾಟದಲ್ಲಿರುತ್ತಾರೆ. ಈಗ ಅವರು ಜಾತಿ ಆಧಾರಿತ ನಿಗಮ/ಪ್ರಾಧಿಕಾರಿಗಳನ್ನು ಸ್ಥಾಪಿಸಿ ನಿರ್ದಿಷ್ಟ ಸಮೂಹಗಳನ್ನು ಸೆಳೆಯುವ ಗಂಭೀರ ಪ್ರಯತ್ನದಲ್ಲಿ ಮುಳುಗಿದ್ದಾರೆ.

ಶಿರಾ ಮತ್ತು ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ಹತ್ತಿರ ಬಂದಾಗ 'ಕಾಡುಗೊಲ್ಲ ಅಭಿವೃದ್ಧಿ ನಿಗಮ' ಸ್ಥಾಪಿಸುವ ಆದೇಶವನ್ನು ಮುಖ್ಯಮಂತ್ರಿ ಯಡಿಯೂರಪ್ಪ ಪ್ರಕಟಿಸಿದರು. ಈಗ ಸುರೇಶ್ ಅಂಗಡಿ ಅವರ ನಿಧನದಿಂದ ತೆರವಾಗಿರುವ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಹತ್ತಿರ ಬಂದಿದೆ. ಮಸ್ಕಿ ಮತ್ತು ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯೂ ಶೀಘ್ರದಲ್ಲಿ ನಡೆಯಬೇಕಾಗಿದೆ. ಹೀಗಾಗಿ ಯಡಿಯೂರಪ್ಪನವರು ತಮ್ಮ ನಿಗಮ/ಪ್ರಾಧಿಕಾರಗಳ ಅಸ್ತ್ರಗಳನ್ನು ಧರಿಸಿಕೊಂಡು ಸಜ್ಜಾಗುತ್ತಿದ್ದಾರೆ.

ಚುನಾವಣೆ ನಡೆಯಬೇಕಾಗಿರುವ ಮೂರೂ ಕಡೆಗಳಲ್ಲಿ ಮರಾಠ ಸಮುದಾಯದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರು ಮರಾಠಿಗರು ಎನ್ನುವ ಕಾರಣಕ್ಕೆ ಗಡಿ ವಿವಾದ ಪ್ರಶ್ನೆಯನ್ನು ಗಣನೆಗೆ ತೆಗೆದುಕೊಂಡರೆ ಅಪಾಯವಿದೆ ಎಂಬುದು ತಂತ್ರಗಾರಿ ಯಡಿಯೂರಪ್ಪನ ಲೆಕ್ಕಚಾರ. ಅವರ ಮತಗಳನ್ನು ಗಣನೀಯ ಸಂಖ್ಯೆಯಲ್ಲಿ ಬುಟ್ಟಿಗೆ ಹಾಕಿಕೊಳ್ಳಲು ಅವರಿಗೊಂದು ಅಭಿವೃದ್ಧಿ ಪ್ರಾಧಿಕಾರ ದಾನ ಮಾಡಲು ಯಡಿಯೂರಪ್ಪ ಮುಂದಾಗಿದ್ದಾರೆ. ಇದರಿಂದಾಗಿ ಕನ್ನಡಪರ ಸಂಘಟನೆಗಳು ಆವೇಶಕ್ಕೆ ಒಳಗಾಗಿ ಬೀದಿಗಿಳಿಯುವ ಬೆದರಿಕೆ ಹಾಕಲಾರಂಭಿಸಿವೆ.

ಈ ಮೂರೂ ಕ್ಷೇತ್ರಗಳಲ್ಲಿ ವೀರಶೈವ ಲಿಂಗಾಯತರ ಪ್ರಾಬಲ್ಯವೂ ಗಣನೀಯವಾಗಿದೆ. ಇವರ ಮತಗಳನ್ನು ಖಾತ್ರಿ ಮಾಡಿಕೊಳ್ಳಲು ಮುಖ್ಯಮಂತ್ರಿ ಯಡಿಯೂರಪ್ಪ ವೀರಶೈವ ಅಭಿವೃದ್ಧಿ ನಿಗಮ ಸ್ಥಾಪನೆಗೆ ಆದೇಶ ಹೊರಡಿಸಿದ್ದಾರೆ. ಲಿಂಗಾಯತ ಧರ್ಮಕ್ಕಾಗಿ ಹೋರಾಡುತ್ತಿರುವ ಕೆಲವು ಮಠಾಧಿಪತಿಗಳು ನಿಗಮದ ಹೆಸರು 'ಲಿಂಗಾಯತ ಅಭಿವೃದ್ಧಿ ನಿಗಮ' ಎಂದಾಗಬೇಕು ಎಂದು ಒತ್ತಾಯಿಸಿದ್ದಾರೆ!.

ಮುಖ್ಯಮಂತ್ರಿ ಯಡಿಯೂರಪ್ಪನವರ ಈ ನಡೆ ಅವರಿಗೆ ಶೋಭೆ ತರಲಾರದು. ಚುನಾವಣೆಗಳಲ್ಲಿ ಮತಗಳನ್ನು ಗಿಟ್ಟಿಸಿಕೊಂಡು ಮತದಾರರಿಗೆ ದ್ರೋಹ ಎಸಗುವ ಈ ತಂತ್ರಗಾರಿಕೆ ಅಪೇಕ್ಷಣೀಯವಲ್ಲ. ಜಾತಿ ಆಧಾರಿತ ನಿಗಮ/ಪ್ರಾಧಿಕಾರಗಳಿಂದ ಯಾವುದೇ ಸಮುದಾಯ ಅಭಿವೃದ್ಧಿ ಹೊಂದಿಲ್ಲ. ಅಂತಹ ಜಾತಿ ಸಮುದಾಯಗಳ ಮುಖಂಡರು ಮಾತ್ರ ಇವುಗಳ ಲಾಭ ಪಡೆಯುತ್ತಾರೆ.

ನಮ್ಮ ಸಂವಿಧಾನದ ಆಶಯಗಳಂತೆ ಅಸ್ಪೃಶ್ಯರು ಎಂದು ಪರಿಗಣಿಸಲ್ಪಡುವ ಜನರಿಗಾಗಿ ಮಾತ್ರ ಮೀಸಲಾತಿ, ನಿಗಮ/ಪ್ರಾಧಿಕಾರಿಗಳ ಸೌಕರ್ಯ ಒದಗಿಸಬೇಕು. ಆ ಮೂಲಕ ಅವರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಬೇಕು. ಉಳಿದಂತೆ ಎಲ್ಲಾ ಜಾತಿಗಳಲ್ಲಿರುವ ಆರ್ಥಿಕವಾಗಿ ತೀರಾ ಹಿಂದುಳಿದ ಎಲ್ಲಾ ಸಮುದಾಯಗಳ ಜನತೆಗೆ ಮಾತ್ರ ಇಂತಹ ವಿಶೇಷ ನೆರವು ಯೋಜನೆಗಳನ್ನು ಅನ್ವಯಿಸಬೇಕು. ಜನಸಮೂಹಗಳಿಗೆ ಇಂತಹ ಆಸೆ ಆಮಿಷಗಳನ್ನು ವೊಡ್ಡಿ ಚುನಾವಣೆಗಳಲ್ಲಿ ಗೆಲ್ಲಲು ಪ್ರಯತ್ನಿಸುವವರನ್ನು ಅವರು ಯಾರೇ ಆಗಿರಲಿ, ಅವರಿಗೆ ಚುನಾವಣೆಗಳಲ್ಲಿ ಸ್ಪರ್ಧಿಸುವ ಅರ್ಹತೆಯನ್ನ ಕಿತ್ತುಹಾಕುವ ಕಾನೂನು ರಚನೆಯಾಗಬೇಕು. ಯಡಿಯೂರಪ್ಪ, ಮೋದಿ ಅಂತವರ ನಡೆಯ ಹಿಂದಿನ ಮೋಸವನ್ನು ಮತದಾರರು ಅರಿತುಕೊಳ್ಳಬೇಕು.

## ರಾಜ್ಯ ಹಾಗೂ ಜಿಲ್ಲೆಗಳ ವಿಭಜನೆ ಅಭಿವೃದ್ಧಿ ತರಲಿದೆಯೆಂಬುದು ವಂಚನೆ –ಸಿಪಿಐಎಂ

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕೈಯೊಳಗಿನ ಅಧಿಕಾರ ಹಾಗೂ ಸಂಪನ್ಮೂಲಗಳ ವಿಕೇಂದ್ರೀಕರಣವಾಗಿ ಸ್ಥಳೀಯ ಸಂಸ್ಥೆಗಳು ಬಲಗೊಳ್ಳದೇ ಅಭಿವೃದ್ಧಿಯೆಂಬುದು ಮರೀಚಿಕೆಯಾಗಿರುವಾಗ, ರಾಜ್ಯ ಹಾಗೂ ಜಿಲ್ಲೆಗಳ ವಿಭಜಿಸುವ ಮೂಲಕ ಅಭಿವೃದ್ಧಿ ಸಾಧ್ಯವೆಂದು ಹೇಳುವುದು ಒಂದು ದೊಡ್ಡ ಮೋಸವಾಗಿದೆ. ಇಂತಹ ನಡೆಯು ಜನತೆಗೆ ಮತ್ತಷ್ಟು ಹೊರೆಯಾಗ ಬಲ್ಲುದೇ ಹೊರತು, ಜನತೆಗೆ ಪೂರಕವಾಗದು ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ದ ರಾಜ್ಯ ಘಟಕ, ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಡೆಯನ್ನು ಖಂಡಿಸಿದೆ.

ಮೊನ್ನೆ ಮಂತ್ರಿಮಂಡಲದಲ್ಲಿ ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ ವಿಜಯನಗರ ಜಿಲ್ಲೆಯ ರಚನೆಯ ಕುರಿತ ಪ್ರಸ್ತಾಪದ ಹಿನ್ನೆಲೆಯಲ್ಲಿ ಸಿಪಿಐಎಂ ಈ ಕುರಿತು ತನ್ನ ಅಭಿಪ್ರಾಯ ನೀಡಿದೆ.

ಇಂತಹ ವಿಭಜನೆಯು, ಕೇವಲ ಭೂಮಾಲಕ–ಬಂಡವಾಳದಾರರಿಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಲೂ ಮತ್ತು ಹೊಸ ಜಿಲ್ಲೆಯ ಜಿಲ್ಲಾ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷರಾಗಲೂ ಮತ್ತು ಹೆಚ್ಚಿನ ಅಧಿಕಾರಿಗಳ ಹೊರೆಯನ್ನು ರಾಜ್ಯ ಬಜೆಟ್ ಮೇಲೆ ಹೇರಲು ಮಾತ್ರವೇ ನೆರವಾಗುತ್ತದೆ.

ಬದಲಿಗೆ, ಜನತೆಗೆ ಅಂತಹ ಪ್ರಯೋಜನವೇನು ಕಾಣದಾಗಿದೆ ಮತ್ತು ಜನತೆ ಹೆಚ್ಚುವರಿ ತೆರಿಗೆಯ ಹೊರೆಯನ್ನು ಹೊರ ಬೇಕಾಗುತ್ತದೆ.

ಜಿಲ್ಲೆಗಳ ಹಾಗೂ ಜನತೆಯ ನಿಜವಾದ ಅಭಿವೃದ್ಧಿಯ ಖಾಳಜಿ ಇದ್ದಲ್ಲಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ತಮ್ಮ ಬಳಿ ಕೇಂದ್ರೀಕರಿಸಲ್ಪಟ್ಟಿರುವ ಅಧಿಕಾರಗಳ ಮತ್ತು ಸಂಪನ್ಮೂಲಗಳನ್ನು ಸ್ಥಳೀಯ ಸಂಸ್ಥೆಗಳಾದ ಗ್ರಾಮ/ ಪಟ್ಟಣ ಪಂಚಾಯತ್ ಹಾಗೂ ಪುರಸಭೆ/ ನಗರಸಭೆಯಂತಹ ಸ್ಥಳೀಯ ಸಂಸ್ಥೆಗಳಿಗೆ ವಿಕೇಂದ್ರೀಕರಿಸಲಿ ಎಂದು ಸಿಪಿಐಎಂ ಒತ್ತಾಯಿಸುತ್ತದೆ.

ಈಗ ಈ ಸ್ಥಳೀಯ ಸಂಸ್ಥೆಗಳು ತಮ್ಮಲ್ಲಿ ಕಾರ್ಯ ನಿರ್ವಹಿಸುವ ಕೆಲಸಗಾರರಿಗೆ ಮಾಸಿಕ ವೇತನ ನೀಡಲಾಗದಷ್ಟು ದುರ್ಬಲವಾಗಿವೆ. ಇದಕ್ಕೂ ರಾಜ್ಯ ಹಾಗೂ ಕೇಂದ್ರ ಸರಕಾರದ ಕಡೆ ನೋಡ ಬೇಕಾಗಿದೆ. ಮನೆನಿವೇಶನ ಹಂಚಿಕೆಯಂತಹ ಫಲಾನುಭವಿಗಳ ಆಯ್ಕೆಯ ವಿಷಯವೂ ಶಾಸಕರ ಬಳಿಯಲ್ಲಿ ಉಳಿದಿದೆ.

ಪರಿಸ್ಥಿತಿ ಹೀಗಿರುವಾಗ, ರಾಜ್ಯ ಹಾಗೂ ಜಿಲ್ಲೆಗಳ ವಿಭಜನೆಯು ಆಡಳಿತ ಮತ್ತು ಅಭಿವೃದ್ಧಿಯನ್ನು ಜನರ ಬಳಿ ತರಬಲ್ಲದೆಂಬುದು ವಂಚನೆಯಾಗುತ್ತದೆ.

ಬಿಜೆಪಿಯೊಳಗೆ ಭುಗಿಲೆದ್ದಿರುವ ಅಸಮಾಧಾನವನ್ನು ಶಮನ ಮಾಡುವ ಮತ್ತು ಅಧಿಕಾರ ಉಳಿಸಿಕೊಳ್ಳುವ ಮತ್ತು ಹಂಚಿಕೊಳ್ಳುವ ಕುತಂತ್ರವೇ ಹೊರತು, ಇದು ಬೇರೇನೂ ಅಲ್ಲವೆಂದು ಸಿಪಿಐಎಂ ಕಟುವಾಗಿ ಟೀಕಿಸಿದೆ.

*ಯು. ಬಸವರಾಜ,*
*ಕಾರ್ಯದರ್ಶಿ, 20-11-2020*

## 26 ರಂದು ಕಾರ್ಮಿಕರ ಸಂಘಟನೆಗಳ ಜಂಟಿ ಸಮಿತಿಯಿಂದ ಪ್ರತಿಭಟನಾ ಮೆರವಣಿಗೆ

**ಕೊರೋನಾ ಸಾಂಕ್ರಾಮಿಕ ರೋಗದಿಂದ ದೇಶದಲ್ಲಿ ಅನಿರೀಕ್ಷಿತವಾಗಿ ಉಂಟಾದ ಲಾಕ್ ಡೌನ್ ಅನೇಕ ಸಂಕಷ್ಟಗಳನ್ನು ತಂದೊಡ್ಡಿದೆ. ಮೊದಲೇ ಸಂಕಷ್ಟದಲ್ಲಿದ್ದ ಕಾರ್ಮಿಕರು, ರೈತರು, ಇನ್ನಷ್ಟು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಇದರ ಬೆನ್ನಲ್ಲೆ ಸರಕಾರ ಅಪಾಯಕಾರಿ ಕೃಷಿ ಮಸೂದೆಗಳನ್ನು, ಹಾಗೂ ಕಾರ್ಮಿಕ ಸಂಹಿತೆಗಳನ್ನು ತಂದ ಪರಿಣಾಮದಿಂದ ಕಾರ್ಮಿಕರ ಹಾಗೂ ರೈತರ ಗೋಳು ಹೇಳತೀರದಾಗಿದೆ ಎಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಜೆಸಿಟಿಯು ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿರುದ್ಧ ಆಕ್ರೋಶವನ್ನು ಹೊರಹಾಕಿವೆ.**




ಭಾರತದ ಕಾರ್ಮಿಕರು ನವ ಉದಾರವಾದಿ ಧೋರಣೆಗಳ ವಿರುದ್ಧ ಇದೇ 26 ರಂದು ಸಾರ್ವತ್ರಿಕ ಮುಷ್ಕರದ ತಯಾರಿ ನಡೆಸಿದ್ದು ಇದರ ಭಾಗವಾಗಿ ಇಂದು ಬೆಂಗಳೂರಿನ ಗಾಂಧಿಭವನದಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ಬೃಹತ್ ಹೋರಾಟಕ್ಕೆ ಸಿದ್ದತೆ ಭಾಗವಾಗಿ ಪತ್ರಿಕಾ ಗೋಷ್ಠಿಯನ್ನು ನಡೆಸಿದರು.

ಕೇಂದ್ರ ಸರ್ಕಾರವು ಯಾವುದೇ ಕಾನೂನುಗಳನ್ನು ಜಾರಿಗೊಳಿಸುವ ಮೊದಲು ಅದಕ್ಕೆ ಸಂಬಂಧಪಟ್ಟ ಸಮುದಾಯದವರ ಜೊತೆ ಚರ್ಚಿಸಿ, ಸಮಾಲೋಚಿಸಿ ಅವರಿಂದ ಬರುವ ಸಲಹೆ ತಿದ್ದುಪಡಿ ಮತ್ತು ವಿಚಾರಗಳನ್ನು ಪರಿಗಣಿಸುವುದು ಪ್ರಜಾತಾಂತ್ರಿಕ ರೂಡಿ. ಈ ನೀತಿಯನ್ನು ಗಾಳಿಗೆ ತೂರಿ ಸರ್ವಾಧಿಕಾರ ಪ್ರವೃತ್ತಿಯನ್ನು ಪಾಲಿಸುತ್ತಿರುವ ಸರ್ಕಾರದ ನೀತಿಯನ್ನು ವಿರೋಧಿಸಿ ಕಾರ್ಮಿಕರ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ನಗರದ ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್ ವರೆಗೆ ಸಾರ್ವತ್ರಿಕ ಮುಷ್ಕರ ಪ್ರತಿಭಟನಾ ಮೆರವಣಿಗೆ ನಡೆಸಲಿದೆ ಎಂದು ಸಿಐಟಿಯುನ ರಾಜ್ಯಾಧ್ಯಕ್ಷರಾದ ಎಸ್ ವರಲಕ್ಷ್ಮಿ ಹೇಳಿದರು.

ಕೊರೋನಾ ಸಾಂಕ್ರಾಮಿಕ ರೋಗದಿಂದ ದೇಶದಲ್ಲಿ ಅನಿರೀಕ್ಷಿತವಾಗಿ ಲಾಕ್‌ಡೌನ್ ಮಾಡಲಾಯಿತು. ಮೊದಲೇ ಸಂಕಷ್ಟದಲ್ಲಿರುವ ಕಾರ್ಮಿಕರ ಹಿತವನ್ನು ಕಾಪಾಡುವ ಬದಲಿಗೆ

ಪುಟ 4 ಕ್ಕೆ

# ರೈತ ಕಾರ್ಮಿಕ ಪ್ರತಿಭಟನೆ ಬೆಂಬಲಿಸಿ ದ.ಕ. ಜಿಲ್ಲಾ ರೈತ ಜಾಥಾ

ವರದಿ: **ವಾ.ಉ.**

ಕರಾವಳಿ ಕಡಲ ಕರೆ

ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಹಾಗೂ ಅಖಿಲ ಭಾರತ ಕಾರ್ಮಿಕ ಹಾಗೂ ನೌಕರ ಸಂಘಟನೆಗಳ ಒಕ್ಕೂಟ ನವಂಬರ್ 26, 27 ರಂದು ನಡೆಸಲಿರುವ 'ದೆಹಲಿ ಚಲೋ' ಮತ್ತು ಅಖಿಲ ಭಾರತ ಕಾರ್ಮಿಕ ಮುಷ್ಕರಕ್ಕೆ ಬೆಂಬಲವಾಗಿ ದ.ಕ.ಜಿಲ್ಲಾ ರೈತ ದಲಿತ ಕಾರ್ಮಿಕ ಜನಪರ ಚಳುವಳಿಗಳ ಒಕ್ಕೂಟದ ನೇತೃತ್ವದಲ್ಲಿ ನವಂಬರ್ 18 ರಿಂದ ನವಂಬರ್ 23ರ ವರೆಗೆ ನಡೆಯಲಿರುವ ಜಿಲ್ಲಾ ರೈತ ಜಾಥಾ ಸುಳ್ಯ ತಾಲೂಕು ಕಲ್ಲುಗುಂಡಿಯಿಂದ ಮಂಗಳೂರಿನವರೆಗೆ ವಾಹನ ಜಾಥಾ ಮೂಲಕ ಸಾಗಿ ಹೋಗಲಿದೆ.

ಮಾಜಿ ವಿಧಾನ ಪರಿಷತ್ ಸದಸ್ಯರೂ ಪ್ರಬುದ್ಧ ಚಿಂತಕರೂ ಆದ ಅಣ್ಣಾ ವಿನಯಚಂದ್ರ ಅವರು ಕಲ್ಲುಗುಂಡಿಯಲ್ಲಿ ಜಾಥಾವನ್ನು ಉದ್ಘಾಟಿಸಿದರು. ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನುಷ್ಠಾನಕ್ಕೆ ತರಲು ಮುಂದಾಗಿರುವ ರೈತ ವಿರೋಧಿ ಕಾರ್ಮಿಕ ವಿರೋಧಿ ಮಸೂದೆಗಳನ್ನು ಹಿಂತೆಗೆದು, ಭಾರತೀಯ ಕೃಷಿ ಪರಂಪರೆ ಹಾಗೂ ಸಂಪತ್ತನ್ನು ಉಳಿಸಲು ರೈತ ಕಾರ್ಮಿಕ ಸಂಘಟನೆಗಳು ವಾಹನ ಜಾಥಾ ಮೂಲಕ ಜನರನ್ನು ಜಾಗೃತಿಗೊಳಿಸುವ ಪ್ರಯತ್ನ ನಡೆಸುತ್ತಿರುವುದನ್ನುಅವರು ಶ್ಲಾಘಿಸಿ ಮಾತನಾಡಿದರು. ಕೊರೋನಾ ಸಂಕಟದ ಸಂದರ್ಭದಲ್ಲಿ ಕೇಂದ್ರ ರಾಜ್ಯ ಸರಕಾರಗಳು ಮಂಡಿಸಿರುವ ಮಸೂದೆಗಳು ಹಾಗೂ ಸುಗ್ರೀವಾಜ್ಞೆಗಳು ದೇಶೀಯ ರೈತರು, ರೈತರು, ಕಾರ್ಮಿಕರು ಹಾಗೂ ಸಾಮಾನ್ಯ ಜನತೆಯ ಮೇಲೆ ಬಲವಾದ ದುಷ್ಪರಿಣಾಮವನ್ನು ಬೀರಲಿದೆ ಹಾಗೂ ದೇಶೀಯ ಸಂಪತ್ತು ಕಾರ್ಪರೇಟ್ ಕಂಪನಿಗಳ ಸಾಧ್ಯತೆಗಳು ಎದ್ದು ಕಾಣುತ್ತಿವೆ ಎಂದವರು ಎಚ್ಚರಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಸಿರುಸೇನೆ, ಕರ್ನಾಟಕ ಪ್ರಾಂತ ರೈತ ಸಂಘ, ಸಿಐಟಿಯು, ಎಐಟಿಯುಸಿ, ದಸಂಸ (ಅಂಬೇಡ್ಕರ್‌ವಾದ), ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ), ದಲಿತ ಹಕ್ಕುಗಳ ಸಮಿತಿ, ದ.ಕ.ಜಿಲ್ಲಾ ದಲಿತ ಸೇವಾ ಸಮಿತಿಗಳು ಒಗ್ಗೂಡಿ ದ.ಕ.ಜಿಲ್ಲಾ ರೈತ ದಲಿತ ಕಾರ್ಮಿಕ ಜನಪರ ಚಳುವಳಿಗಳ ಒಕ್ಕೂಟವನ್ನು ರಚಿಸಿಕೊಂಡಿದ್ದು, ಈ ಒಕ್ಕೂಟ ಈ 6 ದಿನಗಳ ಜಿಲ್ಲಾ ರೈತ ವಾಹನ ಜಾಥಾವನ್ನು ಹಮ್ಮಿಕೊಂಡಿದೆ. ಈ ಒಕ್ಕೂಟದ ಮೂಲಕ ದ.ಕ.ಜಿಲ್ಲೆಯಲ್ಲಿ ಸಪ್ಟೆಂಬರ್ 25 ರಂದು, ಸಪ್ಟೆಂಬರ್ 28 ರಂದು ಹಾಗೂ ಅಕ್ಟೋಬರ 2 ರಂದು ರಸ್ತೆ ತಡೆ, ಕರ್ನಾಟಕ ಬಂದ್ ಮತ್ತು ಧರಣಿ ಸತ್ಯಾಗ್ರಹವನ್ನು ಅನುಕ್ರಮವಾಗಿ ಯಶಸ್ವಿಯಾಗಿ ನಡೆಸಲಾಗಿತ್ತು. ಅದಕ್ಕೂ ಹಿಂದೆ ಸಪ್ಟೆಂಬರ್ 11 ರಂದು ಬಿ.ಸಿ.ರೋಡಿನಲ್ಲಿ ದೊಡ್ಡಮಟ್ಟದ ಸಮಾವೇಶ ಹಾಗೂ ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳಲಾಗಿದ್ದು, ಅದರಲ್ಲಿ ದಿ.ಮಾರುತಿ ಮಾನ್ಪಡೆ ಮತ್ತಿತರರು ಭಾಗವಹಿಸಿದ್ದನ್ನು ನೆನಪಿಸಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲಾ ವಾಹನ ಜಾಥಾ ಸಾಗುವ 24 ಕಡೆಗಳಲ್ಲಿ ಸ್ವಾಗತ ಸಮಿತಿಗಳನ್ನು ರಚಿಸಲಾಗಿದ್ದು ಕೆಲವೆಡೆ ಹಿತೈಷಿಗಳಾದ ಸ್ವಾಗತಕಾರರನ್ನು ಗುರುತಿಸಲಾಗಿತ್ತು. ಹೀಗಾಗಿ ಜಾಥಾ ಸಾಗುವ ಎಲ್ಲಾ 8 ವಿಧಾನಸಭಾ ಕ್ಷೇತ್ರಗಳಲ್ಲಿ ಜಾಥಾ ಅಡೆತಡೆಗಳಿಲ್ಲದೆ ಸಾಗಲು ಜನತೆಯಿಂದ ಒಳ್ಳೆಯ ಸಹಕಾರ ಪಡೆಯುತ್ತಿದೆ. ಸಾಮಾನ್ಯವಾಗಿ ಪುರೋಗಾಮಿ ಜಾಥಾಗಳ ಕಡೆಗೆ ಕೆಂಗಣ್ಣು ನೋಟ ಬೀರುವ ಕೋಮುವಾದಿಗಳು ಕೂಡಾ ತಣ್ಣನೆಯ ವೀಕ್ಷಕರಾಗುತ್ತಿರುವುದು ಗಮನಿಸಬೇಕಾದ ವಿದ್ಯಾಮಾನವಾಗಿದೆ.



ಮೊದಲೆರಡು ದಿನ ಜಾಥಾ ಸಾಗಿದ ದೊಡ್ಡ ಪಟ್ಟಣಗಳಾದ ಸುಳ್ಯ, ಬೆಳ್ಳಾರೆ, ಪುತ್ತೂರು, ಉಪ್ಪಿನಂಗಡಿ, ಕಡಬ, ನೆಲ್ಯಾಡಿಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕರ್ನಾಟಕ ಪ್ರಾಂತ ರೈತ ಸಂಘದ ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ವಾಸುದೇವ ಉಚ್ಚಿಲ, ಸಿಐಟಿಯು ಸಂಘಟನೆಯ ಜೆ.ಬಾಲಕೃಷ್ಣ ಶೆಟ್ಟಿ, ಕೆ.ಪಿ.ಜಾನಿ ಸುಳ್ಯ, ರಾಮಣ್ಣ ವಿಟ್ಲ, ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ, ದ.ಕ.ಜಿಲ್ಲಾ ಮುಖ್ಯಸ್ಥರಾದ ಓಸ್ವಾಲ್ಡ್ ಪ್ರಕಾಶ್ ಫೆರ್ನಾಂಡಿಸ್, ಶ್ರೀಧರ ಶೆಟ್ಟಿ ಬೈಲಗುತ್ತು, ಸುರೇಶ್ ಭಟ್ ಕೊಜಂಬೆ ಮತ್ತು ರಾಜ್ಯ ರೈತ ಸಂಘದ ಹಸಿರುಸೇನೆಯ ತಾಲೂಕು ಸಂಚಾಲಕರು ಜಾಥಾದೊಂದಿಗೆ ಹೆಚ್ಚಿಗೆ ಭಾಗವಹಿಸಿ, ಬಹಿರಂಗ ಸಭೆಗಳಲ್ಲಿ ದೇಶದ ರೈತ ಕಾರ್ಮಿಕರ ಸದ್ಯದ ದುಸ್ಥಿತಿಗೆ ಕಾರಣಗಳನ್ನು ವಿವರಿಸಿದರು. ಹಾಗೂ ಅದರ ವಿರುದ್ಧ ಹೋರಾಟಕ್ಕೆ ಸಿದ್ಧರಾಗಲು ಕರೆ ಕೊಟ್ಟರು.

ಕಟ್ಟಡ ಕಾರ್ಮಿಕ ಸಂಘಟನೆಯ ಸದಸ್ಯರು, ಬೀಡಿ ಕಾರ್ಮಿಕ ಸಂಘಟನೆಯ ಸದಸ್ಯರು, ರೈತ ಸಂಘಗಳ ಸದಸ್ಯರು ತಾವಿರುವ ಪ್ರದೇಶಗಳಲ್ಲಿ ಬಹಿರಂಗ ಸಭೆಗಳಲ್ಲಿ ಭಾಗವಹಿಸಿರುತ್ತಾರೆ.

# ದ.ಕ.ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಾರ್ಮಿಕ ಸಂಘಗಳ ಒಕ್ಕೂಟದ ಸಮಾವೇಶಗಳು:

ಕೇಂದ್ರ ಮತ್ತು ರಾಜ್ಯ ಸರಕಾರಗಳ ರೈತ ವಿರೋಧಿ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಕೇಂದ್ರ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ನವಂಬರ್ 26 ರಂದು ನಡೆಯಲಿರುವ ಅಖಿಲ ಭಾರತ ಮುಷ್ಕರವನ್ನು ಯಶಸ್ವಿಗೊಳಿಸಲು ಜಿಲ್ಲಾ ಮಟ್ಟದ ಕಾರ್ಮಿಕ ಸಂಘಟನೆಗಳ ಒಕ್ಕೂಟ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಮಾವೇಶಗಳನ್ನು ನಡೆಸಿದೆ.

ಮಂಗಳೂರಿನಲ್ಲಿ ನವಂಬರ್ 11 ರಂದು ನಡೆದ ಸಮಾವೇಶದಲ್ಲಿ ಸಿಐಟಿಯು ದ.ಕ.ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಎಐಟಿಯುಸಿ ಜಿಲ್ಲಾ ಮುಖಂಡ ಸೀತಾರಾಮ ಬೇರಿಂಜೆ, ಬ್ಯಾಂಕ್ ನೌಕರರ ಎಐಬಿಇಎ ಸಂಘಟನೆಯ ಮುಖಂಡ ವಿನ್ಸೆಂಟ್ ಡಿಸೋಜ, ಜೀವವಿಮಾ ನೌಕರರ ಎಐಐಇಎ ಸಂಘಟನೆಯ ಎಚ್.ಕೆ.ರಾಘವೇಂದ್ರ ರಾವ್, ಕೆಎಸ್‌ಆರ್‌ಟಿಸಿ ಸಂಘಟನೆಯ ಪ್ರವೀಣ್‌ಕುಮಾರ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಜೆಸಿಟಿಯು ಸಂಚಾಲಕ ಎಐಟಿಯುಸಿಯ ಎಚ್.ವಿ.ರಾವ್, ಸಿಐಟಿಯುವಿನ ಸುನಿಲ್ ಕುಮಾರ್ ಬಜಾಲ್, ಎಐಸಿಸಿಟಿಯು ಜಿಲ್ಲಾ ಮುಖಂಡ ಪ್ರವೀಣ್ ಕುಮಾರ್ ಮತ್ತು ಎಐಟಿಯುಸಿಯ ಬಿ.ಶೇಖರ್ ಸಮಾವೇಶವನ್ನು ನಡೆಸಿಕೊಟ್ಟರು.

ನವಂಬರ್ 17 ರಂದು ಉಡುಪಿಯಲ್ಲಿ ನಡೆದ ಕಾರ್ಮಿಕ ಸಂಘಗಳ ಒಕ್ಕೂಟದ ಜಿಲ್ಲಾ ಸಮಾವೇಶದಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಕೆ.ಶಂಕರ್ ರಾಷ್ಟ್ರೀಯ ಕಾರ್ಮಿಕ ಸಂಘಗಳ ಒಕ್ಕೂಟದ ಘೋಷಣೆಯನ್ನು ಮಂಡಿಸಿದರು. ಸಮಾವೇಶವನ್ನುದ್ದೇಶಿಸಿ ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಎಐಟಿಯುಸಿ ಮುಖಂಡ ಬಿ.ಶೇಖರ್, ಜೀವ ವಿಮಾ ನೌಕರರ ಎಐಐಇಎ ವಲಯ ಪ್ರಧಾನ ಕಾರ್ಯದರ್ಶಿ ಪ್ರಭಾಕರ ಕುಂದರ್, ಬ್ಯಾಂಕ್ ನೌಕರರ ಎಐಬಿಎ ಮುಖಂಡ ರಮೇಶ್, ಬ್ಯಾಂಕ್ ನೌಕರರ ಬಿಇಎಫ್‌ಐ ಮುಖಂಡ ಬಿ.ಎಂ.ಮಾಧವ ಮಾತನಾಡಿದರು. ವಿಮಾ ನೌಕರರ ಸಂಘದ ವಲಯ ಅಧ್ಯಕ್ಷ ಕೆ.ವಿಶ್ವನಾಥ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಮುಖಂಡ ಸುರೇಶ್ ಕಲ್ಲಾಗರ ವಂದನೆ ಸಲ್ಲಿಸಿದರು.

## 26 ರಂದು ಕಾರ್ಮಿಕರ ಸಂಘಟನೆಗಳ ಜಂಟಿ ಸಮಿತಿಯಿಂದ ಪ್ರತಿಭಟನಾ ಮೆರವಣಿಗೆ.......... ಪುಟ 4 ರಿಂದ

ಮತ್ತಷ್ಟು ಸಂಕಷ್ಟ ಮಾತ್ರವಲ್ಲ ದೇಶದ ಆರ್ಥಿಕ ಸಾರ್ವಭೌಮತೆಗೆ ಧಕ್ಕೆ ತರುವ ಮತ್ತು ಅನ್ನದಾತ ರೈತ, ಸಂಪತ್ತನ್ನು ಸೃಷ್ಟಿಸುವ ಶ್ರಮಿಕನನ್ನು ಪೂರ್ಣ ಗುಲಾಮಗಿರಿಗೆ ತಳ್ಳುವ ಕೇಂದ್ರದ ಸರ್ವಾಧಿಕಾರಿ ವರ್ತನೆ ಮಾಡುತ್ತಿರುವ ಪ್ರಭುತ್ವದ ವಿರುದ್ದ ದೇಶದಲ್ಲಿರುವ ಎಲ್ಲ ದೇಶ ಪ್ರೇಮಿ ಕಾರ್ಮಿಕ ಸಂಘಟನೆಗಳು, ಸ್ವತಂತ್ರ ಸಂಘಟನೆಗಳು ಎಲ್‌ಐಸಿ, ಬ್ಯಾಂಕ್, ರಕ್ಷಣಾ ವಲಯ, ರೈಲ್ವೆ, ಬಿಎಸ್‌ಎನ್‌ಎಲ್, ರಾಜ್ಯ ಮತ್ತು ಕೇಂದ್ರ ಸೇವೆ ಮುಂತಾದ ಅಖಿಲ ಭಾರತ ಸಂಘಟನೆಗಳು,ಕಾರ್ಮಿಕರು, ನೌಕರರು ಅಸಂಘಟಿತ ಕ್ಷೇತ್ರದ ಕಾರ್ಮಿಕರಾದ ಕಟ್ಟಡ, ಹಮಾಲಿ, ಬೀಡಿ, ತೋಟಗಾರಿಕೆ, ಗುತ್ತಿಗೆ ಕಾರ್ಮಿಕರು, ಪಂಚಾಯ್ತಿ ನೌಕರರು, ಬೀದಿ ಬದಿ ವ್ಯಾಪಾರಸ್ಥರು, ಮನೆಕೆಲಸಗಾರರು, ಆಟೋ, ಟ್ಯಾಕ್ಸಿ, ಸಾರಿಗೆಯಲ್ಲಿ ಕಾರ್ಯನಿರ್ವಹಿಸುವ ನೌಕರರು, ಅಂಗನವಾಡಿ, ಬಿಸಿಯೂಟ, ಆಶಾ, ನೌಕರರು ಮತ್ತು ವಿದ್ಯಾರ್ಥಿ, ಯುವಜನ, ಮಹಿಳಾ, ರೈತ ಸಂಘಟನೆಗಳು ಜೊತೆಗೂಡಿ ಭಾರತದ ಸಂವಿಧಾನದ ಸಂಸ್ಥಾಪನ ದಿನವಾದ ನವೆಂಬರ್ 26 ರಂದು ಸಂವಿಧಾನಿಕ ಹಕ್ಕುಗಳಿಗಾಗಿ ಪ್ರತಿರೋಧವನ್ನು ವ್ಯಕ್ತ ಮಾಡಲಾಗುತ್ತಿದೆ ಎಂದು ಟಿಯುಸಿಸಿ ಮುಖಂಡರಾದ ಶಿವಶಂಕರ್ ತಿಳಿಸಿದ್ದಾರೆ.

ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ಸಮಿತಿಯು ಶ್ರೀ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಕಾರ್ಮಿ–ವಿರೋಧಿ, ರೈತ–ವಿರೋಧಿ ಮತ್ತು ರಾಷ್ಟ್ರ ವಿರೋಧಿ ಎಂದು ಬಲವಾಗಿ ಖಂಡಿಸುತ್ತದೆ. ಕಾರ್ಮಿಕರ ಮತ್ತು ದುಡಿಯುವ ಜನರ ವಿವಿಧ ವಿಬಾಗಗಳು ತಮ್ಮ ಕಷ್ಟಾರ್ಜಿತ ಹಕ್ಕುಗಳು ಮತ್ತು ಸೌಲಭ್ಯಗಳ ಮೇಲೆ, ಅವರ ಜೀವನ ಮತ್ತು ಜೀವನ ಪರಿಸ್ಥಿತಿಗಳ ಮೇಲೆ ನಡೆಸುತ್ತಿರುವ ಈ ದಾಳಿಗಳ ವಿರುದ್ಧ ಇನ್ನೂ ಹೆಚ್ಚಿನ ಮಟ್ಟದಲ್ಲಿ ಹೋರಾಟಗಳನ್ನು ಸಂಘಟಿಸಿ ಮುನ್ನಡೆಸುವ ಅವಶ್ಯಕತೆ ಇದೆ ಎಂದು ಎಐಯುಟಿಯುಸಿ ಮುಖಂಡರಾದ ಕೆ.ವಿ.ಭಟ್ ಹೇಳಿದರು.

ದುಡಿಯುವ ಜನರು, ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರೆಲ್ಲರೂ ಒಗ್ಗಟ್ಟಾಗಿ ನವೆಂಬರ್ 26ರ ಅಖಿಲ ಭಾರತ ಮುಷ್ಕರವನ್ನು ಯಶಸ್ವಿಗೊಳಿಸಬೇಕೆಂದು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಕರೆಯನ್ನು ನೀಡಿದೆ.

ಈ ಪ್ರತಿಕಾ ಗೋಷ್ಠಿಯಲ್ಲಿ ಎಐಟಿಯುಸಿ ಯ ಮುಖಂಡರಾದ ವಿಜಯ ಭಾಸ್ಕರ್, ಹೆಚ್‌ಎಮ್ ಎಸ್ ನ ನಾಗನಾಥ್, ಎಐಸಿಸಿಟಿಯು ಮುಖಂಡರಾದ ಅಪ್ಪಣ್ಣ, ಹೆಚ್ ಎಮ್ ಕೆಪಿ ಯ ಮುಖಂಡರಾದ ಎಲ್.ಕಾಳಪ್ಪ ಭಾಗವಹಿಸಿದ್ದರು.

# ಟೊಯೋಟಾ ಕಿರ್ಲೋಸ್ಕರ್ ಕಾರ್ಮಿಕರ ಧರಣಿ

**ಬಿಡದಿ ಬಳಿ ಇರುವ ಟೊಯೋಟಾ ಕಿರ್ಲೋಸ್ಕರ್ ಕಂಪನಿಯ ಕಾರ್ಮಿಕ ವಿರೋಧಿ ನೀತಿ ಖಂಡಿಸಿ ಕಾರ್ಮಿಕರು ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿ 12ನೇ ದಿನಕ್ಕೆ ಕಾಲಿಟ್ಟಿದೆ. ಕಂಪನಿಯ ಮ್ಯಾನೇಜ್ಮೆಂಟ್ ಹಾಗೂ ಕಾರ್ಖಾನೆ ನೌಕರರ ನಡುವೆ ಉಲ್ಬಣಗೊಂಡಿರುವ ಸಮಸ್ಯೆ ತಾರಕಕ್ಕೇರಿದ್ದರೂ, ಸರ್ಕಾರ ಮಾತ್ರ ಇನ್ನು ಮಧ್ಯ ಪ್ರವೇಶ ಮಾಡದೆ ನಿರಾಸಕ್ತಿ ತೋರುತ್ತಿರುವುದು ನೌಕರರ ಆಕ್ರೋಶವನ್ನು ಹೆಚ್ಚಿಸುತ್ತಿದೆ.**



ಆಡಳಿತ ಮಂಡಳಿಯ ದೌರ್ಜನ್ಯದ ವಿರುದ್ಧ ಪ್ರತಿಭಟಿಸುತ್ತಿರುವ ಕಂಪನಿಯ ಸುಮಾರು 3500 ಕಾರ್ಮಿಕರು ಅಹೋರಾತ್ರಿ ಧರಣಿ ಕುಳಿತಿದ್ದಾರೆ. ಕೋವಿಡ್–19 ಆರಂಭದಿಂದಲೂ ಕಂಪನಿ ಕಾರ್ಮಿಕರನ್ನು ಪಶುಗಳಂತೆ ನಡೆಸಿಕೊಳ್ಳುತ್ತಿದೆ. ಕೆಲಸ ಮಾಡಲು ಅಸಾಧ್ಯವಾದ ರೀತಿಯಲ್ಲಿ ಕಾರ್ಮಿಕರ ಮೇಲೆ ಒತ್ತಡ ಹೇರಿ, ಮಾನಸಿಕವಾಗಿ, ದೈಹಿಕವಾಗಿ ಹಿಂಸಿಸಿ ದುಡಿಸಿಕೊಳ್ಳುತ್ತಿದೆ ಎಂದು ಕಾರ್ಮಿಕರು ಆರೋಪಿಸುತ್ತಿದ್ದಾರೆ. ಹೋರಾಟವನ್ನು ಹತ್ತಿಕ್ಕುವುದಕ್ಕಾಗಿ ಹಲವು ಕಾರ್ಮಿಕರನ್ನು ಅಮಾನತ್ತು ಮಾಡಲಾಗಿದೆ. ಅಮಾನತ್ತನ್ನು ವಾಪಸ್ಸ ಪಡೆಯಬೇಕು ಹಾಗೂ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಕಾರ್ಮಿಕರು ಆಗ್ರಹಿಸುತ್ತಿದ್ದಾರೆ.

ಕಾರ್ಮಿಕರ ಬೇಡಿಕೆಗಳೇನು? ಅವೈಜ್ಞಾನಿಕವಾಗಿ ಕೆಲಸವನ್ನು ನಿಗದಿ ಮಾಡುವ ಮೂಲಕ ಹೆಚ್ಚುವರಿ ಹೊರೆ ಹಾಕಲಾಗುತ್ತಿದೆ. ಕೆಲಸದ ನಿರ್ವಹಣೆಗೆ ಅನಗತ್ಯ ಒತ್ತಡ ಹೇರಲಾಗುತ್ತಿದೆ. ಕೆಲಬಾರಿ 48 ಗಂಟೆಗಳ ಕಾಲ ಕೆಲಸವನ್ನು ಮಾಡಿಸಿಕೊಳ್ಳುತ್ತಾರೆ. ನಿದ್ರೆ ಇತ್ಯಾದಿ ಸಮಸ್ಯೆಗಳಿಂದ ಕಾರ್ಮಿಕರು ತಡವಾಗಿ ಬಂದರೆ ಅನಧಿಕೃತ ರಜೆ ಎಂದು ನಮೂದಿಸುತ್ತಿದ್ದಾರೆ. ಆರೋಗ್ಯ ಸೇತು ಆ್ಯಪ್ ಬಳಸದಂತೆ ಆದೇಶ ಹೊರಡಿಸಿದ್ದಾರೆ, ಪ್ರಶ್ನಿಸುವ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಲಾಗುತ್ತಿದೆ. ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯವನ್ನು ಸರಿ ಪಡಿಸಬೇಕು ಎಂದು ಟಿಕೆಎಂಇಯು ನ ಅಧ್ಯಕ್ಷರಾದ ಸಿ.ಎನ್. ಪ್ರಸನ್ ಕುಮಾರ್ ಆಗ್ರಹಿಸಿದ್ದಾರೆ.

ಕಾರ್ಮಿಕರು ನಡೆಸುತ್ತಿರುವ ಪ್ರತಿಭಟನೆಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಬೆಂಬಲ ಸೂಚಿಸಿದ್ದಾರೆ. ಸಿಐಟಿಯು, ಎಐಟಿಯುಸಿ, ಕನ್ನಡಪರ ಸಂಘಟನೆಗಳು, ರೈತ ಸಂಘಟನೆಗಳು ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿ, ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯ, ದೌರ್ಜನ್ಯವನ್ನು ಸರಿ ಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.

**ಬಿಕ್ಕಟ್ಟು ಶಮನಕ್ಕೆ ಮುಂದಾದ ಕಾರ್ಮಿಕ ಸಚಿವ:**

ಕಾರ್ಖಾನೆ ನೌಕರರ ಹಾಗೂ ಆಡಳಿತ ಮಂಡಳಿಯ ನಡುವೆ ಉಂಟಾಗಿರುವ ಸಮಸ್ಯೆಯನ್ನು ಬಗೆಹರಿಸಲು ಮಂಗಳವಾರದಂದು ಉಪಮುಖ್ಯಮಂತ್ರಿಗಳಾದ ಡಾ. ಅಶ್ವಥ್ ನಾರಾಯಣ್ ಅವರ ಜೊತೆಯಲ್ಲಿ ಬೆಂಗಳೂರಿನ ವಿಕಾಸಸೌಧದ ಕಛೇರಿಯಲ್ಲಿ ಸಂಧಾನ ಸಭೆಯನ್ನು ಕರೆಯಲಾಗಿದೆ. ಈ ಪ್ರತಿಷ್ಠಿತ ಟೊಯೋಟಾ ಕಿರ್ಲೋಸ್ಕರ ಕಾರ್ಖಾನೆಯ ಕಾರ್ಯನಿರ್ವಹಿಸುತ್ತಿರುವ ಸುಮಾರು 4000 ಕ್ಕೂ ಹೆಚ್ಚಿನ ನೌಕರರಿಗೆ ನ್ಯಾಯ ಒದಗಿಸುವುದು ಮತ್ತು ಆಡಳಿತ ಮಂಡಳಿಯವರಿಗೂ ಅನ್ಯಾಯವಾಗದ ರೀತಿಯಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶ ಸರಕಾರದ್ದಾಗಿದೆ" ಎಂದು ಶಿವರಾಮ ಹೆಬ್ಬಾರ್ ಸೋಮವಾರ ರಾತ್ರಿ ಟ್ವೀಟ್ ಮೂಲಕ ಭರವಸೆ ನೀಡಿದ್ದಾರೆ.




## ಸಮುದಾಯದ ಕರೆ

ನೂರು ಅಡಿಗಳಣ್ಣಾ ಇದು ಬಣ್ಣದ ನಡೆಯಣ್ಣಾ
ಅಣುಸಮರಕ್ಕೆ ತಡೆಯು
ನಮ್ಮ ಸಮುದಾಯದ ಈ ಕರೆಯು
ಕನ್ನಡ ನಾಡಿನ ಮುನ್ನಡೆಯಲ್ಲಿ
ಮೂಡಿಬಂದ ಸಮುದಾಯವು
ಹೊತ್ತು ತಂದಿತು ಈ ಸಂದೇಶ
ಕೇಳಿರಿ ಕೂತವರೆ

ಕೇಳುತ ಎದ್ದು ಹೋಗುವ ಮೊದಲೆ
ಪ್ರಶ್ನೆಗೆ ಉತ್ತರವಾಗಿ
ಬದುಕಿನ ಬವಣೆಯು ಹೆಣದ ಪ್ರಶ್ನೆಗೆ
ಹೋರಾಟದ ನೆತ್ತರವಾಗಿ.

ಮನುಕುಲ ಉಳಿದರೆ ಹೂಗಳು ಅರಳಿ
ನದಿಯ ಹರಿಯುವುದು ನಿರಂತರ
ಹಕ್ಕಿ ಹಾಡುವುದು ಮಗುವು ನಗುವುದು
ಬದುಕು ನುಗ್ಗುವುದು ಬಾನೆತ್ತರ

ಯುದ್ದಕೆ ಕರೆಯುವ ಬಿಳಿಯ ಹದ್ದುಗಳು
ಸೆಳೆವ ಜಾಲಕ್ಕೆ ಮರುಳಾಗದಿರಿ
ಅವರಾಡುವ ಆಟದ ಪರಿಪರಿಯಲ್ಲಿ
ಗಂಡಾಂತರವನು ಮರೆಯದಿರಿ
ಭಾಷೆಗೆ ಜಗಳ ಗಡಿಯಲಿ ಕಾಳಗ
ಜಾತಿಗೆ, ಕೊಲೆಗಳ ನಡೆಸಿಹರು
ಯುದ್ದದ ತಂತ್ರಕ್ಕೆ ನೂರು ಮುಖಗಳಲಿ
ಹಲ್ಲನು ಮಸೆಯುತ ನಿಂತಿಹರು

ಯುದ್ದಕೆ ಸಾವು ಮುಂಬರಲಿ
ಶಾಂತಿ ಮೂಡಣಕೆ ಬೆಳಗಿರಲಿ
ಯುದ್ದದ ನಿಶೆಗೆ ತಿಳಿವಿರಲಿ
ಶಾಂತಿ ಮೂಡಣಕೆ ರವಿ ಬರಲಿ

***– ಎಸ್. ಎಸ್. ಹಿರೇಮಠ***

*(ಇದು ಸೊಲಬಕ್ಕನವರ ಕಲಾಕೃತಿಯನ್ನು ಜನತೆಗೆ ಮುಟ್ಟಿಸಿದ ಸಮುದಾಯದ 'ನೂರು ಅಡಿಗಳ ಬಣ್ಣದ ನಡೆ, ಅಣು ಸಮರಕ್ಕೆ ತಡೆ' ಜಾಥಾದ ಉದ್ದಕ್ಕೂ ಹಾಡಲಾಗುತ್ತಿದ್ದ ಯುದ್ಧ ವಿರೋಧಿ ಹಾಡುಗಳಲ್ಲಿ ಜನಪ್ರಿಯವಾದ ಹಾಡು ಕೃಪೆ: ಸಮುದಾಯ ವಾರ್ತಾಪತ್ರ)* *(ಹೆಚ್ಚಿನ ವಿವರ ಪುಟ 16 ರಲ್ಲಿ)*

# ರಾಜ್ಯದಲ್ಲಿ ಈಗ ಪ್ರಾಧಿಕಾರದ ರಾಜಕೀಯ: ಸರಕಾರದ ನಿಲುವಿಗೆ ಚಿಂತಕರ ಆಕ್ರೋಶ

**ರಾಜ್ಯದಲ್ಲಿ ಈಗ ಪ್ರಾಧಿಕಾರದ ಚರ್ಚೆ ಸಾಕಷ್ಟು ಸದ್ದು ಮಾಡುತ್ತಿದೆ. ಮರಾಠ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ ಎಂದು ಸರಕಾರ ಸುತ್ತೋಲೆ ಹೊರಡಿಸಿದ ಮೇಲೆ ಪರ ವಿರೋಧಧ ಚರ್ಚೆಗಳು ನಡೆದವು. ಇದರ ಬೆನ್ನಲ್ಲೆ ಲಿಂಗಾಯತ ಹಾಗೂ ಒಕ್ಕಲಿಗ ಪ್ರಾಧಿಕಾರ ರಚಿಸುವಂತೆ ಚರ್ಚೆಗಳು ಆರಂಭಗೊಂಡವು. ಏಕಾ ಏಕಿ ಈ ಪ್ರಾಧಿಕಾರ ರಚನೆ ಮುನ್ನಲೆಗೆ ಬಂದದ್ದು ಯಾಕೆ? ಇದರ ಹಿಂದಿರುವ ರಾಜಕೀಯ ಉದ್ದೇಶ ಏನು? ಕನ್ನಡಪರ ಸಂಘಟನೆಗಳ ಹಾಗೂ ಸಾಹಿತಿಗಳ ಕೂಗಿಗೆ ಸರಕಾರ ತನ್ನ ನಿಲುವನ್ನು ಬದಲಾಯಿಸಿಕೊಳ್ಳಬಹುದಾ?**

ಮುಖ್ಯಮಂತ್ರಿ ಬಿಎಸ್. ಯಡಿಯೂರಪ್ಪ ನೇತೃತ್ವದ ಬಜೆಪಿ ಸರಕಾರ ನವೆಂಬರ್ 13 ರಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಆದೇಶವನ್ನು ಮಾಡುವ ಮೂಲಕ ಮರಾಠ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿತ್ತು. ಮತ್ತು ಈ ಪ್ರಾಧಿಕಾರಕ್ಕೆ 50 ಕೋಟಿ ರೂಗಳ ಅನುದಾನವನ್ನು ಮೀಸಲಿಟ್ಟಿತ್ತು. ಸರಕಾರದ ಈ ನಡೆಗೆ ಕನ್ನಡಪರ ಸಂಘಟನೆಗಳು ಹಾಗೂ ಸಾಹಿತಿಗಳು ವಿರೋಧವನ್ನು ವ್ಯಕ್ತಪಡಿಸಿದ್ದರು. ಪ್ರತಿಭಟನೆಯನ್ನು ಕೂಡಾ ನಡೆಸಲಾಗಿತ್ತು, ಸರಕಾರ ತನ್ನ ನಿಲುವನ್ನು ಬದಲಿಸಿಕೊಳ್ಳದೆ ಇದ್ದರೆ ಡಿಸೆಂಬರ್ 05 ಕ್ಕೆ ಕರ್ನಾಟಕ ಬಂದ್ ಗೆ ಕರೆ ನೀಡುವುದಾಗಿ ಹೇಳಿದ್ದವು.

ರಾಜ್ಯ ಸರ್ಕಾರವು ಮರಾಠ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಲು ನಿರ್ಧಾರ ಕೈಗೊಂಡಿರುವ ಕ್ರಮವನ್ನು ಬಂಡಾಯ ಸಾಹಿತ್ಯ ಸಂಘಟನೆ ತೀವ್ರವಾಗಿ ವಿರೋಧಿಸಿತ್ತು. ಮರಾಠ ಮತದಾರರ ಮನ ಒಲಿಸಲು ಒಂದು ಪ್ರಾಧಿಕಾರವನ್ನೇ ಸ್ಥಾಪಿಸುವುದು ಅತಾತ್ವಿಕ ಮತ್ತು ಅನೈತಿಕ ನಡೆಯಾಗಿದೆ. ಬೆಳಗಾವಿಯಂತಹ ಗಡಿನಾಡಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಕರಾಳ ದಿನವನ್ನಾಗಿ ಆಚರಿಸಿ ಕರ್ನಾಟಕ ಏಕೀಕರಣದ ಆಶಯವನ್ನು ಪ್ರಶ್ನಿಸುವ ಮರಾಠಿಗರು ಇರುವಾಗ ಇಂತಹ ಪ್ರಾಧಿಕಾರದ ಸ್ಥಾಪನೆ ಪ್ರಶ್ನಾರ್ಹವಾಗಿದೆ ಎಂದು ಬಂಡಾಯ ಸಾಹಿತ್ಯ ಸಂಘಟನೆಯ ಬರಗೂರು ರಾಮಚಂದ್ರಪ್ಪನವರು ಸರಕಾರಕ್ಕೆ ಛಾಟೀ ಬೀಸಿದೆ.

ಮರಾಠ ಅಭಿವೃದ್ಧಿ ಪ್ರಾಧಿಕಾರವನ್ನು ಮಾಡಿರುವುದು ಕನ್ನಡಿಗರಿಗೆ ಮಾಡಿದ ಮೋಸ, ಈ ಒಂದು ಪ್ರಾಧಿಕಾರವನ್ನು ಹಿಂಪಡೆಯಬೇಕು ಇಲ್ಲವಾದರೆ ಯಡಿಯೂರಪ್ಪನವರು ರಾಜೀನಾಮೆ ನೀಡಬೇಕು. ಡಿ. 5 ರಂದು ಕರ್ನಾಟಕ ಬಂದ್ ಗೆ ರೈತ ಸಂಘಟನೆಗಳು ಎಲ್ಲಾ ಕನ್ನಡ ಪರ ಸಂಘಟನೆಗಳು ಬೆಂಬಲವನ್ನು ಕೇಳಲಾಗುವುದು ಎಂದು ವಾಟಾಳ್ ನಾಗರಾಜ ಮನವಿ ಮಾಡಿದ್ದಾರೆ.

ಮರಾಠ ಅಭಿವೃದ್ಧಿ ಪ್ರಾಧಿಕಾರ ರಚನೆಯ ಬೆನ್ನಲ್ಲೆ ಲಿಂಗಾಯತ ಪ್ರಾಧಿಕಾರ ರಚಿಸುವಂತೆ ಸಾಕಷ್ಟು ಚರ್ಚೆಗಳು ನಡೆದೆವು, ಮಾರಾಠ ಪ್ರಾಧಿಕಾರವನ್ನು ರಚಿಸಿ ಸಮಸ್ಯೆಯನ್ನು ಮೈಮೇಲೆ ಹಾಕೊಕೊಂಡಿದ್ದ ಸರಕಾರಕ್ಕೆ ಲಿಂಗಾಯತ ಪ್ರಾಧಿಕಾರ ರಚಿಸುವುದು ಅನಿವಾರ್ಯವಾಯಿತು. ಅಕ್ಟೋಬರ್ 17 ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿತು. ಇದರ ಬೆನ್ನಲ್ಲೆ ಬಿಜೆಪಿ ಶಾಸಕ ಎಸ್. ಆರ್. ವಿಶ್ವನಾಥ ಒಕ್ಕಲಿಗರ ಅಭಿವೃದ್ಧಿ ನಿಗಮವನ್ನು ರಚಿಸಲಿ ಎಂದು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಸರಕಾರ ಈ ರೀತಿ ಕೆಳಿದವರಿಗೊಂದು ಪ್ರಾಧಿಕಾರವನ್ನು ರಚಿಸುತ್ತಾ ಹೋದರೆ ಬರೀ ಪ್ರಾಧಿಕಾರಗಳೆ ತುಂಬಿಕೊಳ್ಳುತ್ತವೆ ಹೊರತು ಅಭಿವೃದ್ಧಿಯಲ್ಲ. ಸರಕಾರ ತನ್ನ ರಾಜಕೀಯ ಲಾಭಕ್ಕಾಗಿ ಜಾತಿಗಳನ್ನು ಓಲೈಸುವ ಕೆಲಸ ಮಾಡುತ್ತಿದೆ ಎಂದು ಪ್ರಗತಿಪರ ಚಿಂತಕ ಡಾ.ಕೆ. ಮರುಳಸಿದ್ದಪ್ಪ ಆರೋಪಿಸಿದ್ದಾರೆ.

ವೀರಶೈವ ಲಿಂಗಾಯತ ಪ್ರಾಧಿಕಾರವು ಮಠ ಮಾನ್ಯಗಳಿಗೆ ಸಾಕಷ್ಟು ಹಣ ನೀಡುವ ಪ್ರಾಧಿಕಾರವಾಗಲಿದೆ. ರಾಜ್ಯದಲ್ಲಿ ಶೋಷಿತ ಜನಿರಿದ್ದಾರೆ, ಅನೇಕ ಸಮುದಾಯದ ಭಾಷೆಗಳು ನಾಶವಾಗುವ ಹಂತದಲ್ಲಿವೆ, ಅವುಗಳು ಸರಕಾರದ ಕಣ್ಣಿಗೆ ಬೀಳುವುದಿಲ್ಲವೆ ಎಂದು ಜಾನಪದ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆಯವರು ಸರಕಾರವನ್ನು ಪ್ರಶ್ನಿಸಿದ್ದಾರೆ.

ಪ್ರಾಧಿಕಾರಿಗಳು ಜಾತಿ ಕೇಂದ್ರಿತವಾಗಲಿ, ಜನಾಂಗ ಕೇಂದ್ರಿತವಾಗಿ ಇರಬಾರದು ಸರಕಾರ ತೆಗೆದುಕೊಂಡ ನಿರ್ಧಾರ ಪ್ರಜಾಪ್ರಭುತ್ವವನ್ನು ಅಧ:ಪತನಕ್ಕೆ ಕೊಂಡೊಯ್ಯುವಂತಾಗಿದೆ ಎಂದು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಅರವಿಂದ ಮಾಲಗತ್ತಿ ಸರಕಾರದ ನಡೆಗೆ ಆಕ್ರೋಶವನ್ನು ವ್ಯಕ್ತ ಪಡಿಸಿದ್ದಾರೆ.

ಸರಕಾರದ ನಡೆಗೆ ಸಾಕಷ್ಟು ವಿರೋಧ ಬಂದ ಹಿನ್ನಲೆಯಲ್ಲಿ ಮರಾಠ ಪ್ರಾಧಿಕರದ ಪ್ರಸ್ತಾಪವನ್ನು ಕೈ ಬಿಟ್ಟು ಮರಾಠ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಕುರಿತು ನಿನ್ನೆ ನಡೆದ ಸಂಪುಟ ಸಭೆಯಲ್ಲಿ ಅಂತಿಮಗೊಳಿಸಲಾಗಿದೆ. ಸರಕಾರ ಕರ್ನಾಟಕದ ಅಭಿವೃದ್ಧಿ ಕಡೆ ಗಮನ ನೀಡಿದರೆ ಕಲ್ಯಾಣ ರಾಜ್ಯವಾಗಿ ಕರ್ನಾಟಕ ಹೊರಹೊಮ್ಮಬಹುದು, ಪ್ರಾಧಿಕಾರ ಅಥವಾ ನಿಗಮ ರಚನೆ ರಾಜಕೀಯವಾಗಿ ಲಾಭವಾಗಬಹುದು ಇಲ್ಲವೆ ರಾಜಕೀಯ ಹಿಂಬಾಲಕರನ್ನು ಅಧ್ಯಕ್ಷರನ್ನಾಗಿಸುವ ಅಥವಾ ಕೆಲವಿಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಬಿಟ್ಟರೆ ಸಮಗ್ರ ಅಭಿವೃದ್ಧಿ ಸಾಧ್ಯವಿಲ್ಲ ಎಂಬುದನ್ನು ಸರಕಾರ ಅರಿಯಬೇಕಿದೆ. ಆ ನಿಟ್ಟಿನಲ್ಲಿ ರಾಜ್ಯ ಸರಕಾರ ದಿಟ್ಟ ಹೆಜ್ಜೆಯನ್ನು ಹಾಕಬೇಕಿದೆ. ●

# ಲೀಥಿಯಂ, ಮಸ್ಕ್ ಮತ್ತು ಬೊಲಿವಿಯ ಕ್ಷಿಪ್ರ ದಂಗೆ

**ಲಿಥೀಯಂ 21ನೇ ಶತಮಾನದ ಜಗತ್ತಿನ ಇಂಧನ ಆರ್ಥಿಕದಲ್ಲಿ ನವ–ತೈಲದ ಸ್ಥಾನ ಪಡೆದಿದೆ. 20ನೇ ಶತಮಾನದಲ್ಲಿ ಆಗಿನ ಇಂಧನ ಆರ್ಥಿಕದ ಪ್ರಧಾನ ಸಂಪನ್ಮೂಲವಾಗಿದ್ದ ತೈಲದ ನಿಕ್ಷೇಪಗಳ ಮತ್ತು ತಂತ್ರಜ್ಞಾನದ ಮೇಲೆ ಬೆರಳೆಣಿಕೆಯ ಬಹುರಾಷ್ಟ್ರೀಯ ಕಂಪನಿಗಳು ಸಾಮ್ರಾಜ್ಯಶಾಹಿ ಮಿಲಿಟರಿ ಬಲದೊಂದಿಗೆ ಏಕಸ್ವಾಮ್ಯ ಹಿಡಿತ ಸಾಧಿಸಿದ್ದವು. ಈಗ ಲಿಥೀಯಂ ಕುರಿತು ಬೊಲಿವಿಯದಲ್ಲಿ ಕ್ಷಿಪ್ರದಂಗೆ ಮೂಲಕ ಅದರ ಪುನರಾವರ್ತನೆಗೆ ಪ್ರಯತ್ನಿಸುತ್ತಿವೆ. ಆದರೆ ಬೊಲಿವಿಯದ ಜನತೆ ಮತ್ತು ಎಂ.ಎ.ಎಸ್ ಪಕ್ಷ ಅದಕ್ಕೆ ಪ್ರಬಲ ತಡೆಯೊಡ್ಡಿದೆ ಎಂಬುದು ಸಕಾರಾತ್ಮಕ ಬೆಳವಣಿಗೆ.**

**ಪ್ರೊ. ರಾಜೇಂದ್ರ ಉಡುಪ**

"ಕ್ಷಿಪ್ರದಂಗೆ ನಡೆಸಿ ಮಾಡಿ ನಾವು ಯಾರನ್ನು ಬೇಕಾದರೂ ಪದಚ್ಯುತಗೊಳಿಸುತ್ತೇವೆ. ಏನು ಮಾಡ್ತೀರಾ?" ಎಂದು ಟ್ವೀಟ್ ನಲ್ಲಿ ಈ ಹೇಳಿಕೆಯನ್ನು ಕೊಟ್ಟ 'ಮಹಾಪುರುಷ' ಎಲಾನ್ ಮಸ್ಕ್. 2019ರ ಬೊಲಿವಿಯದಲ್ಲಿ ಕ್ಷಿಪ್ರದಂಗೆಯನ್ನು ಅಮೆರಿಕನ್ ಸರಕಾರ ನಿಮ್ಮ ಕಂಪನಿಯ ಹಿತಾಸಕ್ತಿಗಾಗಿ ನಡೆಸಿತಾ ಎಂಬ ಪ್ರಶ್ನೆಗೆ ಮಸ್ಕ್ ಕೊಟ್ಟ ಉದ್ಧಟ ಉತ್ತರವಿದು. ಟ್ವಿಟರ್ ನಲ್ಲಿ ಈ ಪ್ರಶ್ನೆ ಸಹ, ಕೊವಿದ್ ನೆರವಿಗೆ ಸರಕಾರ ಪ್ರತಿ ಅಮೆರಿಕನ್ ನಾಗರಿಕರಿಗೆ ತಿಂಗಳ 1200 ಡಾಲರ್ ನೆರವು ಕೊಡುವುದನ್ನು ಟೀಕಿಸಿ 'ಇದು ಜನರ ಹಿತಾಸಕ್ತಿಯಲ್ಲಿಲ್ಲ' ಎಂಬ ಮಸ್ಕ್ ಮಾಡಿದ್ದ ಉದ್ಧಟ ಟ್ವೀಟ್ ಗೆ ಪ್ರತಿಕ್ರಿಯೆಯಾಗಿತ್ತು.

ಯಾರು ಈ ಎಲಾನ್ ಮಸ್ಕ್? ಈತ ಜಗತ್ತಿನ ಅತಿ ದೊಡ್ಡ ಶ್ರೀಮಂತರಲ್ಲಿ 5ನೇ ಸ್ಥಾನದಲ್ಲಿರುವ ವ್ಯಕ್ತಿ. ಟೆಸ್ಲ ಎನ್ನುವ ಕಂಪನಿಯ ಮುಖ್ಯಸ್ಥ. ಈ ಕಂಪನಿ ವಿದ್ಯುತ್ಚಾಲಿತ ಕಾರುಗಳನ್ನು ತಯಾರಿಸುತ್ತಿದೆ. ಟೆಸ್ಲ ಜಗತ್ತಿನ ವಿದ್ಯುತ್ಚಾಲಿತ ವಾಹನಗಳ ಮಾರುಕಟ್ಟೆಯಲ್ಲಿ ಅತಿ ದೊಡ್ಡ ಪಾಲು ಪಡೆದ ಅಮೆರಿಕನ್ ಕಂಪನಿ. ಅದು ಈ ವರ್ಷ ಈ ವರೆಗೆ 3.6 ಲಕ್ಷ ವಿದ್ಯುತ್ಚಾಲಿತ ವಾಹನಗಳನ್ನು ಉತ್ಪಾದಿಸಿದ್ದು ಈ ವರ್ಷದ ಜಾಗತಿಕ ಉತ್ಪಾದನೆಯಲ್ಲಿ ಶೇ. 18 ಪಾಲು ಪಡೆದಿದೆ. ಇದು ಎರಡನೆ ಅತಿ ದೊಡ್ಡ ಪಾಲು ಪಡೆದಿರುವ ಜರ್ಮನಿಯ ಫೋಕ್ಸ್ ವಾಗೆನ್‌ನ ಪಾಲಿನ (ಶೇ.6) ಮೂರು ಪಟ್ಟು.

ಮುಂದಿನ ದಿನಗಳಲ್ಲಿ ವಿದ್ಯುತ್ಚಾಲಿತ ಕಾರು, ಸ್ಕೂಟರ್, ಬಸ್ ಇತರ ವಾಹನಗಳಿಗೆ ಬಹು ದೊಡ್ಡ ಬೇಡಿಕೆ ಬರಲಿದೆ. 2021ರಲ್ಲಿ ವಿದ್ಯುತ್ಚಾಲಿತ ವಾಹನಗಳ ಉತ್ಪಾದನೆ ಈ ವರ್ಷದ ದುಪ್ಪಟ್ಟಿಗಿಂತಲೂ ಹೆಚ್ಚಾಗಬಹುದು ಎಂಬ ನಿರೀಕ್ಷೆಯಿದೆ. ಈಗ ವಿದ್ಯುತ್ಚಾಲಿತ ವಾಹನಗಳು ಒಟ್ಟು ವಾಹನಗಳ ಶೇ. 3 ಭಾಗ ಮಾತ್ರ ಇದ್ದು, ಮುಂದಿನ ವರ್ಷ ಇದು ಶೇ. 7 ರಿಂದ 10 ಕ್ಕೆ ಏರುತ್ತದೆ ಎಂದು ನಿರೀಕ್ಷಿಸಲಾಗಿದೆ.

ಪೆಟ್ರೋಲ್, ಡೀಸೆಲ್ ವಾಹನಗಳಿಂದ ವಾತಾವರಣ ಕಲುಷಿತಗೊಳ್ಳುತ್ತದೆ, ನಗರ ಜನರ ಆರೋಗ್ಯ ಹದೆಗೆಡುತ್ತದೆ ಎನ್ನುವ ಕಾರಣಕ್ಕೆ ಜಗತ್ತಿನಾದ್ಯಂತ ವಿದ್ಯುತ್ಚಾಲಿತ ವಾಹನಗಳನ್ನು ಓಡಿಸುವ ಯೋಜನೆ ಇದೆ. ಇದರಲ್ಲಿರುವ ಪರಿಸರ ರಕ್ಷಣೆಯ ವಿಚಾರ ಪೂರ್ತಿ ಸತ್ಯವಲ್ಲ. ನಗರಗಳು ಚೊಕ್ಕ ಆಗುತ್ತವೆ ಅನ್ನುವುದೇನೊ ಸರಿ. ಆದರೆ ಈ ವಾಹನಗಳಿಗೆ ಬೇಕಾದ ಅಗಾಧ ಪ್ರಮಾಣದ ವಿದ್ಯುಚ್ಚಕ್ತಿಯನ್ನು ಮತ್ತೆಲ್ಲೋ ಉತ್ಪಾದಿಸಿ ನಗರಗಳಿಗೆ ತಂದು ಚಾರ್ಜಿಂಗ್ ಸ್ಟೇಶನ್ (ಈಗಿನ ಪೆಟ್ರೋಲ್ ಬಂಕ್ ಗಳಂತೆ) ಗಳಿಂದ ವಿತರಿಸಬೇಕಾಗುತ್ತದೆ. ಅಂದರೆ ಪರಿಸರ ಸಮಸ್ಯೆಯನ್ನು ನಗರಗಳಿಂದ ಬೇರೆಡೆಗೆ ಸಾಗಿಸಿದಂತಾಗುತ್ತದೆ.

ವಿದ್ಯುತ್ಚಾಲಿತ ವಾಹನಗಳು ಓಡುವುದು ಬ್ಯಾಟರಿಗಳಲ್ಲಿ ಶೇಖರಿಸಿದ ವಿದ್ಯುತ್ ಶಕ್ತಿಯಿಂದ. ಬ್ಯಾಟರಿಯೇ ಈ ವಾಹನಗಳ ಹೃದಯ ಭಾಗ. ವಾಹನಗಳು ಓಡಾಡಿ ವಿದ್ಯುತ್ ಖರ್ಚಾದಂತೆ ಬ್ಯಾಟರಿಗಳನ್ನು ರಿಚಾರ್ಜ ಮಾಡಿಕೊಳ್ಳ ಬೇಕಾಗುತ್ತದೆ. ಇವುಗಳನ್ನು ರಿಚಾರ್ಜೇಬಲ್ ಬ್ಯಾಟರಿಗಳೆನ್ನುತ್ತೇವೆ. ವಾಹನಗಳಿಗೆ ಬೇಕಾಗುವ ಶಕ್ತಿಶಾಲಿ ಬ್ಯಾಟರಿ: ಲೀಥಿಯಂ ಅಯೋನ್ ಬ್ಯಾಟರಿ. ಇದರ ವಿಶೇಷತೆ ಏನು?

ಎಲ್ಲಾ ಬ್ಯಾಟರಿಗಳಲ್ಲಿ ಇರುವಂತೆ ಇದರಲ್ಲಿಯೂ ನಾಲ್ಕು ಭಾಗಗಳಿರುತ್ತವೆ: ಕ್ಯಾತೋಡ್ ಮತ್ತು ಎನೋಡ್ ಎಂಬ ಎರಡು ವಿದ್ಯುಧ್ರುವ (electrode)ಗಳು, ಇಲೆಕ್ಟ್ರಾನುಗಳು ಚಲಿಸಲು ಒಂದು ಮಾರ್ಗ ಹಾಗೂ ಇಲೆಕ್ಟ್ರಾನುಗಳನ್ನು ಕಳೆದುಕೊಂಡ ಪರಮಾಣು (ಇದನ್ನು ಅಯೋನ್ ಎಂದು ಕರೆಯುತ್ತಾರೆ) ಚಲಿಸಲು ಇನ್ನೊಂದು ಮಾರ್ಗ (ಇದನ್ನು ಇಲೆಕ್ಟ್ರೋಲೈಟ್ ಎನ್ನುತ್ತಾರೆ.). ಲೀಥಿಯಂ ಬ್ಯಾಟರಿಯಲ್ಲಿ ಒಂದು ವಿದ್ಯುಧ್ರುವ ಲೀಥಿಯಂ ಆಕ್ಸೈಡ್ ಆಗಿದ್ದರೆ ಇನ್ನೊಂದು ವಿಧ್ಯುಧ್ರವ ಗ್ರಾಫೈಟ(ಇಂಗಾಲದ ಒಂದು ರೂಪ) ಆಗಿರುತ್ತದೆ. ಖಾಲಿಯಾದ ಬ್ಯಾಟರಿಯ ಶಕ್ತಿ ಸಂಚಯ, ಅಂದರೆ ರಿಚಾರ್ಜ್ ಮಾಡುವಾಗ ಲಿಥಿಯಂ ಆಕ್ಸೈಡ್ ನಲ್ಲಿರುವ ಇಲೆಕ್ಟ್ರಾನುಗಳು ತಾಮ್ರದ ತಂತುವಿನ ಮೂಲಕ ಗ್ರಾಫೈಟ್ ನ್ನು ಬಂದು ಸೇರಿಕೊಳ್ಳುತ್ತವೆ. ಇಲೆಕ್ಟ್ರಾನನ್ನು ಕಳೆದುಕೊಂಡ ಲೀಥಿಯಂ ಅಯೋನುಗಳು ಘನ ರೂಪದ ಇಲೆಕ್ಟ್ರಾಲೈಟ್ ಮೂಲಕ ಪ್ರಸರಣಗೊಂಡು ಗ್ರಾಫೈಟ್ ಪದರುಗಳಲ್ಲಿ ಶೇಖರಗೊಳ್ಳುತ್ತವೆ. ಹೀಗೆ ವಿದ್ಯುತ್ ಶೇಕರಣೆಗೊಂಡ ಬ್ಯಾಟರಿಯನ್ನು ಮೋಟರ್ ಒಂದಕ್ಕೆ ಜೋಡಿಸಿದಾಗ ಗ್ರಾಫೈಟ್ ನಿಂದ ಇಲೆಕ್ಟ್ರಾನುಗಳೂ ಹಾಗೂ ಅಯಾನುಗಳು ಬಂದ ದಾರಿಯಿಂದಲೇ ಹಿಂದಕ್ಕೆ ಸಂಚರಿಸಿ ಲಿಥಿಯಂ ಆಕ್ಸೈಡನ್ನು ಸೇರಿಕೊಳ್ಳುತ್ತವೆ ಮತ್ತು ಮೋಟರಿಗೆ ಚಾಲನೆ ಕೊಡುತ್ತವೆ.

ಇಂತಹ ಬ್ಯಾಟರಿಗೆ ಬೇಕಾದ ಅತೀ ಮುಖ್ಯ ವಸ್ತು ಲೀಥಿಯಂ ಲೋಹ. ಸಾಮಾನ್ಯ ಸ್ಥಿತಿಯಲ್ಲಿ ಅತೀ ಹಗುರವಾದ ಅಂದರೆ ಅತೀ ಕಡಿಮೆ ಸಾಂದ್ರತೆಯ ಲೋಹ. ಇದು ರಾಸಾಯನಿಕವಾಗಿ ತುಂಬ ಚುರುಕಾದ ಲೋಹ – ನೀರಿನೊಂದಿಗೆ ಶೀಘ್ರವಾಗಿ ಪ್ರತಿಕ್ರಯಿಸಿ ಸುಲಭದಲ್ಲಿ ಧಹಿಸುವ ಜಲಜನಕವನ್ನು ಬಿಡುಗಡೆಗೊಳಿಸುತ್ತದೆ. ಲೀಥಿಯಂಗೆ ಇಲೆಕ್ಟ್ರಾನುಗಳ ದಾಹ ತುಂಬ ಹೆಚ್ಚಿರುವುದರಿಂದ ಸಣ್ಣ ಬ್ಯಾಟರಿ ಕೂಡ ಅಧಿಕ ಶಕ್ತಿಯನ್ನು ಕೊಡಬಲ್ಲದು. ನೂರಾರು ಚಿಕ್ಕ ಬ್ಯಾಟರಿಗಳನ್ನು (6 ರಿಂದ 7 ಸೆ.ಮೀ.ಉದ್ದ) ಪೋಣಿಸಿಕೋಂಡು ಬ್ಯಾಟರಿ ಪ್ಯಾನೆಲ್ ಗಳನ್ನು ತಯಾರಿಸುತ್ತಾರೆ. ಕಾರಿನ ಗಾತ್ರಕ್ಕೆ ತಕ್ಕಂತೆ ಹಲಗೆಗಳ ರೂಪವನ್ನು ಬದಲಿಸಬಹುದು. ಇಂತಹ ಬ್ಯಾಟರಿಗಳು 25 ವರ್ಷಗಳಿಗಿಂತಲೂ ಅಧಿಕ ಬಾಳಿಕೆ ಬರುತ್ತವೆ. ಲಿಥಿಯಂ ಬ್ಯಾಟರಿಗಳನ್ನು ವಿದ್ಯುತ್ ವಾಹನಗಳು ಮಾತ್ರವಲ್ಲದೇ ಕಂಪ್ಯೂಟರ್, ಲಾಪ್ ಟಾಪ್, ಐಫೋನ್ ಇತ್ಯಾದಿ ಹೆಚ್ಚಿನ ಇಲೆಕ್ಟ್ರಾನಿಕ್ ಸಾಧನಗಳಲ್ಲಿ ಬಳಸಲಾಗುತ್ತದೆ. ಇದರಿಂದಾಗಿ ಲಿಥಿಯಂ 21ನೇ ಶತಮಾನದ ತಂತ್ರಜ್ಞಾನಕ್ಕೆ ಬೇಕಾದ ಅತೀ ಅವಶ್ಯಕ ಲೋಹ ಆಗಿದೆ. ಲಿಥಿಯಂ ಗೆ ಬೇಡಿಕೆ ಮುಂದಿನ 10 ವರ್ಷಗಳಲ್ಲಿ ಮೂರು ಪಟ್ಟು ಆಗಿ 5.7 ಲಕ್ಷ ಟನ್ ಗೆ ಏರುತ್ತದೆ ಎಂದು ಅಂದಾಜು ಮಾಡಲಾಗಿದೆ.

ಬೋಲಿವಿಯಾದಲ್ಲಿ ಲಿಥಿಯಂ ಅದಿರಿನ ದೊಡ್ಡ ನಿಕ್ಷೇಪವೇ ಇದೆ. ಅಂದಾಜಿನಂತೆ ಜಗತ್ತಿನ ಒಟ್ಟು ಲಿಥಿಯಂ ನಿಕ್ಷೇಪದ ಸುಮಾರು 45% ಬೋಲಿವಿಯಾದ ಒಂದು ಮರುಭೂಮಿಯಲ್ಲೇ ದೊರಕುತ್ತದೆ. ಲಿಥಿಯಂ ಮಾತ್ರವಲ್ಲದೇ ಚಿನ್ನ, ತಾಮ್ರ, ತವರ, ಸತು, ಟಂಗಸ್ಟನ್, ಸಾಲ್ಟಪೀಟರ್ ನಂತಹ ಅತೀ ಬೆಲೆಬಾಳುವ ಖನಿಜಗಳೂ ದೊರಕುತ್ತವೆ. ಈ ಮೊದಲು ಅಮೆರಿಕ, ಫ್ರಾನ್ಸ್, ದಕ್ಷಿಣ ಕೊರಿಯಾದ ಬಹುರಾಷ್ಟ್ರೀಯ ಕಂಪನಿಗಳು ಬೊಲಿವಿಯಾದ ಗಣಿಗಳ ಒಡೆತನ ಹೊಂದಿದ್ದವು. ಇವರಿಂದ ಖನಿಜ ಸಂಪತ್ತಿನ ಲೂಟಿ ನಡೆಯುತಿತ್ತು. ಗಣಿಗಾರಿಕೆ ಕೆಟ್ಟ ರೀತಿಯಲ್ಲಿ ನಡೆದು ಕಾರ್ಮಿಕರು ಶೋಷಣೆಗೊಂಡು ಬಡತನದಲ್ಲಿ ಬದುಕುತ್ತಿದ್ದರು. ಗಣಿಗಳಲ್ಲಿನ ಬಾಲ ಕಾರ್ಮಿಕ ಪದ್ಧತಿ ಜಗತ್ತಿನಲ್ಲೇ ಕುಖ್ಯಾತಿಗೊಂಡಿತ್ತು.

ವಿದ್ಯುಚ್ಚಾಲಿತ ಕಾರುಗಳ ಅತಿ ದೊಡ್ಡ ತಯಾರಕರಾಗಿ ಟೆಸ್ಲಗೆ ಲಿಥಿಯಂ ಅತಿ ಮುಖ್ಯ ಕಚ್ಚಾ ವಸ್ತು. ಮುಂದೆ ಪೈಪೋಟಿ ತೀವ್ರವಾದಾಗ ತನಗೆ ಇದರ ಲಭ್ಯತೆ ಖಚಿತ ಪಡಿಸುವುದು ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ತನ್ನ ಪ್ರಾಬಲ್ಯ ಉಳಿಸಿಕೊಳ್ಳಲು ಇತರ ಕಂಪನಿಗಳಿಗೆ ಲಭ್ಯತೆ ಇಲ್ಲದಂತೆ ಮಾಡುವುದು ಸಹ ಅದರ ಯೋಜನೆಯಲ್ಲಿ ಇತ್ತು. ಟೆಸ್ಲ ಬಹುರಾಷ್ಟ್ರೀಯ ಲಿಥಿಯಂ ಗಣಿ ಕಂಪನಿಗಳ ಅತಿ ದೊಡ್ಡ ಖರೀದಿದಾರ ಆಗಿದ್ದು, ಅವರೆಲ್ಲರ ಹಿತಾಸಕ್ತಿ ಲಿಥಿಯಂ ಗಣಿಗಳ ಮೇಲೆ ಭದ್ರ ಹಿಡಿತ ಸಾಧಿಸುವುದರಲ್ಲಿ ಇತ್ತು.

ಹೀಗೆ ಶೋಷಣೆಗೊಳಗಾದ ದೇಶದಲ್ಲಿ ಇವೋ ಮೊರಾಲಸ್ ಎನ್ನುವ ಎಡಪಂಥೀಯ ವ್ಯಕ್ತಿ 2006 ರಲ್ಲಿ ಅಧ್ಯಕ್ಷರಾದರು. 2019ರ ವರೆಗೆ ಅವರ 'ಸಮಾಜವಾದಕ್ಕಾಗಿ ಚಳವಳಿ' (Movement For Socialism - MAS) ಪಕ್ಷ ಚುನಾವಣೆಯಲ್ಲಿ ಬಹುಮತ ಪಡೆದು ಇವರು ಅಧ್ಯಕ್ಷರಾಗಿ ಮುಂದುವರಿದರು. 2006ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಗಣಿಗಳನ್ನು ರಾಷ್ಟ್ರೀಕರಿಸಲಾಯಿತು. ಗಣಿಗಾರಿಕೆಯಿಂದ ಬಂದ ಲಾಭವನ್ನು ಕಾರ್ಮಿಕ ಕಲ್ಯಾಣ ಮತ್ತು ಬಡತನ ನಿವಾರಣ ಯೋಜನೆಗೆ ಉಪಯೋಗಿಸಲಾಯಿತು. ಶಿಕ್ಷಣ, ಆರೋಗ್ಯ, ವಸತಿಗೆ ಹೆಚ್ಚಿನ ಒತ್ತು ಕೊಡಲಾಯಿತು. ಇದರಿಂದಾಗಿ ಅಲ್ಲಿನ ಅತೀ ಬಡವರ ಸಂಖ್ಯೆ 35% ನಿಂದ 7%ಗೆ ಇಳಿಯಿತು.

ಮೊರಾಲೆಸ್ ಸರಕಾರ 2006ರಲ್ಲಿ ಲಿಥೀಯಂ ರಾಷ್ಟ್ರೀಯ ವ್ಯೂಹಾತ್ಮಕ ಸಂಪತ್ತು ಎಂದು ಘೋಷಿಸಿ ಅದರ ಗಣಿಗಾರಿಕೆ, ಸಂಸ್ಕರಣವನ್ನು ಸರಕಾರವೇ ವಹಿಸುತ್ತದೆ ಎಂಬ ರಾಷ್ಟ್ರೀಯ ನೀತಿಯನ್ನು ಅಂಗೀಕರಿಸಿತು. ಇದನ್ನು ಸಂವಿಧಾನದಲ್ಲೂ ಸೇರಿಸಲಾಯಿತು. ಇದಕ್ಕಾಗಿ ವೈ.ಎಲ್.ಬಿ (ಬೊಲಿವಿಯನ್ ರಾಷ್ಟ್ರೀಯ ಲಿಥೀಯಂ ಸಂಸ್ಥೆ) ಯನ್ನು ಸ್ಥಾಪಿಸಿ ಅದಕ್ಕೆ ಲಿಥೀಯಂ ಗಣಿಗಳ ಒಡೆತನವನ್ನು ವಹಿಸಿತು. ಲಿಥಿಯಂ ಗಣಿಗಾರಿಕೆ ಮತ್ತು ಸಂಸ್ಕರಣದಲ್ಲಿ ವಿದೇಶೀ ಕಂಪನಿಗಳ ಭಾಗವಹಿಸುವಿಕೆಯನ್ನು ಅದೇನು ನಿಷೇಧಿಸಲಿಲ್ಲ. ಆದರೆ ಲೀಥಿಯಂ ಸಂಬಂಧಿತ ಯಾವುದೇ ಚಟುವಟಿಕೆಯನ್ನು ವೈ.ಎಲ್.ಬಿ. ಮತ್ತು ಕೊಮಿಬಿಲ್ (ಬೊಲಿಯಾದ ರಾಷ್ಟ್ರೀಯ ಗಣಿಗಾರಿಕೆ ಕಂಪನಿ) ಜತೆ ಜಂಟಿಯಾಗಿ ನಿರ್ವಹಿಸಬೇಕಿತ್ತು. ಇದಕ್ಕೆ ಒಪ್ಪದ್ದರಿಂದ ಆ ವರೆಗೆ ಬೊಲಿವಿಯದ ಲಿಥೀಯಂ ಸಂಪತ್ತಿನ ಮೇಲೆ ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿದ್ದ ಅಮೆರಿಕದ ಎಫ್.ಎಂ.ಸಿ, ಫ್ರಾನ್ಸಿನ ಎರಾಮೆಟ್, ಮತ್ತು ದ. ಕೊರಿಯಾದ ಪೊಸ್ಕೊ ಅದರಿಂದ ಹೊರಗುಳಿಯಬೇಕಾಯಿತು. ಈ ಕಂಪನಿಗಳ ಜೊತೆ ನಿಕಟ ನಂಟು ಹೊಂದಿದ್ದ ಮಸ್ಕ್ ಗೂ ಇದು ನುಂಗಲಾರದ ತುತ್ತಾಗಿತ್ತು. ಯಾಕೆಂದರೆ ಟೆಸ್ಲ ದ ವರ್ಷಕ್ಕೆ 5 ಲಕ್ಷ ಕಾರುಗಳ ತಯಾರಿಕೆಯ ಯೋಜನೆಗೆ ಹೆಚ್ಚು ಕಡಿಮೆ ಈಗಿನ ಇಡೀ ಜಾಗತಿಕ ಉತ್ಪಾದನೆ ಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.


ಮೊರಾಲೆಸ್ ಸರಕಾರದ ಯೋಜನೆ ಬರಿಯ ಲಿಥೀಯಂ ಗಣಿಗಾರಿಕೆ ಮಾಡಿ ರಫ್ತು ಮಾಡುವುದಕ್ಕೆ ಸೀಮಿತವಾಗಲಿಲ್ಲ. ಬ್ಯಾಟರಿಗೆ ಬೇಕಾದ ಲಿಥೀಯಂ ಡೈ ಆಕ್ಸೈಡ್ ಮುಂತಾದ ರಾಸಾಯನಿಕ ವಸ್ತುಗಳು, ಇಡೀ ಬ್ಯಾಟರಿ ಮತ್ತು ವಿದ್ಯುತ್ಚಾಲಿತ ವಾಹನಗಳನ್ನೇ ಮಾಡಲು ಯೋಜನೆ ಹಾಕಿತು. ಇದಕ್ಕೆ ಅದು ರಶ್ಯನ್, ಜರ್ಮನ್ ಮತ್ತು ಚೀನಾದ ಕಂಪನಿಗಳ ತಾಂತ್ರಿಕ ಸಹಕಾರ, ಹೂಡಿಕೆ ಪಡೆಯುವುದರಲ್ಲಿ ಸಫಲವಾಯಿತು. ಈ ಕಂಪನಿಗಳು ಬೊಲಿವಿಯ ಸರಕಾರದ ಷರತ್ತುಗಳನ್ನು ಒಪ್ಪಿಕೊಂಡು ಸರಕಾರ ನಿಯೋಜಿಸಿದ ವೈ.ಎಲ್.ಬಿ. ಮತ್ತು ಕೊಮಿಬಿಲ್ ಸಂಸ್ಥೆಗಳೊಂದಿಗೆ ಕೆಲಸ ಮಾಡಿದವು. ಇದು ಅಮೆರಿಕದ ಸರಕಾರ ಮತ್ತು ಬಹುರಾಷ್ಟ್ರೀಯ ಕಂಪನಿಗಳನ್ನು ಇನ್ನಷ್ಟು ಉತ್ತೇಜಿತಗೊಳಿಸಿತು.

ಜಗತ್ತಿನಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಖನಿಜ ಸಂಪತ್ತನ್ನು ಲೂಟಿ ಮಾಡುವುದು ಅಮೇರಿಕಾ ನಡೆದು ಬಂದ ದಾರಿ. ಇದಕ್ಕೆ ತಡೆಯೊಡ್ಡಿದ ಚುನಾಯಿತ ಸರಕಾರಗಳನ್ನು ಪತನಗೊಳಿಸುವುದು, ಆ ದೇಶದ ನಾಯಕರನ್ನು ಪದಚ್ಯುತಿ ಮಾಡುವುದು, ಮತ್ತು ಅಗತ್ಯವಿದ್ದರೆ ಹತ್ಯೆಗೆಯ್ಯುವುದು ಅಮೇರಿಕದ ಮಿಲಿಟರಿ–ವಿದೇಶಾಂಗ ನೀತಿಯ ಒಂದು ಅನಿವಾರ್ಯ ಭಾಗ. ಕಾಂಗೊದಲ್ಲಿ ವಜ್ರದ ಗಣಿ ಮತ್ತಿತರ ನಿಕ್ಷೇಪಗಳನ್ನು ರಾಷ್ಟೀಕರಿಸಿದ ಪೆಟ್ರೀಕ್ ಲುಮುಂಬ, ಚಿಲಿಯಲ್ಲಿ ತಾಮ್ರದ ಗಣಿಗಳನ್ನು ರಾಷ್ಟ್ರೀಕರಿಸಿದ ಅಲೆಂಡೆ, ಸ್ವತಂತ್ರ ತೈಲ ನೀತಿ ಅನುಸರಿಸಲು ಯತ್ನಸಿದ ಇರಾಕಿನ ಸದ್ದಾಂ ಹುಸೇನ್ ಇವರೆಲ್ಲರ ಹತ್ಯೆಗಳು ಕೆಲವು ಉದಾರಣೆಗಳು. 1950ರ ದಶಕದಲ್ಲಿ ತೈಲ ಬಾವಿಗಳನ್ನು ರಾಷ್ಟ್ರೀಕರಿಸಿದ ಇರಾನಿನ ಪ್ರಧಾನಿ ಮೊಸದೆಗ್ ಅವರನ್ನು ಮಿಲಿಟರಿ ಕ್ಷಿಪ್ರದಂಗೆಯಲ್ಲಿ ಪದಚ್ಯುತಗೊಳಿಸಿ ಆಮರಣಾಂತ ಗೃಹಬಂಧನದಲ್ಲಿಡಲಾಗಿತ್ತು. ಬೊಲಿವಿಯಾ ಮತ್ತು ಇವೊ ಮೊಲಾರಸ್ ಮೇಲೂ ಇದೇ ಪ್ರಯೋಗವನ್ನು ಪುನರಾವರ್ತಿಸಲಾಯಿತು. 2000 ರ ದಶಕದಿಂದಲೇ ಮೊರಾಲೆಸ್ ವಿರೋಧಿ ಗುಂಪುಗಳನ್ನು ಹುಟ್ಟು ಹಾಕಿ ಅವರ ಸರಕಾರವನ್ನು ಉರುಳಿಸಲು ಪಿತೂರಿ ಆರಂಭವಾಯಿತು. ಕಳೆದೊಂದು ವರ್ಷದಲ್ಲೇ ಇದಕ್ಕೆ 10 ಕೋಟಿ ಡಾಲರುಗಳಷ್ಟು ಅನುದಾನ ಕೊಡಲಾಗಿತ್ತು.

2019ರಲ್ಲಿ ಅಮೇರಿಕಾದ ಸಿಐಎ ಪ್ರೇರಿತ ಸೈನಿಕ ಕ್ಷಿಪ್ರಕ್ರಾಂತಿಯನ್ನು ನಡೆಸಿತು. ತನ್ನ ಕುಟುಂಬ ಹಾಗೂ ಸಂಗಾತಿಗಳ ರಕ್ಷಣೆಗಾಗಿ ಮೊರಾಲಸ್ ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಟ್ಟು ಮೆಕ್ಸಿಕೋ ತಲುಪಿದರು, ಮತ್ತು ಅಲ್ಲಿಂದ ಅರ್ಜಂಟೈನಾಗೆ ಹೋಗಿ ಉಳಿದುಕೊಂಡರು. ಅಮೇರಿಕಾ ತನ್ನ ಆಡುಗೊಂಬೆ ಜನ್ನೈನ್ ಅನೇಜ್ ನ್ನು ಬೊಲಿವಿಯಾದ ಅಧ್ಯಕ್ಷ ಸ್ಥಾನದಲ್ಲಿ ನೇಮಿಸಿತು (ಚುನಾವಣೆ ಇಲ್ಲದೆ). ಈತ ಮೊರಾಲೆಸ್ ಸರಕಾರದ ಲೀಥೀಯಂ ಸಂಬಂಧಿತ ಕ್ರಮಗಳನ್ನೆಲ್ಲ ರದ್ದು ಮಾಡಿ ಮತ್ತೆ ಬಹುರಾಷ್ಟ್ರೀಯ ಕಂಪನಿಗಳಿಗೆ ಕೊಡುವ ಕ್ರಮ ಪ್ರಾರಂಭಿಸಿದ್ದ. ಆದರೆ ಆತನ ಸರಕಾರದ ವಿರುದ್ಧ ನಡೆದ ತೀವ್ರ ಚಳುವಳಿಯ ಒತ್ತಡದಿಂದಾಗಿ ಅಕ್ಟೋಬರ್ ನಲ್ಲಿ ನಡೆದ ಚುನಾವಣೆಯಲ್ಲಿ 'ಸಮಾಜವಾದಕ್ಕಾಗಿ ಚಳವಳಿ' (ಎಂ.ಎ.ಎಸ್) ಪಕ್ಷ ಮತ್ತೆ ಪ್ರಚಂಡ ಬಹುಮತದೊಂದಿಗೆ ಗೆದ್ದು ಬಂದಿತು.

ಲೀಥೀಯಂ ನ್ನು ರಾಷ್ಟ್ರೀಯ ಸಂಪನ್ಮೂಲವಾಗಿ ಕಾಪಾಡಿ ಬೆಳೆಸುವ ನೀತಿಯನ್ನು ಬೊಲಿವಿಯದ ಹೊಸ ಸರಕಾರ ಮತ್ತೆ ಸ್ಥಾಪಿಸಲಿದೆ. ಲಿಥೀಯಂ 21ನೇ ಶತಮಾನದ ಜಗತ್ತಿನ ಇಂಧನ ಆರ್ಥಿಕದಲ್ಲಿ ನವತೈಲದ ಸ್ಥಾನ ಪಡೆದಿದೆ. 20ನೇ ಶತಮಾನದಲ್ಲಿ ಆಗಿನ ಇಂಧನ ಆರ್ಥಿಕದ ಪ್ರಧಾನ ಸಂಪನ್ಮೂಲವಾಗಿದ್ದ ತೈಲದ ನಿಕ್ಷೇಪಗಳ ಮತ್ತು ತಂತ್ರಜ್ಞಾನದ ಮೇಲೆ ಬೆರಳೆಣಿಕೆಯ ಬಹುರಾಷ್ಟ್ರೀಯ ಕಂಪನಿಗಳು ಸಾಮ್ರಾಜ್ಯಶಾಹಿ ಮಿಲಿಟರಿ ಬಲದೊಂದಿಗೆ ಏಕಸ್ವಾಮ್ಯ ಹಿಡಿತ ಸಾಧಿಸಿದ್ದವು. ಈಗ ಲಿಥೀಯಂ ಕುರಿತು ಬೊಲಿವಿಯದಲ್ಲಿ ಕ್ಷಿಪ್ರದಂಗೆ ಮೂಲಕ ಅದರ ಪುನರಾವರ್ತನೆಗೆ ಪ್ರಯತ್ನಿಸುತ್ತಿವೆ. ಆದರೆ ಬೊಲಿವಿಯದ ಜನತೆ ಮತ್ತು ಎಂ.ಎ.ಎಸ್ ಪಕ್ಷ ಅದಕ್ಕೆ ಪ್ರಬಲ ತಡೆಯೊಡ್ಡಿದೆ ಎಂಬುದು ಸಕಾರಾತ್ಮಕ ಬೆಳವಣಿಗೆ. ●












# ಈಗ ಕೇರಳ ಎಲ್‌ಡಿಎಫ್ ಸರಕಾರದ ಮೇಲೆ ಗುರಿ

**ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿರುವಂತೆ ಕಾಂಗ್ರೆಸ್ ಮತ್ತು ಬಿಜೆಪಿ ಎಲ್‌ಡಿಎಫ್ ಸರಕಾರದ ಮೇಲೆ ತಮ್ಮ ದಾಳಿಯ ಹರಹನ್ನು ವಿಸ್ತರಿಸಲು ಮುಚ್ಚುಮರೆಯಿಲ್ಲದೆ ಮುಂದಡಿಯಿಟ್ಟಿವೆ. ಕೆಲವು ಕೇಂದ್ರೀಯ ಏಜೆನ್ಸಿಗಳನ್ನು ಕೂಡ ಈ ದುಷ್ಟ ಆಟದಲ್ಲಿ ಸೇರಿಸಿಕೊಳ್ಳಲಾಗಿದೆ.**
**ಸದ್ಯ, ನಾಲ್ಕು ಕೇಂದ್ರೀಯ ಏಜೆನ್ಸಿಗಳು ಚಿನ್ನದ ಕಳ್ಳಸಾಗಾಣಿಕೆಯ ತಮ್ಮ ತನಿಖೆಗಳನ್ನು ಸರಕಾರದ ವಿವಿಧ ಪರಿಯೋಜನೆಗಳು ಮತ್ತು ಸ್ಕೀಮುಗಳಿಗೆ ವಿಸ್ತರಿಸಲು ಜಿಗಿ-ಹಲಗೆಯಾಗಿ ಉಪಯೋಗಿಸುತ್ತಿವೆ. ದಿಲ್ಲಿಯಲ್ಲಿ ನಾಲ್ಕು ಪುಟಗಳನ್ನು ಸೇರಿಸಿದ ಸಿಎಜಿ ವರದಿಯನ್ನು ಎಲ್‌ಡಿಎಫ್ ಸರಕಾರದ ವಿರುದ್ಧ ಒಂದು ಅಸ್ತ್ರವಾಗಿಸುವ ಪ್ರಯತ್ನದಲ್ಲಿ ಕಾಂಗ್ರೆಸ್-ಬಿಜೆಪಿ ಶಾಮೀಲಾಗಿವೆ.**
**ಸಿಪಿಐ(ಎಂ) ಮತ್ತು ಎಲ್‌ಡಿಎಫ್ ಈ ಪಿತೂರಿಗಳಿಗೆ ಇದಿರೇಟು ನೀಡಲು ಮತ್ತು ಅವನ್ನು ಜನಗಳ ಮುಂದೆ ಬಯಲಿಗೆಳೆಯಲು ನಿರ್ಧಾರ ಮಾಡಿವೆ.**



## ಪ್ರಕಾಶ ಕಾರಟ್

ಕೇರಳದ ಎಡ ಪ್ರಜಾಪ್ರಭುತ್ವ ರಂಗದ ಸರಕಾರವನ್ನು ಕಳಂಕಿತಗೊಳಿಸುವ, ಅದರ ಹೆಸರುಗೆಡಿಸುವ ಪ್ರಯತ್ನಗಳು ಕಳೆದ ಕೆಲವು ವಾರಗಳಲ್ಲಿ ಹೆಚ್ಚುತ್ತಿವೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಬಿಜೆಪಿ ಚಿನ್ನದ ಕಳ್ಳಸಾಗಾಣಿಕೆಯ ಪ್ರಕರಣವನ್ನು ಬಳಸಿಕೊಂಡು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಎಲ್‌ಡಿಎಫ್ ಸರಕಾರದ ಮೇಲೆ ಗುರಿಯಿಡಲು ಚಳುವಳಿಗಳನ್ನು ನಡೆಸಿವೆ.

ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿರುವಂತೆ ಕಾಂಗ್ರೆಸ್ ಮತ್ತು ಬಿಜೆಪಿಗಳು ಸರಕಾರದ ಮೇಲೆ ತಮ್ಮ ದಾಳಿಯ ಹರಹನ್ನು ವಿಸ್ತರಿಸಲು ಮುಚ್ಚುಮರೆಯಿಲ್ಲದೆ ಮುಂದಡಿಯಿಟ್ಟಿವೆ. ಕೆಲವು ಕೇಂದ್ರೀಯ ಏಜೆನ್ಸಿಗಳನ್ನು ಕೂಡ ಈ ದುಷ್ಟ ಆಟದಲ್ಲಿ ಸೇರಿಸಿಕೊಳ್ಳಲಾಗಿದೆ.

ಸದ್ಯ, ನಾಲ್ಕು ಕೇಂದ್ರೀಯ ಏಜೆನ್ಸಿಗಳು– ರಾಷ್ಟ್ರೀಯ ತನಿಖಾ ಏಜೆನ್ಸಿ(ಎನ್‌ಐಎ), ಕಸ್ಟಮ್ಸ್, ಜಾರಿ ನಿರ್ದೇಶನಾಲಯ(ಇ.ಡಿ.) ಮತ್ತು ಕೇಂದ್ರೀಯ ತನಿಖಾ ಬ್ಯೂರೊ(ಸಿಬಿಐ)– ಚಿನ್ನದ ಕಳ್ಳಸಾಗಾಣಿಕೆಲು ಪ್ರಕರಣದ ತನಿಖೆ ಮಾಡುತ್ತಿವೆ ಮತ್ತು ಅದನ್ನು ತಮ್ಮ ತನಿಖೆಗಳನ್ನು ಸರಕಾರದ ವಿವಿಧ ಪರಿಯೋಜನೆಗಳು ಮತ್ತು ಸ್ಕೀಮುಗಳಿಗೆ ವಿಸ್ತರಿಸಲು ಜಿಗಿ ಹಲಗೆಯಾಗಿ ಉಪಯೋಗಿಸುತ್ತಿವೆ.

ಜುಲೈನಲ್ಲಿ ರಾಜತಾಂತ್ರಿಕ ಬ್ಯಾಗೇಜಿನ ಮೂಲಕ ಚಿನ್ನದ ಕಳ್ಳಸಾಗಾಣಿಕೆ ಕಂಡು ಬಂದಾಗ, ಮುಖ್ಯಮಂತ್ರಿಗಳು ತಕ್ಷಣವೇ ಒಂದು ಸೂಕ್ತ ಕೇಂದ್ರೀಯ ಏಜೆನ್ಸಿ ಮೂಲಕ ತನಿಖೆ ನಡೆಸುವಂತೆ ಕೇಳಿದರು. ಇದು ಅಗತ್ಯವಾಗಿತ್ತು, ಏಕೆಂದರೆ ಇದು ಆಜ್ಯಸರಕಾರದ ಅಧಿಕಾರ ವ್ಯಾಪ್ತಿಯ ಹೊರಗಿರುವ ಒಂದು ವಿಷಯವಾಗಿತ್ತು ಮತ್ತು ವಿದೇಶದಿಂದ ರಾಜತಾಂತ್ರಿಕ ದಾರಿಗಳ ಮೂಲಕ ಕಳ್ಳಸಾಗಾಣಿಕೆಯ ವಿಷಯ ಅದರಲ್ಲಿತ್ತು. ಗೃಹ ಮಂತ್ರಾಲಯ, ಇದರಲ್ಲಿ ಮೇಲ್ನೋಟಕ್ಕೆ ಯಾವುದೇ ಭಯೋತ್ಪಾದಕರಿಗೆ ನಿಧಿ ಸಂಗ್ರಹಿಸುವ ಅಥವ ರಾಷ್ಟ್ರೀಯ ಭದ್ರತೆಗೆ ಬೆದರಿಕೆಯ ಆಧಾರಗಳು ಕಾಣದಿದ್ದರೂ, ತನಿಖೆಯನ್ನು ಎನ್‌ಐಎ ಗೆ ವಹಿಸಿತು. ಪ್ರಕರಣವನ್ನು ಆರಂಭದಲ್ಲಿ ದಾಖಲಿಸಿಕೊಂಡ ಕಸ್ಟಮ್ಸ್ ನವರು ತಮ್ಮ ತನಿಖೆಯನ್ನು ಮುಂದುವರೆಸುತ್ತಿದ್ದಾರೆ. ಕ್ರಿಯೆಗಿಳಿದ ಇ.ಡಿ. ಮುಖ್ಯಮಂತ್ರಿಗಳ ಕಚೇರಿಯಲ್ಲಿ ಪ್ರಮುಖ ಕಾರ್ಯದರ್ಶಿ ಮತ್ತು ಐಟಿ ಕಾರ್ಯದರ್ಶಿಯಾಗಿದ್ದ ಶಿವಶಂಕರ್ ಅವರ ಬಂಧನವನ್ನು ನಡೆಸಿತು, ಈಗ ತನ್ನ ತನಿಖೆಯನ್ನು ಕೇರಳ ಫೈಬರ್ ಆಪ್ಟಿಕ್ ನೆಟ್‌ವರ್ಕ್(ಕೆ-ಫೊನ್), ಕೊಚಿ ಸ್ಮಾರ್ಟ್ ಸಿಟಿ, ಟಾರಸ್ ಪ್ರಾಜೆಕ್ಟ್ ಮತ್ತು ಇ-ಮೊಬೊಲಿಟಿ ಪ್ರಾಜೆಕ್ಟ್ ಮುಂತಾದ ಇತರ ಸರಕಾರೀ ಪರಿಯೋಜನೆಗಳಿಗೆ ವಿಸ್ತರಿಸಿದೆ.

ಈ ನಡುವೆ, ಸಿಬಿಐ, ಯು.ಎ.ಇ.ಯ ರೆಡ್ ಕ್ರೆಸೆಂಟ್ 'ಲೈಫ್ ಮಿಶನ್' ಅಡಿಯಲ್ಲಿ ಫ್ಲಾಟ್‌ಗಳ ನಿರ್ಮಾಣಕ್ಕೆ ಸಂಬಂಧಪಟ್ಟ ಪ್ರಕರಣದಲ್ಲಿ ಮೇಲಿಂದ ಧುಮುಕಿ ಬಿಟ್ಟಿದೆ. ರೆಡ್ ಕ್ರೆಸೆಂಟ್ 2018ರ ತೀವ್ರ ಪ್ರವಾಹದಿಂದ ಸಂತ್ರಸ್ತರಾದವರಿಗೆ ಫ್ಲಾಟ್‌ಗಳನ್ನು ಒದಗಿಸುವ ಲೈಫ್ ಮಿಶನ್‌ನ ಪರಿಯೋಜನೆಯ ಭಾಗವಾಗಿ 142 ಫ್ಲಾಟ್‌ಗಳನ್ನು ನಿರ್ಮಿಸಲು ಒಂದು ಖಾಸಗಿ ಬಿಲ್ಡರ್‌ನೊಂದಿಗೆ ಕಾಂಟ್ರಾಕ್ಟ್ ಮಾಡಿಕೊಂಡಿತು. ಕೇರಳ ಸರಕಾರ ಅಥವ ಲೈಫ್ ಮಿಶನ್ ಈ ಕಾಂಟ್ರಾಕ್ಟ್‌ನ ಭಾಗೀದಾರರೇನೂ ಅಲ್ಲ. ಆದರೂ ಒಬ್ಬ ಕಾಂಗ್ರೆಸ್ ಶಾಸಕನ ದೂರಿನ ಮೇಲೆ ವಿದೇಶಿ ವಂತಿಗೆಗಳು (ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ) ಯ ಉಲ್ಲಂಘನೆಯ ಕೇಸನ್ನು ಹಾಕಿದೆ ಮತ್ತು ಎಫ್‌ಐಆರ್ ನಲ್ಲಿ ಲೈಫ್ ಮಿಶನ್‌ನ ಅಧಿಕಾರಿಗಳನ್ನು ಸಿಗಿಸಿದೆ. ಈ ವಿಷಯದಲ್ಲಿ ಒಂದು ವಿಜಿಲೆನ್ಸ್ ತನಿಖೆಯನ್ನು ಆರಂಭಿಸಿರುವ ರಾಜ್ಯ ಸರಕಾರಕ್ಕೆ ಈ ಬಗ್ಗೆ ತಿಳಿಸಿಯೇ ಇಲ್ಲ. ಎಫ್‌ಸಿಆರ್‌ಎ ವಿದೇಶಿ ವಂತಿಗೆಗಳು/ ಕೊಡುಗೆಗಳಿಗೆ ಸಂಬಂಧಪಟ್ಟದ್ದು, ಈ ಸ್ವರೂಪದ ವಾಣಿಜ್ಯ ಕಾಂಟ್ರಾಕ್ಟ್ ಅದರ ವ್ಯಾಪ್ತಿಗೆ ಬರುವುದಿಲ್ಲ. ಲೈಫ್ ಮಿಶನ್‌ನ ಅಧಿಕಾರಿಗಳು ಕೇರಳ ಹೈಕೋರ್ಟಿನಲ್ಲಿ ಹಾಕಿದ ಅರ್ಜಿಯನ್ನು ಪರಿಶೀಲಿಸಿ ಈ ವಿಷಯ ಎಫ್‌ಸಿಆರ್‌ಎ ನ ಸಂಬಂಧಪಟ್ಟ ಪರಿಚ್ಛೇದದ ಅಡಿಯಲ್ಲಿ ಬರುವುದಿಲ್ಲ ಎಂದು ಸಿಬಿಐ ತನಿಖೆಗೆ ಎರಡು ತಿಂಗಳ ತಡೆಯಾಜ್ಞೆ ಬಂದಿದೆ.

ಅತ್ತ ಕಾಂಗ್ರೆಸ್ ಪಕ್ಷದ ಅಖಿಲ ಭಾರತ ಮುಖಂಡತ್ವ, ಅದರ ಅಧ್ಯಕ್ಷರಾಗಿರುವ ಸೋನಿಯಾ ಗಾಂಧಿ, ಸಾರ್ವಜನಿಕವಾಗಿಯೇ ಸಿಬಿಐ, ಎನ್‌ಐಎ, ಮತ್ತು ಮಾದಕ ವಸ್ತುಗಳ ಬ್ಯುರೋವನ್ನು ಪ್ರತಿಕ್ಷಗಳ ಮೇಲೆ ಗುರಿಯಿಡಲು ಬಳಸಲಾಗುತ್ತಿದೆ ಎಂದು ಘೋಷಿಸಿರುವಾಗ, ಕೇರಳದಲ್ಲಿ ಪ್ರತಿಪಕ್ಷದ ಮುಖಂಡ ರಮೇಶ ಚೆನ್ನಿತಾಲ ಮತ್ತು ಇತರ ರಾಜ್ಯ ಕಾಂಗ್ರೆಸ್ ಮುಖಂಡರುಗಳು ಮತ್ತೆ-ಮತ್ತೆ ಸಿಬಿಐ ಮತ್ತು ಇತರ ಕೇಂದೀಯ ಏಜೆನ್ಸಿಗಳ ತನಿಖೆಗಳನ್ನು ನಡೆಸಬೇಕು ಎಂದು ಆಗ್ರಹಿಸುತ್ತಿದ್ದಾರೆ. ರಾಹುಲ್ ಗಾಂಧಿ ಕೂಡ ತನ್ನ ಹಿಂದಿನ ಕೇರಳ ಭೇಟಿ ಕಾಲದಲ್ಲಿ ಇದೇ ರೀತಿಯಲ್ಲಿ ಕೇಂದ್ರೀಯ ಏಜೆನ್ಸಿಗಳ ದುರುಪಯೋಗದ ಟಿಪ್ಪಣಿ ಮಾಡಿದಾಗ, ರಮೇಶ ಚೆನ್ನಿತಾಲ ಅವನ್ನು ನಿರಾಕರಿಸಿ, ಇಂತಹ ವಿಷಯಗಳನ್ನು ರಾಜ್ಯ ಕಾಂಗ್ರೆಸ್ ನಿರ್ಧರಿಸುತ್ತದೆ ಎಂದಿದ್ದರು. ಕಾಂಗ್ರೆಸ್ ಮತ್ತು ಬಿಜೆಪಿ ಮುಖಂಡರ ನಡುವೆ ಸಂಯೋಜನೆ ಇದೆ ಎಂಬುದು ಅವರು ಕೇಂದ್ರೀಯ ಏಜೆನ್ಸಿಗಳ ತನಿಖೆಗಳಿಗೆ ಸಂಬಂಧಪಟ್ಟಂತೆ ಎಲ್ಲ ಬೆಳೆದು ಬರುತ್ತಿರುವ ಪ್ರಶ್ನೆಗಳಲ್ಲಿ ಒಂದೇ ರೀತಿಯ ಹೇಳಿಕೆಗಳನ್ನು ಕೊಡುವಾಗ ಎದ್ದು ಕಾಣುತ್ತಿದೆ.

ಲೈಫ್ ಮಿಶನ್ ಕೇರಳದಲ್ಲಿ ಸ್ವಂತ ಮನೆಯಿಲ್ಲದ ಎಲ್ಲ ಕುಟುಂಬಗಳಿಗೆ ಮನೆಗಳನ್ನು ಒದಗಿಸುವ ಕೆಲಸದಲ್ಲಿ ತೊಡಗಿದೆ. ಇದುವರೆಗೆ ಕಳೆದ ಮೂರು ವರ್ಷಗಳಲ್ಲಿ ಎರಡೂವರೆ ಲಕ್ಷ ಮನೆಗಳನ್ನು ಫಲಾನುಭವಿಗಳಿಗೆ ಒದಗಿಸಲಾಗಿದೆ; ಕೆ-ಫೊನ್ ಪ್ರಾಜೆಕ್ಟ್‌ನ ಗುರಿ ಪ್ರತಿ ಹಳ್ಳಿಗೆ ಇಂಟರ್ನೆಟ್ ಬ್ರಾಡ್ ಬ್ಯಾಂಡ್ ಸಂಪರ್ಕ ಕೊಡುವುದು, ಮತ್ತು ರಾಜ್ಯದಲ್ಲಿ ಪ್ರತಿಮನೆಗೆ ಸಂಪರ್ಕ ನೀಡುವುದು. ಸ್ಮಾರ್ಟ್ ಸಿಟಿ ಮತ್ತು ಇ-ಮೊಬಿಲಿಟಿ(ವಿದ್ಯುತ್ ಬಸ್‌ಗಳ ಬಳಕೆ) ಮಹತ್ವದ ಅಭಿವೃದ್ಧಿ ಪರಿಯೋಜನೆಗಳು. ಈ ಎಲ್ಲ ಅಭಿವೃದ್ಧಿ ಯೋಜನೆಗಳನ್ನು ಇ.ಡಿ. ಮತ್ತು ಸಿಬಿಐ ಕಡತಗಳನ್ನು ಸಲ್ಲಿಸುವಂತೆ ಆದೇಶಿಸುವ ಮೂಲಕ ಮತ್ತು ಇವುಗಳ ಅನುಷ್ಠಾನಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಿರುಕುಳ ಕೊಡುವ ಮೂಲಕ ಅಸ್ತವ್ಯಸ್ತಗೊಳಿಸಲು ಪ್ರಯತ್ನಿಸುತ್ತಿವೆ.

ಎಲ್‌ಡಿಎಫ್ ಸರಕಾರದ ಅಭಿವೃದ್ಧಿ ಯೋಜನೆಗಳ ಮೇಲೆ ದಾಳಿಗಳು ಕೇರಳ ಮೂಲರಚನೆ ಹೂಡಿಕೆ ನಿಧಿ ಮಂಡಳಿ(ಕೆಐಐಎಫ್‌ಬಿ) ಮೇಲೆ ಮಹಾಲೆಕ್ಕ ಪರಿಶೋಧಕರ(ಸಿಎಜಿ) ವರದಿಯೊಂದಿಗೆ ವಿಸ್ತಾರಗೊಂಡಿದೆ. ಕೆಐಐಎಫ್‌ಬಿ ರಾಜ್ಯದಲ್ಲಿ ಮೂಲರಚನೆ ಅಭಿವೃದ್ಧಿಗೆ ನಿಧಿಗಳನ್ನು ಅಣಿನೆರೆಸಲು ಒಂದು ಮಹತ್ವದ ವಾಹನವಾಗಿ ಬಿಟ್ಟಿದೆ. ಸಾಲಗಳು ಮತ್ತು ಸಾಲಪತ್ರಗಳನ್ನು ನೀಡುವ ಮೂಲಕ ಇದು ಸುಮಾರು 60,000 ಕೋಟಿ ರೂ.ಗಳನ್ನು ಎತ್ತಿದೆ. ಈ ನಿಧಿಗಳನ್ನೇ ಸರಕಾರೀ ಶಾಲೆಗಳನ್ನು ಸ್ಮಾರ್ಟ್ ತರಗತಿಗಳು ಮತ್ತು ಕಂಪ್ಯೂಟರ್ ಲ್ಯಾಬ್‌ಗಳ ಮೂಲಕ ಜಾಗತಿಕ ಮಟ್ಟಗಳಿಗೆ ಏರಿಸಲು ಒದಗಿಸಲಾಗಿದೆ. ಇದುವರೆಗೆ ಈ ರೀತಿಯಲ್ಲಿ 310 ಶಾಲೆಗಳನ್ನು ಕಟ್ಟಲಾಗಿದೆ ಮತ್ತು ಮೇಲ್ಮಟ್ಟಕ್ಕೆ ಏರಿಸಲಾಗಿದೆ. ರಸ್ತೆಗಳು, ಸೇತುವೆಗಳು ಮತ್ತು ಆಸ್ಪತ್ರೆಗಳ ನಿರ್ಮಾಣವನ್ನು ದೊಡ್ಡ ಪ್ರಮಾಣದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಹಿಂದಿನ ನಾಲ್ಕು ವರ್ಷಗಳಲ್ಲಿ ಹಣಕಾಸು ಮತ್ತು ಸಾಮಾಜಿಕ ಮೂಲರಚನೆಗಳ ಅಭಿವೃದ್ಧಿ ಎದ್ದು ಕಾಣುತ್ತಿರುವುದು ಕೆಐಐಎಫ್‌ಬಿ ಎತ್ತಿದ ನಿಧಿಗಳಿಂದಾಗಿ. ರಾಜ್ಯ ಸರಕಾರಗಳು ಸಾಲ ಎತ್ತುವುದಕ್ಕೆ ಕಠಿಣ ಮಿತಿಗಳಿರುವುದರಿಂದಾಗಿ ಮತ್ತು ಮೂಲರಚನೆ ಅಭಿವೃದ್ಧಿಗೆ ಕೇಂದ್ರ ಸರಕಾರದ ಹಣಕಾಸು ಬೆಂಬಲದ ಕೊರತೆಯಿಂದಾಗಿ ಕೇರಳ ಸರಕಾರ ಈ ವಿಧಾನವನ್ನು ಅನುಸರಿಸಬೇಕಾಗಿ ಬಂತು. ಸಿಎಜಿ ತನ್ನ ಅಂತಿಮ ವರದಿಯಲ್ಲಿ ಇರುವ ಒಂದು ವಿಭಾಗದಲ್ಲಿ ವಿದೇಶಗಳಲ್ಲಿ ಸಾಲಪತ್ರಗಳ ಮೂಲಕ ರಾಜ್ಯಗಳು ನಿಧಿಗಳನ್ನು ಸಂಗ್ರಹಿಸುವುದು ಅಸಂವಿಧಾನಿಕ ಎಂದು ಹೇಳಲಾಗಿದೆ.

ಎಂಟು ತಿಂಗಳ ದೀರ್ಘಕಾಲದ ವರೆಗೆ ನಡೆದ ಕೆಐಐಫ್‌ಬಿ ಯ ಲೆಕ್ಕ ಪರಿಶೋಧನೆಯಲ್ಲಿ ಅಲಕೌಂಟೆಂಟ್ ಜನರಲ್ ಎತ್ತಿದ ಎಲ್ಲ 76 ಪ್ರಶ್ನೆಗಳಿಗೆ ವಿವರವಾದ ಉತ್ತರಗಳನ್ನು ನೀಡಲಾಯಿತು, ಕೆಐಐಎಫ್‌ಬಿಯ ಪ್ರಾಜೆಕ್ಟ್‌ಗಳ ಯಾವುದೇ ನಿಧಿ ನೀಡಿಕೆಯಲ್ಲಿ ಅನಿಯಮಿತತೆಗಳು ಕಂಡು ಬರಲಿಲ್ಲ. ದಿಲ್ಲಿಯಲ್ಲಿ ಕರಡು ವರದಿಗೆ ಕೆಐಐಎಫ್‌ಬಿ ಎತ್ತಿದ ಸಾಲಗಳು ಅಸಂವಿಧಾನಿಕ ಎಂದು ಹೇಳುವ ನಾಲ್ಕು ಪುಟಗಳನ್ನು ಸೇರಿಸಲಾಯಿತು ಎಂಬ ಆಶ್ಚರ್ಯಕರ ಸಂಗತಿಯನ್ನು ಕೇರಳದ ಹಣಕಾಸು ಮಂತ್ರಿ ಥಾಮಸ್ ಐಸಾಕ್ ಹೊರಗೆಡಹಿದ್ದಾರೆ. ಈ ವಿಷಯವನ್ನು ಕುರಿತಂತೆ ಎಂದೂ ರಾಜ್ಯ ಸರಕಾರದ ಅಭಿಪ್ರಾಯಕ್ಕೆ ಅದರೊಡನೆ ಸಮಾಲೋಚನೆ ನಡೆಸಿಲ್ಲ ಎಂದು ಹಣಕಾಸು ಮಂತ್ರಿಗಳು ಒತ್ತಿ ಹೇಳಿದ್ದಾರೆ. ಕೆಐಐಎಫ್‌ಬಿ ಒಂದು ಕಾರ್ಪೊರೇಟ್ ಸಂಸ್ಥೆಯಾದ್ದರಿಂದ ಅದಕ್ಕೆ ಈಗಿರುವ ನಿಯಮಗಳ ಪ್ರಕಾರ ಸಾಲಗಳನ್ನು ಎತ್ತುವ ಹಕ್ಕು ಇದೆ ಎಂದೂ ಅವರು ಖಡಾಖಂಡಿತವಾಗಿ ಹೇಳಿದ್ದಾರೆ.

ಸಿಎಜಿ ವರದಿಯನ್ನು ಎಲ್‌ಡಿಎಫ್ ಸರಕಾರದ ವಿರುದ್ಧ ಒಂದು ಅಸ್ತ್ರವಾಗಿಸುವ ಪ್ರಯತ್ನದಲ್ಲಿ ಕಾಂಗ್ರೆಸ್-ಬಿಜೆಪಿಯ ಶಾಮೀಲು ಸ್ವಯಂವೇದ್ಯ. ಆರೆಸ್ಸೆಸ್ ಸಂಘಟನೆಯಾದ ಸ್ವದೇಶೀ ಜಾಗರಣ್ ಮಂಚ್(ಎಸ್‌ಜೆಎಂ) ಹೈಕೋರ್ಟಿನಲ್ಲಿ ಒಂದು ಅರ್ಜಿ ಸಲ್ಲಿಸಿ, ವಿದೇಶಗಳಲ್ಲಿ ಮಾರಿದ ಸಾಲಪತ್ರಗಳು ಕಾನೂನುಬಾಹಿರ ಎಂದು ಘೋಷಿಸಿ ಈ ಮೂಲಕ ಕೆಐಐಎಫ್‌ಬಿ ಸಂಗ್ರಹಿಸಿದ ನಿಧಿಗಳನ್ನು ಸ್ಥಗಿತಗೊಳಿಸಬೇಕು ಎಂದು ಕೇಳಿದೆ. ಈ ಎಸ್‌ಜೆಎಂ ನ್ನು ಪ್ರತಿನಿಧಿಸುವ ವಕೀಲ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಮ್ಯಾಥ್ಯು ಕುಳಾಲನಾಡನ್. ಎಲ್‌ಡಿಎಫ್ ಸರಕಾರದ ಜನಪರ ಕಾರ್ಯಕ್ರಮಗಳನ್ನು ಮತ್ತು ಅಭಿವೃದ್ಧಿ ಪ್ರಯತ್ನಗಳನ್ನು ಛಿದ್ರಗೊಳಿಸುವ ಗ್ಯಾಂಗ್‌ನಂತೆ ವರ್ತಿಸಲು ಬಿಜೆಪಿಗಾಗಲೀ, ಕಾಂಗ್ರೆಸ್‌ಗಾಗಲೀ ಯಾವುದೇ ಅಳುಕೂ ಇಲ್ಲ.

ಕೇರಳದಲ್ಲಿ ಸಿಪಿಐ(ಎಂ) ಮತ್ತು ಎಲ್‌ಡಿಎಫ್ ಈ ಪಿತೂರಿಗಳಿಗೆ ಇದಿರೇಟು ನೀಡಲು ಮತ್ತು ಅವುಗಳನ್ನು ಜನಗಳ ಮುಂದೆ ಬಯಲಿಗೆಳೆಯಲು ನಿರ್ಧಾರ ಮಾಡಿವೆ. ನವಂಬರ್ 16 ರಂದು ರಾಜ್ಯಾದ್ಯಂತ 25ಲಕ್ಷ ಜನಗಳು ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದರು. ಇವುಗಳಲ್ಲಿ ಜನಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಛಿದ್ರಗೊಳಿಸುವ ಕೇಂದ್ರೀಯ ಏಜೆನ್ಸಿಗಳ ಪ್ರಯತ್ನಗಳನ್ನು ಖಂಡಿಸಲಾಯಿತು.

ಕೇರಳ ಸ್ಥಳೀಯ ಸಂಸ್ಥೆಗಳಿಗೆ– ಮೂರು ಹಂತಗಳ ಪಂಚಾಯತುಗಳು, ನಗರ ಸಭೆಗಳು, ಮಹಾನಗರಸಭೆಗಳಿಗೆ ಚುನಾವಣೆಗಳಿಗೆ ಸಿದ್ಧಗೊಳ್ಳುತ್ತಿರುವಂತೆ, ಪೂರ್ಣ ಹುರುಪಿನಿಂದ ಕೂಡಿದ ಎಲ್‌ಡಿಎಫ್ ಪರವಾಗಿರುವ ರಾಜಕೀಯ ಅಣಿನೆರಿಕೆ, ಈ ಸಮಯಸಾಧಕ, ಛಿದ್ರಕಾರೀ ಕೂಟಗಳಿಗೆ ಒಂದು ತಕ್ಕ ಉತ್ತರವಾಗಲಿದೆ. ■

**ನವಂಬರ್ 16 ರಂದು ರಾಜ್ಯಾದ್ಯಂತ 25 ಲಕ್ಷ ಜನಗಳು ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದರು. ಇವುಗಳಲ್ಲಿ ಜನಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಛಿದ್ರಗೊಳಿಸುವ ಕೇಂದ್ರೀಯ ಏಜೆನ್ಸಿಗಳ ಪ್ರಯತ್ನಗಳನ್ನು ಖಂಡಿಸಲಾಯಿತು.**



## ಕರ್ನಾಟಕ ಭೂಸುಧಾರಣೆ (ಎರಡನೇ ತಿದ್ದುಪಡಿ) ಸುಗ್ರೀವಾಜ್ಞೆ–2020

# ಕಾರ್ಪೋರೇಟ್ ಕೃಷಿ ಹೇರುವ, ಸಾರ್ವಜನಿಕ ಆಸ್ತಿಗಳ ಲೂಟಿಗೆ ತೆರೆಯುವ ಸುಗ್ರೀವಾಜ್ಞೆ

**ಯು. ಬಸವರಾಜ**




ಕರ್ನಾಟಕ ರಾಜ್ಯ ಸರಕಾರ ಕಳೆದ ನವೆಂಬರ್ 2, 2020 ರಂದು ಕರ್ನಾಟಕ ಭೂಸುಧಾರಣೆ (ಎರಡನೇ ತಿದ್ದುಪಡಿ) ಸುಗ್ರೀವಾಜ್ಞೆ – 2020 ನ್ನು ಪ್ರಕಟಿಸಿದೆ. ಸದರಿ ಸುಗ್ರೀವಾಜ್ಞೆಗೂ ರಾಜ್ಯದ ರೈತರಿಂದ ವ್ಯಾಪಕ ಪ್ರತಿರೋಧ ವ್ಯಕ್ತವಾಗಿದೆ.

ವಾಸ್ತವಿಕವಾಗಿ, ಕಳೆದ ಅಕ್ಟೋಬರ್ ನಲ್ಲಿಯೇ ಮಂತ್ರಿಮಂಡಲ ಈ ಸುಗ್ರೀವಾಜ್ಞೆಯನ್ನು ಹೊರಡಿಸಲು ನಿರ್ಧರಿಸಿತ್ತಾದರೂ, ಅದು ಶಿರಾ ಮತ್ತು ರಾಜರಾಜೇಶ್ವರಿ ನಗರಗಳ ವಿಧಾನಸಭಾ ಉಪಚುನಾವಣೆಗಳು ಮತ್ತು ನಾಲ್ಕು ವಿಧಾನ ಪರಿಷತ್ ಚುನಾವಣೆಗಳ ನಂತರ, ಅವುಗಳ ಮೇಲೆ ಸದರಿ ಸುಗ್ರೀವಾಜ್ಞೆಯ ದುಷ್ಪರಿಣಾಮವಾಗದಂತೆ ಎಚ್ಚರಿಕೆಯ ಕ್ರಮವಹಿಸಿ ಪ್ರಕಟಿಸಿದೆ.

ಕಳೆದ ಬಾರಿ ಹೊರಡಿಸಿದ ಕರ್ನಾಟಕ ಭೂಸುಧಾರಣಾ ಸುಗ್ರೀವಾಜ್ಞೆ – 2020 (13)ರ ಆರು ತಿಂಗಳ ಅವಧಿಯು ಕಳೆದ ಅಕ್ಟೋಬರ್ ನಲ್ಲಿಯೇ ಮುಕ್ತಾಯಗೊಂಡಿದೆ. ಸದರಿ ಸುಗ್ರೀವಾಜ್ಞೆಯನ್ನು ಕಳೆದ ಸೆಪ್ಟಂಬರ್‌ನಲ್ಲಿ ನಡೆದ ವಿಧಾನ ಮಂಡಲದ ಅಧಿವೇಶನಗಳಲ್ಲಿ ಮಸೂದೆಯಾಗಿ ಮಂಡಿಸಿ ಅಂಗೀಕರಿಸ ಬೇಕಿತ್ತು. ಸದರಿ ಸುಗ್ರೀವಾಜ್ಞೆಯ ಮಸೂದೆಯು, ವಿಧಾನ ಸಭೆಯಲ್ಲಿ ಮಂಡಿಸಲ್ಪಟ್ಟು ವಿರೋಧ ಪಕ್ಷಗಳ ತೀವ್ರ ವಿರೋಧದ ನಡುವೆಯು ಅಂಗೀಕಾರಗೊಂಡಿತ್ತು. ಆದರೆ ವಿಧಾನ ಪರಿಷತ್ ನಲ್ಲಿ ಬಿಜೆಪಿಗೆ ಬಹುಮತವಿಲ್ಲದ ಪ್ರಯುಕ್ತ ಮಸೂದೆಯನ್ನು ಮಂಡಿಸಲಾಗಲಿಲ್ಲ. ಹೀಗಾಗಿ ಅದು ಕಾಯ್ದೆಯಾಗಲು ಸಾಧ್ಯವಾಗಿಲ್ಲ.

ರಾಜ್ಯದಾದ್ಯಂತ ರೈತರು ಈ ರೈತ ವಿರೋಧಿ ಮಸೂದೆಯ ವಿರುದ್ದ ಕರ್ನಾಟಕ ಬಂದ್ ನಡೆಸಿದ್ದರು. ಹೀಗಾಗಿ, ಮರಳಿ ಈ ಸುಗ್ರೀವಾಜ್ಞೆಯನ್ನು ಪ್ರಕಟಿಸಿದೆ.

ರಾಜ್ಯದ ರೈತರು ಹಾಗೂ ವಿರೋಧ ಪಕ್ಷಗಳ ವಿರೋಧ ವ್ಯಾಪಕವಾಗಿರುವಾಗ, ಮರಳಿ ಸುಗ್ರೀವಾಜ್ಞೆ ಹೊರಡಿಸುವ ಜರೂರು ಏನಿತ್ತು ಎಂಬ ಪ್ರಶ್ನೆ ಮೂಡುವುದು ಸಹಜವಾಗಿದೆ. ಇರಲಿ, ಕೊನೆಯಲ್ಲಿ ಇದಕ್ಕೆ ಉತ್ತರ ಹುಡುಕಬಹುದು.

**ಈ ಸುಗ್ರೀವಾಜ್ಞೆಯಲ್ಲೇನಿದೆ?**

ಕರ್ನಾಟಕ ಸುಗ್ರೀವಾಜ್ಞೆ ಸಂಖ್ಯೆ 23/2020 ಆಗಿ, ಕರ್ನಾಟಕ ಭೂಸುಧಾರಣಾ (ಎರಡನೇ ತಿದ್ದುಪಡಿ) ಸುಗ್ರೀವಾಜ್ಞೆ– 2020 ನ್ನು ಪ್ರಕಟಿಸಿದೆ.

ಈ ಸುಗ್ರೀವಾಜ್ಞೆಯು, ಮೊದಲಿಗೆ, ಮೊದಲ ಕಲಂನ ಎರಡನೇ ಅಂಶದಲ್ಲಿ ಅದರ ಕಲಂ: 2,3,4,5,6,10 ಮತ್ತು 11 ಪ್ರಕರಣಗಳು 1974 ಮಾರ್ಚ್ 01 ರಿಂದಲೇ ಜಾರಿಗೆ ಬಂದವುಗಳೆಂದು ಪರಿಭಾವಿಸಲು ಹೇಳುತ್ತದೆ. ಅದೇ ರೀತಿ, ಉಳಿದ ಕಲಂ ಗಳನ್ನು ಜೂಲೈ 13, 2020 ರಿಂದಲೇ ಜಾರಿಗೆ ಬಂದವುಗಳೆಂದು ಪರಿಭಾವಿಸಲು ಹೇಳುತ್ತದೆ. ಬಹುಶಃ ಇವುಗಳೇ ತುರ್ತಾಗಿ ಈ ಸುಗ್ರೀವಾಜ್ಞೆ ಹೊರಡಿಸಲಿರುವ ಜರೂರಾಗಿವೆ.

**ಅಪರಾಧಿಗಳಿಗೆ, ಕಂಪನಿಗಳಿಗೆ ಕೃಷಿ ಭೂಮಿ ನೀಡುವ ಕೃಷಿಕರ ಉದ್ಯೋಗ ಭದ್ರತೆಗೆ ಧಕ್ಕೆ ತರುವ ಹುನ್ನಾರ**

ಮೂಲ ಕಾಯ್ದೆಯ, ಕೃಷಿ ಭೂಮಿಯ ವರ್ಗಾವಣೆ ಹಾಗೂ ಒಡೆತನದ ಮೇಲಿನ ನಿರ್ಬಂಧಗಳ ಅಧ್ಯಾಯ– 6 ರಿಂದ ಕಲಂ 79–ಎ, 79– ಬಿ, 79–ಸಿ ಗಳನ್ನು ತಗೆದು ಹಾಕಲಾಗಿದೆ.

ಕಲಂ–79 ಎ "ಕೆಲ ವ್ಯಕ್ತಿಗಳು ಭೂ ಸ್ವಾಧೀನ ಮಾಡಿಕೊಳ್ಳುವುದನ್ನು ನಿಷೇಧಿಸಿತ್ತು". ಅದರಂತೆ, ಯಾವುದೇ ವ್ಯಕ್ತಿ ಅಥವಾ ಕುಟುಂಬ ಅಥವಾ ಜಂಟಿ ಕುಟುಂಬವು ಕೃಷಿಯೇತರ ಮೂಲಗಳಿಂದ 2 ಲಕ್ಷ ರೂಗಳಿಗಿಂತ ಹೆಚ್ಚಿನ ಖಚಿತ ಆದಾಯವನ್ನು ಹೊಂದಿದ್ದಲ್ಲಿ ಅಂತಹ ಕುಟುಂಬಗಳು ಭೂ ಒಡೆತನ ಹೊಂದಲು, ಗೇಣಿ ಮಾಡಲು, ಅಡವಾನವಾಡಿಕೊಂಡು ಸಾಗುವಳಿಯಲ್ಲಿ ತೊಡಗಲು, ಉಡುಗೊರೆ ಪಡೆಯಲು ಅಥವಾ ಇತರೆ, ರೀತಿಯಲ್ಲಿ ತೊಡಗಲು ಅವಕಾಶ ನೀಡುತ್ತಿರಲಿಲ್ಲ. ಕಳೆದ ಸಿದ್ಧರಾಮಯ್ಯನವರ ನೇತೃತ್ವದ ಸರಕಾರ ಕೃಷಿಯೇತರ ಖಚಿತ ಆದಾಯದ ಮಿತಿಯನ್ನು 25 ಲಕ್ಷ ರೂ.ಗಳಿಗೆ ಹೆಚ್ಚಿಸಿ ಇದನ್ನು ದುರ್ಬಲಗೊಳಿಸಿತ್ತು. ಇದೀಗ ಯಡೆಯುರಪ್ಪನವರು ಈ ಕಲಂನ್ನೇ ತಗೆದು ಹಾಕಿರುತ್ತಾರೆ. ಇದರಿಂದಾಗಿ, ಕೃಷಿ ಭೂಮಿಗಳನ್ನು ಯಾರು ಬೇಕಾದರೂ, ಎಷ್ಟೇ ಖಚಿತ ಆದಾಯ ಹೊಂದಿದ್ದರೂ, ಭೂ ಸ್ವಾಧೀನವನ್ನು ಮಾಡಿಕೊಳ್ಳಲು ಅನುಕೂಲ ಮಾಡಿಕೊಡುತ್ತದೆ. ಅದರಂತೆ, ಇವರು, ಭೂಮಾಲಕರು, ಭೂಒಡೆತನವಿರುವವರು, ಅಡಮಾನ ಮಾಡಿಕೊಂಡವರು ಮತ್ತು ಗೇಣಿದಾರರಾಗಲು, ಉಡುಗೊರೆ ಪಡೆಯುವವರಾಗಲೂ ಅವಕಾಶ ಮಾಡಿಕೊಡುತ್ತದೆ.

ಕಲಂ.79–ಬಿ, "ಕೆಲವು ವ್ಯಕ್ತಿಗಳು ಕೃಷಿ ಭೂಮಿಯ ಒಡೆತನ ಹೊಂದುವುದನ್ನು ನಿಷೇಧಿಸಿತ್ತು." ಅವರಲ್ಲಿ, ಕೃಷಿಕರಲ್ಲದ ಕುಟುಂಬಗಳ ಸದಸ್ಯರು, ಶೈಕ್ಷಣಿಕ ಹಾಗೂ ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳು, ಕಂಪನಿಗಳು, ಸಂಘ ಸಂಸ್ಥೆಗಳು, ಸಹಕಾರಿ ಫಾರಂಗಳಲ್ಲದ ಸಹಕಾರ ಸಂಘಗಳು, ಸೇರುತ್ತವೆ. ಈಗ ಈ ಕಲಂನ್ನೇ ತಗೆದು ಹಾಕಿರುವುದರಿಂದ ಈ ಎಲ್ಲರೂ (ಅಂದರೇ ಕಂಪನಿಗಳು ಸೇರಿದಂತೆ) ಕೃಷಿ ಭೂಮಿಯನ್ನು ಹೊಂದಲು ಅವಕಾಶ ನೀಡಿದಂತಾಗಿದೆ.

ಕಲಂ 79–ಸಿ, "ಕಲಂ 79ಎ ಮತ್ತು 79ಬಿ ಗಳನ್ನು ಉಲ್ಲಂಘಿಸಿ ಕೃಷಿ ಭೂಮಿಗಳನ್ನು ಹೊಂದಿದವರಿಗೆ ದಂಡ ವಿಧಿಸುತ್ತಿತ್ತು" ಮತ್ತು ಅಂತಹವರು ಅಂತಹ ಕೃಷಿ ಜಮೀನುಗಳನ್ನು ಹೊಂದಿರುವುದಕ್ಕೆ ಸಮರ್ಪಕವಾದ ಕಾರಣಗಳನ್ನು ನೀಡದಿದ್ದಲ್ಲಿ ಅಂತಹ ಜಮೀನುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತಹಸಿಲ್ದಾರರಿಗೆ ಅಧಿಕಾರವನ್ನು ನೀಡಿತ್ತು. ಈಗ ಈ ಕಲಂಗಳನ್ನು ತಗೆದು ಹಾಕಿರುವುದರಿಂದ, ಇದುವರೆಗೆ, ಈ ರೀತಿ ಕಲಂ. 79 ಎ ಮತ್ತು 79 ಬಿ ಉಲ್ಲಂಘನೆ ಮಾಡಿ ಕಂದಾಯ ಇಲಾಖೆಯ ಕೋರ್ಟಗಳಲ್ಲಿ ಲಕ್ಷಾಂತರ ಕೇಸುಗಳನ್ನು ಎದುರಿಸುತ್ತಿರುವ ಮತ್ತು ಕಪ್ಪುಹಣದ ಖದೀಮರು, ಸಾಲಬಾಧಿತ ಬಡರೈತರಿಂದ ಬಲವಂತವಾಗಿ ಸ್ವಾಧೀನ ಪಡಿಸಿಕೊಂಡ ಭೂಮಾಲಕ ಬಂಡವಾಳದಾರರು, ಕಂಪನಿಗಳು ಇದರಿಂದಾಗಿ ಸಂರಕ್ಷಿಸಲ್ಪಟ್ಟಿದ್ದಾರೆ. ಬೆದರಿಕೆಗೊಳಗಾಗಿ ಕೃಷಿ ಭೂಮಿ ಕಳೆದುಕೊಂಡ ಬಡವರು ಬೀದಿಗೆಸೆಯಲ್ಪಟ್ಟಿದ್ದಾರೆ. ಅಕ್ರಮದಿಂದ ಸರಕಾರದ ವಶಕ್ಕೆ ಬರಬೇಕಾದ ಲಕ್ಷಾಂತರ ಎಕರೆ ಜಮೀನು ಈ ಅಕ್ರಮಿಗಳ ಕೈ ಸೇರುತ್ತದೆ. ಅವರ ಅಕ್ರಮಗಳನ್ನು ಇದು ಕಾನೂನು ಬದ್ಧಗೊಳಿಸುತ್ತದೆ. ಮಾತ್ರವಲ್ಲಾ, ಈ ತಿದ್ದುಪಡಿಯು ಭೂಮಾಲಕ ಬಂಡವಾಳದಾರರಿಗೆ, ಬಡ ಹಾಗೂ ಮಧ್ಯಮ ರೈತರ ಮೇಲೆ ಮತ್ತಷ್ಟು ದೌರ್ಜನ್ಯ ಎಸಗಲು ಇಂಬು ನೀಡುತ್ತದೆ.

ಸದರಿ ಕಾನೂನು ಬಾಹಿರ ಕೆಲಸವು 1974 ರಿಂದ ನಡೆದಿದ್ದು, ಅಂದಿನಿಂದ ಈ ದುಷ್ಕೃತ್ಯದಲ್ಲಿ ತೊಡಗಿದ್ದ ಎಲ್ಲ ಅಪರಾಧಿಗಳನ್ನು ಸಂರಕ್ಷಿಸಲು ಈ ಸುಗ್ರೀವಾಜ್ಞೆಯ 12 ನೇ ಕಲಂನಲ್ಲಿನ ಎರಡನೇ ಪ್ರಕರಣದಲ್ಲಿ ನಾಚಿಕೆಯನ್ನು ಬಿಟ್ಟು ಈ ರೀತಿ ಘೋಷಿಸುತ್ತದೆ.


"...ಈ ಸುಗ್ರೀವಾಜ್ಞೆಯ ಪ್ರಸ್ಥಾವನೆಯ ದಿನದಂದು,

ಪುಟ 10 ಕ್ಕೆ

ರಾಜ್ಯದ ರೈತರು ಹಾಗೂ ವಿರೋಧ ಪಕ್ಷಗಳ ವಿರೋಧ ವ್ಯಾಪಕವಾಗಿರುವಾಗ, ಮರಳಿ ಸುಗ್ರೀವಾಜ್ಞೆ ಹೊರಡಿಸುವ ಜರೂರು ಏನಿತ್ತು ಎಂಬ ಪ್ರಶ್ನೆ ಮೂಡುವುದು ಸಹಜವಾಗಿದೆ. ಈ ಸುಗ್ರೀವಾಜ್ಞೆಯಲ್ಲೇನಿದೆ? ಭೂಸುಧಾರಣಾ ಕಾನೂನು ಉಲ್ಲಂಘಿಸಿ ಕೃಷಿ ಭೂಮಿ ಹೊಂದಿರುವ "ಕೃಷಿಕರಲ್ಲದ ಕುಟುಂಬಗಳ ಸದಸ್ಯರು, ಶೈಕ್ಷಣಿಕ ಹಾಗೂ ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳು, ಕಂಪನಿಗಳು, ಸಂಘ ಸಂಸ್ಥೆಗಳು, ಸಹಕಾರಿ ಫಾರಂಗಳಲ್ಲದ ಸಹಕಾರ ಸಂಘಗಳು" ಮುಂತಾದ ಅಪರಾಧಿಗಳಿಗೆ, ಕಂಪನಿಗಳಿಗೆ ಕೃಷಿ ಭೂಮಿ ನೀಡುವ, ಕೃಷಿಕರ ಉದ್ಯೋಗ ಭದ್ರತೆಗೆ ಧಕ್ಕೆ ತರುವ ಹುನ್ನಾರ ಈ ಸುಗ್ರೀವಾಜ್ಞೆಯಲ್ಲಿದೆ. ಮೂಲ ಕಾಯಿದೆಯು ಕೆಲವು ಸರಕಾರಿ ಹಾಗೂ ಅರೆ ಸರಕಾರಿ ಸಂಸ್ಥೆಗಳಿಗೆ ಕೃಷಿ ಭೂಮಿಗಳನ್ನು ಅಭಿವೃದ್ಧಿ ಸಲುವಾಗಿ ಪಡೆಯಲು ರಿಯಾಯಿತಿ ನೀಡಿತ್ತು. ಈಗ ಈ ಸಂಸ್ಥೆಗಳಿಗೆ ಸೇರಿದ ಈ ಲಕ್ಷಾಂತರ ಹೆಕ್ಟಾರ್ ಜಮೀನುಗಳನ್ನು ಖಾಸಗಿ ಕಂಪನಿಗಳಿಗೆ ಮತ್ತು ಸಂಸ್ಥೆಗಳಿಗೆ ಮಾರಾಟ ಹಾಗೂ ಅಡಮಾನ ಮಾಡಲು ಅನುವು ಮಾಡಿ ಕೊಡುವ ಸಾವಿರಾರು ಕೋಟಿ ರೂಗಳನ್ನು ಲೂಟಿಗೊಳಪಡಿಸಲು ಅನುವು ಮಾಡುವ ತಿದ್ದುಪಡಿ ಈ ಸುಗ್ರೀವಾಜ್ಞೆಯ ಮೂಲಕ ತಂದಿದೆ.



ಪಿ. ಮಹಮ್ಮದ್, ವಾ.ಭಾ.



# ಏಂಗೆಲ್ಸ್ – 200

**ಫ್ರೆಡೆರಿಕ್ ಏಂಗೆಲ್ಸ್ ಅವರನ್ನು ಅನೇಕ ವೇಳೆ ಜಗತ್ತಿನ ಮೊದಲ ಮಾರ್ಕ್ಸ್‌ವಾದಿ ಎಂದು ಕರೆಯಲಾಗುತ್ತದೆ. ತನ್ನ ವಿನಮ್ರ ಸ್ವಭಾವದಿಂದಾಗಿ ಏಂಗೆಲ್ಸ್ ಈ ಸ್ಥಾನವನ್ನು ಹೆಮ್ಮೆಯಿಂದ ಒಪ್ಪಿಕೊಂಡಿರಬಹುದು., 'ಮಾರ್ಕ್ಸ್ ಮಹಾಮೇಧಾವಿ; ನಾವು ಉಳಿದವರು ಹೆಚ್ಚೆಂದರೆ ಪ್ರತಿಭಾವಂತರಷ್ಟೆ' ಎಂದು ಹೇಳಿರಬಹುದು. ಆದರೂ, ಏಂಗೆಲ್ಸ್ ಕುರಿತ ಮಾರ್ಕ್ಸ್ ಅವರ ಅಭಿಪ್ರಾಯ ಹಾಗೂ ಮಾರ್ಕ್ಸ್‌ವಾದಿ ವಿಶ್ವದೃಷ್ಟಿಕೋನದ ಸೈದ್ಧಾಂತಿಕ ಬುನಾದಿಯ ಅರಳುವಿಕೆಯಲ್ಲಿ ಅವರು ಏಂಗೆಲ್ಸ್‌ಗೆ ನೀಡಿದ ವಿಶೇಷ ಸ್ಥಾನಮಾನವನ್ನು ಗಮನಿಸಲೇಬೇಕು.**

**ಲೆನಿನ್ ಹೇಳುವಂತೆ, ಏಂಗೆಲ್ಸ್ "ಕಾರ್ಮಿಕ ವರ್ಗಕ್ಕೆ ತನ್ನನ್ನು ತಾನು ಅರಿತುಕೊಳ್ಳಲು ಮತ್ತು ತನ್ನ ಬಗ್ಗೆ ಪ್ರಜ್ಞಾಶೀಲವಾಗಲು ಕಲಿಸಿದರು, ಮತ್ತು ಅವರ ಕನಸುಗಳಿಗೆ ವಿಜ್ಞಾನವನ್ನು ಬದಲಿಯಾಗಿಸಿದರು...."**

**ಸೀತಾರಾಂ ಯೆಚುರಿ**
**ಅನುವಾದ: ಟಿ. ಸುರೇಂದ್ರ ರಾವ್**

ಫ್ರೆಡೆರಿಕ್ ಏಂಗೆಲ್ಸ್ ಅವರ 200ನೇ ಜನ್ಮ ದಿನಾಚರಣೆಯು ನವಂಬರ್ 28, 2020 ರಂದು ನಡೆಯಲಿದೆ. ಪರಿಸ್ಥಿಗಳು ಸಾಮಾನ್ಯವಾಗಿದ್ದರೆ, ಉಲ್ಬಣವಾಗುತ್ತಿರುವ ಮಹಾರೋಗ, ಅಗತ್ಯ ಮುಂಜಾಗರೂಕತೆ ಮತ್ತು ಲಾಕ್ಡೌನ್ ಕಟ್ಟುಪಾಡುಗಳು ಇಲ್ಲದಿರುತ್ತಿದ್ದರೆ, ಸಿಪಿಐ(ಎಂ) 2018–19ರಲ್ಲಿ ಮಾರ್ಕ್ಸ್200 ಆಚರಿಸಿದ್ದಂತೆಯೇ ಏಂಗೆಲ್ಸ್ ಅವರ ಹುಟ್ಟುಹಬ್ಬವನ್ನೂ ಯಥೋಚಿತವಾಗಿ ಆಚರಿಸುತ್ತಿತ್ತು.

ಮಾರ್ಕ್ಸ್‌ವಾದಿ ಜಾಗತಿಕ ದೃಷ್ಟಿಕೋನದ ವಿಕಸನ ಮತ್ತು ವಿಸ್ತೃತ ವಿವರಣೆಯಲ್ಲಿ ಏಂಗೆಲ್ಸ್ ಅವರ ಸೈದ್ಧಾಂತಿಕ ಕೊಡುಗೆಗಳು ಬಹಳ ಮಹತ್ವದ್ದಾಗಿವೆ, ದ್ವಂದ್ವಮಾನ ವಿಧಾನದ ಅರಳುವಿಕೆಯನ್ನು ಹಾಗೂ ಜಗತ್ತಿನ ಭೌತಿಕ ಬೆಳವಣಿಗೆ ಮತ್ತು ಜೀವ, ಅವುಗಳ ಉಗಮ, ವಿಕಸನ ಮತ್ತು ಮಾನವ ಸಮಾಜದ ಬೆಳವಣಿಗೆಯ ಪ್ರತಿಯೊಂದು ನಿಯಮದಲ್ಲಿನ ದ್ವಂದ್ವಮಾನತೆಯ ಆವಿಷ್ಕಾರವನ್ನು ಅರಿತುಕೊಳ್ಳಲು ಒಂದು ಸಮೃದ್ಧ ಆಕರವಾಗಿವೆ. ಎಂದಿನಂತೆ ಈ ಎಲ್ಲಾ ಕೊಡುಗೆಗಳನ್ನು ಹಾಗೂ ಮಾನವನ ಚಿಂತನೆ, ಬುದ್ಧಿ ಹಾಗೂ ನಾಗರೀಕತೆಯ ಮುನ್ನಡೆಯ ಮೇಲೆ ಬೀರಿದ ಮೂಲ ಪ್ರಭಾವಗಳನ್ನು ಮರುಅಭ್ಯಾಸ ಮಾಡುವುದರ ಮೂಲಕ ಅವರ ಬದುಕು ಮತ್ತು ಕೃತಿಗಳ ಆಚರಣೆಯು ನಡೆಯಬೇಕಾಗಿತ್ತು.

ಇದೊಂದು ಬಹಳ ವಿಸ್ತಾರವಾದ ವಿಷಯ. ಇದನ್ನು ಒಂದೇ ಲೇಖನದ ಮೂಲಕ ಹೇಳುವುದು ಕಷ್ಟವೇ ಸರಿ. ಇವತ್ತಿನ ಎಲ್ಲಾ ಇತಿಮಿತಿಗಳ ನಡುವೆಯೂ ಪಕ್ಷವು ಈ ಎಲ್ಲಾ ವಿಚಾರಗಳ ಬಗ್ಗೆ ವರ್ಷವಿಡೀ ಕಾರ್ಯಕ್ರಮಗಳನ್ನು ಆಯೋಜಿಸಲಿದೆ.

ಒಂದು ಬಹು ಮುಖ್ಯವಾದ ಅಂಶದ ಬಗ್ಗೆ ನಾನು ಈಗ ಹೇಳುತ್ತೇನೆ: ಒಂದು ವಿಚಾರಪಂಥವಾಗಿ ಮಾರ್ಕ್ಸ್‌ವಾದವು ಸಿದ್ಧಾಂತ ಹಾಗೂ ಪ್ರಯೋಗಗಳನ್ನು ದ್ವಂದ್ವಾತ್ಮಕವಾಗಿ ಒಂದುಗೂಡಿಸುತ್ತದೆ, ಇದಕ್ಕೆ ಕಾರ್ಲ್ ಮಾರ್ಕ್ಸ್‌ರಿಂದ ಆ ಹೆಸರು ಬಂದಿದೆ. ಕೆಲವೊಮ್ಮೆ ಏಂಗೆಲ್ಸ್ ಹೆಸರನ್ನು ಅವರು ಎರಡನೆಯ ಪಾತ್ರ ವಹಿಸಿದವರೆಂಬಂತೆ ತೆಗೆದುಕೊಳ್ಳಲಾಗುತ್ತದೆ. ಇದು ದುರದೃಷ್ಟಕರ. ಇಂತಹ ತೀರ್ಮಾನಕ್ಕೆ ಬರುವುದು ಬಹಳ ತಪ್ಪಾಗುತ್ತದೆ. ಇದಕ್ಕೆ ಏಂಗೆಲ್ಸ್ ತನ್ನ ಕೃತಿಗಳಲ್ಲಿ ಭೌತಿಕ ಹಾಗೂ ಸಾಮಾಜಿಕ ಬದುಕಿನ ಎಲ್ಲಾ ಅಂಶಗಳಲ್ಲಿ ದ್ವಂದ್ವಮಾನದ ಅರಳಿಕೆಯನ್ನು ವಿಸ್ತರಿಸಿದ ರೀತಿಯೇ ಸಾಕ್ಷಿ. ಇವುಗಳಲ್ಲಿ ಪ್ರತಿಯೊಂದೂ ಮಾನವ ನಾಗರೀಕತೆಯ ಮುನ್ನಡೆ ಹಾಗೂ ಅಸಾಧಾರಣವಾದ ಹೊಸ ಹೊಸ ವೈಜ್ಞಾನಿಕ ಆವಿಷ್ಕಾರಗಳ ಇಂದಿನ ಸಂದರ್ಭದಲ್ಲಿ ಮತ್ತೊಮ್ಮೆ ಸರಿಯಾಗಿ ಅಭ್ಯಾಸ ಮಾಡಲು ಯೋಗ್ಯವಾದವುಗಳು.

## ಜಂಟಿಯಾಗಿ ಮಾರ್ಕ್ಸ್‌ವಾದದ ವಿಕಸನ

ಫ್ರೆಡೆರಿಕ್ ಏಂಗೆಲ್ಸ್ ಅವರನ್ನು ಅನೇಕ ವೇಳೆ ಜಗತ್ತಿನ ಮೊದಲ ಮಾರ್ಕ್ಸ್‌ವಾದಿ ಎಂದು ಕರೆಯಲಾಗುತ್ತದೆ. ತನ್ನನ್ನು ತಾನೇ ಮರೆಯಲ್ಲಿಟ್ಟುಕೊಳ್ಳುವ ತನ್ನ ವಿನಮ್ರ ಸ್ವಭಾವದಿಂದಾಗಿ ಏಂಗೆಲ್ಸ್ ಈ ಸ್ಥಾನವನ್ನು ಹೆಮ್ಮೆಯಿಂದ ಒಪ್ಪಿಕೊಂಡಿರಬಹುದು.

"ಮಾರ್ಕ್ಸ್ ಪೂರ್ಣ ಮಾಡಿದ್ದನ್ನು, ನಾನು ಸಾಧಿಸಲು ಆಗುತ್ತಿರಲಿಲ್ಲ. ಮಾರ್ಕ್ಸ್ ಎತ್ತರದಲ್ಲಿದ್ದರು, ಮುಂಗಾಣುತ್ತಿದ್ದರು, ಮತ್ತು ನಮ್ಮೆಲ್ಲರಿಗಿಂತ ವಿಶಾಲವಾದ ಹಾಗೂ ತ್ವರಿತವಾದ ದೃಷ್ಟಿಯನ್ನು ಹೊಂದಿದ್ದರು. ಮಾರ್ಕ್ಸ್ ಮಹಾಮೇಧಾವಿ; ನಾವು ಉಳಿದವರು ಹೆಚ್ಚೆಂದರೆ ಪ್ರತಿಭಾವಂತರಷ್ಟೆ. ಅವರಿಲ್ಲದೇ, ಸಿದ್ಧಾಂತವು ಇವತ್ತು ಇರುವುದಕ್ಕಿಂತ ಬಹಳ ದೂರದಲ್ಲೇ ಇರುತ್ತಿತ್ತು. ಆದ್ದರಿಂದ ಅದು ಅವರ ಹೆಸರನ್ನು ಹೊಂದಿರುವುದು ಸರಿಯಾಗಿಯೇ ಇದೆ" ಎಂದು ಒಮ್ಮೆ ಏಂಗೆಲ್ಸ್ ಹೇಳಿದ್ದರು.

ಇವೆಲ್ಲವುದರ ಹೊರತಾಗಿಯೂ, ಏಂಗೆಲ್ಸ್ ಕುರಿತ ಮಾರ್ಕ್ಸ್ ಅವರ ಅಭಿಪ್ರಾಯ ಹಾಗೂ ಮಾರ್ಕ್ಸ್‌ವಾದಿ ವಿಶ್ವದೃಷ್ಟಿಕೋನದ ಸೈದ್ಧಾಂತಿಕ ಬುನಾದಿಯ ಅರಳುವಿಕೆಯಲ್ಲಿ ಅವರು ಏಂಗೆಲ್ಸ್‌ಗೆ ನೀಡಿದ ವಿಶೇಷ ಸ್ಥಾನಮಾನವನ್ನು ಅವಶ್ಯವಾಗಿ ಮೆಚ್ಚಲೇಬೇಕು.

## ಮಾರ್ಕ್ಸ್–ಏಂಗೆಲ್ಸ್ ಸಹಯೋಗ

ಮಾರ್ಕ್ಸ್ ಅವರು 'ರೈನಿಷೆ ಜೈಟುಂಗ್' ಪತ್ರಿಕೆಯನ್ನು ಸಂಪಾದಿಸುತ್ತಿದ್ದರು, ಅದನ್ನು ಪ್ರತಿಗಾಮಿ ಪ್ರಶ್ಯನ್ ಪ್ರಭುತ್ವವು ಮಾರ್ಚ್ 1843 ರಲ್ಲಿ ನಿಷೇಧಿಸಿತು, 1844 ರ ಆರಂಭದಲ್ಲಿ ಮಾರ್ಕ್ಸ್ ಪ್ಯಾರಿಸ್ಸಿಗೆ ಹೋದರು. ಅಲ್ಲಿ ಅವರು 'ಡೊಯಿಟ್ಶ್–ಫ್ರಾಂಜೋಸಿಶೆ ಯಾಹ್ರ್ ಬುಖೆರ್'' ನಿಯತಕಾಲಿಕ ಪತ್ರಿಕೆಯನ್ನು ಪ್ರಾರಂಭಿಸಿದರು. ಏಂಗೆಲ್ಸ್ ಯುವ ಬರಹಗಾರನಾಗಿ ಮತ್ತು ನಂತರ ಆ ಪ್ರಕಾಶನದ ಸಹೋದ್ಯಮಿಯಾದರು. 1844 ರಲ್ಲಿ ಏಂಗೆಲ್ಸ್ 'ಔಟ್‌ಲೈನ್ ಆಫ್ ಎ ಕ್ರಿಟಿಕ್ ಆಫ್ ಪೊಲಿಟಿಕಲ್ ಎಕಾನಮಿ'(ರಾಜಕೀಯ ಅರ್ಥಶಾಸ್ತ್ರದ ಒಂದು ವಿಮರ್ಶೆಯ ರೂಪುರೇಷೆ) ಎಂಬ ಲೇಖನ ಬರೆದರು. ಅದರಲ್ಲಿ, ಬಂಡವಾಳಶಾಹಿ ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಗೆ ಬುನಾದಿ ತತ್ವಗಳನ್ನು ಏಂಗೆಲ್ಸ್ ಮಂಡಿಸಿದರು. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಉತ್ಪಾದನಾ ಸಾಧನಗಳ ಖಾಸಗಿ ಒಡೆತನದ ನಿಯಮಗಳಿಂದಾಗಿ ಎಲ್ಲಾ ಪ್ರಮುಖ ವಿದ್ಯಮಾನಗಳು ಅನಿವಾರ್ಯವಾಗಿ ಮೇಲೇಳುತ್ತವೆ ಮತ್ತು ಇಂತಹ ಖಾಸಗಿ ಒಡೆತನವಿಲ್ಲದ ಸಮಾಜದಲ್ಲಿ ಮಾತ್ರವೇ ಬಡತನವಿಲ್ಲದ ಸಮಾಜವೊಂದು ಸಾಧ್ಯವಾಗಬಹುದು ಎಂಬುದನ್ನು ಏಂಗೆಲ್ಸ್ ತೋರಿಸಿಕೊಟ್ಟರು. ಇದು ಮಾರ್ಕ್ಸ್‌ರನ್ನು ಬಹಳವಾಗಿ ಆಕರ್ಷಿಸಿತು. ತಾನು ತನ್ನ ಹೆಗೆಲಿಯನ್ ತತ್ವಶಾಸ್ತ್ರದ ವಿಮರ್ಶಾತ್ಮಕ ಲೇಖನದಲ್ಲಿ ಬಂದಿದ್ದ ಅದೇ ತೀರ್ಮಾನಕ್ಕೆ ಬಂಡವಾಳಶಾಹಿ ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಯ ಮೂಲಕ, ಮತ್ತೊಬ್ಬ ಚಿಂತಕ, ಸ್ವತಂತ್ರವಾಗಿ ಬಂದಿದ್ದಾನೆ ಎಂಬ ತೀರ್ಮಾನಕ್ಕೆ ಮಾರ್ಕ್ಸ್ ಬಂದರು. ಇದು ಅವರಿಬ್ಬರ ನಡುವಿನ ಆಜೀವ ಪರ್ಯಂತ ಸಹಯೋಗಕ್ಕೆ, ಸ್ನೇಹಕ್ಕೆ, ಒಡನಾಟಕ್ಕೆ ಮತ್ತು ಮಾರ್ಕ್ಸ್‌ವಾದಿ ವಿಶ್ವ ದೃಷ್ಟಿಕೋನದ ವಿಕಸನದಲ್ಲಿ ಜಂಟೀ ಕೊಡುಗೆಗಳಿಗೆ ಭದ್ರಬುನಾದಿಯನ್ನು ಹಾಕಿತು.

ಏಂಗೆಲ್ಸ್ ಅವರ ಪಥಪ್ರದರ್ಶಕ ಕೃತಿ, 'ಇಂಗ್ಲೆಂಡಿನಲ್ಲಿನ ಕಾರ್ಮಿಕ ವರ್ಗದ ಪರಿಸ್ಥಿತಿ' ಕೈಗಾರಿಕಾ ಕ್ರಾಂತಿಯ ಆರಂಭದಲ್ಲಿ ಇಂಗ್ಲೆಂಡಿನಲ್ಲಿ ಉಂಟಾಗುತ್ತಿದ್ದುದರ ಕುರಿತ ಮಾರ್ಕ್ಸ್ ಅವರ ಆಲೋಚನಾ ನಿಲುವಿನ ಮೇಲೆ ಬಹಳ ಪರಿಣಾಮ ಬೀರಿತು. ಆಗಸ್ಟ್ 1844 ರಲ್ಲಿ ಆ ಹತ್ತು ದಿನಗಳ ವಿನಿಮಯಗಳ ಸಮಯದಲ್ಲಿ, ಏಂಗೆಲ್ಸ್ ಬಗೆಗಿನ ಮಾರ್ಕ್ಸ್ ಅವರ ಅಭಿಮಾನ ಬಹಳವಾಗಿ ಹೆಚ್ಚಿತು. ಏಂಗೆಲ್ಸ್ ಅವರ ಧೈರ್ಯ, ಕಾರ್ಯತತ್ಪರತೆ, ಏಕಚಿತ್ತತೆಯನ್ನು ಅವರು ಮೆಚ್ಚಿದರು ಮತ್ತು ಅಂದಿನ ಎಲ್ಲಾ ಸೈದ್ಧಾಂತಿಕ ಪ್ರಶ್ನೆಗಳ ವಿಚಾರದಲ್ಲಿ ಇಬ್ಬರೂ ಪರಸ್ಪರ ಸಮ್ಮತಿಯನ್ನು ಹೊಂದಿದ್ದೇವೆ ಎಂಬುದನ್ನು ಗಮನಿಸಿದರು.

ತತ್ವಜ್ಞಾನ ಮತ್ತು ರಾಜಕೀಯ ಅರ್ಥಶಾಸ್ತ್ರದ ಮೇಲಿನ ಭಾವನಾವಾದದ ಪ್ರಭಾವದ ವಿರುದ್ಧ ಹೋರಾಡುತ್ತಾ, 1844 ರಲ್ಲಿ ಅವರ ಮೊದಲ ಜಂಟೀ ಕೃತಿ **'ದಿ ಹೋಲಿ ಫ್ಯಾಮಿಲಿ ಆರ್ ಕ್ರಿಟೀಕ್ ಆಫ್ ಕ್ರಿಟಿಕಲ್ ಕ್ರಿಟಿಸಿಸಂ'**(ಪವಿತ್ರ ಕುಟುಂಬ ಅಥವ ವಿಮರ್ಶೆಯ ವಿಮರ್ಶಾತ್ಮಕ ವಿಮರ್ಶಾ ಲೇಖನ) ವನ್ನು ಪರಸ್ಪರ ಸಹಯೋಗದಲ್ಲಿ ಬರೆದರು.

ಅದರಲ್ಲಿ, ಅತಿ ಮಾನುಷ ಶಕ್ತಿಗಳಾಗಲೀ, ಮಾನವ ಪ್ರಜ್ಞೆಯಾಗಲೀ ಅಥವಾ ನಾಯಕರುಗಳಾಗಲೀ ಇತಿಹಾಸವನ್ನು ಮಾಡಲಿಲ್ಲ ಎಂದು ಮಾರ್ಕ್ಸ್ ಮತ್ತು ಏಂಗೆಲ್ಸ್ ಒಟ್ಟಿಗೇ ಸಾಬೀತು ಮಾಡಿದರು. ದುಡಿಯುವ ಜನರು ಮಾತ್ರವೇ ತಮ್ಮ ಶ್ರಮ ಮತ್ತು ರಾಜಕೀಯ ಹೋರಾಟಗಳ ಮೂಲಕ ಸಮಾಜವನ್ನು ಮುಂದಕ್ಕೆ ಕೊಂಡೊಯ್ದರು. ತಮ್ಮ ಬದುಕುವ ಸ್ಥಿತಿಯನ್ನು ಅಂತ್ಯಗೊಳಿಸದೇ, ಅಂದರೆ ಸಮಕಾಲೀನ ಬಂಡವಾಳಶಾಹಿ ಸಮಾಜವನ್ನು ಬದಲಾಯಿಸದೇ ಶ್ರಮಿಕರು ತಮ್ಮ ವಿಮೋಚನೆ ಮಾಡಿಕೊಳ್ಳಲು ಸಾಧ್ಯವಿಲ್ಲ ಎನ್ನುವುದನ್ನು ಇದು ತೋರಿಸುತ್ತದೆ. ಒಂದು ವರ್ಗವಾಗಿ ಶ್ರಮಜೀವಿ ವರ್ಗದ ಐತಿಹಾಸಿಕ ವಿಮೋಚನಾ ಗುರಿಯನ್ನು ಅದರಲ್ಲಿ ವಿವರಿಸಲಾಗಿದೆ.

ಆದಾಗ್ಯೂ, ತಾತ್ವಿಕ ಮಟ್ಟದಲ್ಲಿ, ಭಾವನಾವಾದದ ಪ್ರಾಬಲ್ಯವನ್ನು ಎದುರಿಸಬೇಕು ಮತ್ತು ಭೌತಿಕವಾದಿ ಬುನಾದಿಯನ್ನು ಸ್ಥಾಪಿಸಬೇಕು. ಇದನ್ನು, ಮಾರ್ಕ್ಸ್ ಮತ್ತು ಏಂಗೆಲ್ಸ್ ಇಬ್ಬರೂ ಒಟ್ಟಿಗೇ 1845–46 ರಲ್ಲಿ ತಮ್ಮ 'ಜರ್ಮನ್ ಐಡಿಯಾಲಜಿ'(ಜರ್ಮನ್ ಸಿದ್ಧಾಂತ)ಯಲ್ಲಿ ಪ್ರತಿಪಾದಿಸಿದರು. ಮೊಟ್ಟ ಮೊದಲ ಬಾರಿಗೆ, ಕಾರ್ಮಿಕ ವರ್ಗದ ಜಾಗತಿಕ ದೃಷ್ಟಿಕೋನದ –ದ್ವಂದ್ವಾತ್ಮಕ ಹಾಗೂ ಐತಿಹಾಸಿಕ ಭೌತಿಕವಾದದ – ಮೂಲಾಧಾರವನ್ನು ಸಮಗ್ರವಾಗಿ ಮತ್ತು ವ್ಯವಸ್ಥಿತವಾಗಿ ಸ್ಪಷ್ಟಪಡಿಸಿದರು.


ನಿಜ ಹೇಳಬೇಕೆಂದರೆ, 1843–1845 ರ ಅವಧಿಯು ಮಾರ್ಕ್ಸ್‌ವಾದಿ ಜಾಗತಿಕ ದೃಷ್ಟಿಕೋನದ ವಿಕಸನದಲ್ಲಿ ಒಂದು ಪರ್ವಕಾಲ: ಕ್ರಾಂತಿಕಾರಿ ಪ್ರಜಾಪ್ರಭುತ್ವದಿಂದ ಶ್ರಮಿಕರ ಕ್ರಾಂತಿಯ ಕಡೆಗೆ, ಹೆಗೆಲ್‌ನ ಪ್ರಭಾವದಿಂದ ಚಾರಿತ್ರಿಕ ಭೌತಿಕವಾದದೆಡೆಗೆ ಹಾಗೂ ತತ್ವಶಾಸ್ತ್ರದಿಂದ ರಾಜಕೀಯ ಅರ್ಥಶಾಸ್ತ್ರದತ್ತ ಪರಿವರ್ತನೆಯ ಕಾಲವಾಗಿತ್ತು. ಇದರಲ್ಲಿ, ಮಾರ್ಕ್ಸ್ ಮತ್ತು ಏಂಗೆಲ್ಸ್ ಇಬ್ಬರೂ ಒಟ್ಟಿಗೇ ಪ್ರಾಥಮಿಕ ಪಾತ್ರ ವಹಿಸಿದರು.

ಕಾನೂನನ್ನು ಕುರಿತ ಹೆಗೆಲ್ ತತ್ವಶಾಸ್ತ್ರವನ್ನು ವಿಮರ್ಶಾತ್ಮಕವಾಗಿ ಪರಿಶೀಲನೆ ಮಾಡಿದ ನಂತರ ಮಾರ್ಕ್ಸ್, ಕಾನೂನುಬದ್ಧ ಸಂಬಂಧಗಳನ್ನಾಗಲೀ, ರಾಜಕೀಯ ರೂಪಗಳನ್ನಾಗಲೀ, ಅವುಗಳಿಂದಲೇ, ಅಥವಾ ಮಾನವ ಮನಸ್ಸಿನ ಅಥವಾ ಪ್ರಜ್ಞೆಯ ಬೆಳವಣಿಗೆಯ ಆಧಾರದಿಂದಾಗಲೀ ಗ್ರಹಿಸಲಾಗದು, ಬದಲಿಗೆ ಬದುಕಿನ ಭೌತಿಕ ಸ್ಥಿತಿಗತಿಗಳ ಆಧಾರದಲ್ಲಿ ಕಂಡುಕೊಳ್ಳಬೇಕು ಎಂಬ ತೀರ್ಮಾನಕ್ಕೆ ಬಂದರು.

"ಪರತತ್ವದ ಅನಾವರಣದ" ಪ್ರಭಾವದ ಅಡಿಯಲ್ಲಿ ವಿಕಸನಗೊಳ್ಳುವ ಆದರ್ಶ ಸಮಾಜ ವ್ಯವಸ್ಥೆಯ ಪ್ರತಿಫಲನವಾಗಿ "ನಾಗರಿಕ ಸಮಾಜ"(ಸಿವಿಲ್ ಸೊಸೈಟಿ) ಎಂಬ ಪದವನ್ನು ಹೆಗೆಲ್ ಸೃಷ್ಟಿಸಿದರು; ಆದರೆ, ಈ ನಾಗರಿಕ ಸಮಾಜದ ಅಂಗರಚನೆಯನ್ನು ರಾಜಕೀಯ ಅರ್ಥಶಾಸ್ತ್ರದಲ್ಲಿ ಕಂಡುಕೊಳ್ಳಬೇಕೆಂಬ ತೀರ್ಮಾನಕ್ಕೆ ಮಾರ್ಕ್ಸ್ ಅವರು ಬರುತ್ತಾರೆ. ಇದರಿಂದ ಮುಂದಕ್ಕೆ ಸಾಗಿದ ಮಾರ್ಕ್ಸ್ ಅವರು ದ್ವಂದ್ವಮಾನ ಭೌತಿಕವಾದದ ಮೂಲ ತತ್ವಕ್ಕೆ ಬರುತ್ತಾರೆ: "ಮನುಷ್ಯರ ಅಸ್ತಿತ್ವವನ್ನು ಅವರ ಪ್ರಜ್ಞೆಯು ನಿರ್ಧರಿಸುವುದಿಲ್ಲ, ಬದಲಿಗೆ ಅವರ ಸಾಮಾಜಿಕ ಅಸ್ತಿತ್ವವು ಅವರ ಪ್ರಜ್ಞೆಯನ್ನು ನಿರ್ಧರಿಸುತ್ತದೆ."

ತತ್ವಶಾಸ್ತ್ರ ಮತ್ತು ರಾಜಕೀಯ ಆರ್ಥಶಾಸ್ತ್ರದ

**ಪುಟ 10 ನೋಡಿ**



**ನ್ಯೂಯೆ ರೈನಿಷೆ ಝ್ಯುಟುಂಗ್ ಪತ್ರಿಕೆಯ ಹೊಸ ಸಂಚಿಕೆಯ ವೀಕ್ಷಣೆ –ಮಾರ್ಕ್ಸ್ ಮತ್ತು ಎಂಗೆಲ್ಸ್**



# ಏಂಗೆಲ್ಸ್ – 200

ಪುಟ 9 ರಿಂದ

ವಿಮರ್ಶೆಗಳನ್ನು ಒಟ್ಟುಗೂಡಿಸಿ, ಮಾರ್ಕ್ಸ್ ಮತ್ತು ಏಂಗೆಲ್ಸ್ ಅವರು ಈ ಕ್ರಾಂತಿಕಾರಿ ಸಿದ್ಧಾಂತವನ್ನು ಬೆಳೆಸಿದರು: ಅದರ ಅಭಿವ್ಯಕ್ತಿಯು 1848ರಲ್ಲಿ ಅವರ ಜಂಟೀ ರಚನೆಯಾದ 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ'(ಕಮ್ಯುನಿಸ್ಟ್ ಪ್ರಣಾಳಿಕೆ)ದಲ್ಲಿ ಮತ್ತು ಮೊದಲ ಅಂತರ್ರಾಷ್ಟ್ರೀಯದ ಸ್ಥಾಪನೆಯಲ್ಲಿ ಕಾಣುತ್ತದೆ.

**ನಿಸರ್ಗ ಮತ್ತು ಮಾನವನ ಸಾಮಾಜಿಕ ಬದುಕಿನ ತತ್ವಮೀಮಾಂಸೆ**

ಬಂಡವಾಳವಾದಿ ವ್ಯವಸ್ಥೆಯ ಚಾಲನೆಯನ್ನು ಬಗೆದು ನೋಡುವ ಕೆಲಸದಲ್ಲಿ ಮಾರ್ಕ್ಸ್ ಅವರು ನಿರತರಾಗಿದ್ದಾಗ, ಏಂಗೆಲ್ಸ್ ಅವರು ಈ ಮೇಲೆ ತಿಳಿಸಿದಂತೆ ವಿವಿಧ ಕ್ಷೇತ್ರಗಳಿಗೆ ದ್ವಂದ್ವಾತ್ಮಕತೆಯ ಅರಳುವಿಕೆಯನ್ನು ವಿಸ್ತರಿಸುವ ಕಾರ್ಯದಲ್ಲಿ ಮಗ್ನರಾಗಿದ್ದರು. ಮಾರ್ಕ್ಸ್ ಅವರ ಕೆಲಸವು 'ದಾಸ್ ಕ್ಯಾಪಿಟಲ್' ಕೃತಿ ಹೊರಬರುವಂತೆ ಮಾಡಿತು: ಅದರಲ್ಲಿ, ಮಾನವನ ಶೋಷಣೆಯು ಬಂಡವಾಳಶಾಹಿಯ ಉತ್ಪಾದನಾ ಪ್ರಕ್ರಿಯೆಯಲ್ಲಿಯೇ ನಡೆಯುತ್ತದೆ ಮತ್ತು, ಆದಕಾರಣ, ಆ ವ್ಯವಸ್ಥೆಯನ್ನು ಕಿತ್ತೊಗೆಯುವುದು ಕೇವಲ ನೈತಿಕ ಪ್ರಶ್ನೆ ಮಾತ್ರವಾಗಿರದೆ ಅದು ಮಾನವನ ವಿಮೋಚನೆಗೆ ಒಂದು ವೈಜ್ಞಾನಿಕ ಅಗತ್ಯವೂ ಆಗಿದೆ ಎಂದು ಸಾಬೀತು ಮಾಡಿತು.

**ಮಾನವ – ನಿಸರ್ಗ ತತ್ವಮೀಮಾಂಸೆ :** ನಿರಂತರವಾದ ಮಾನವ ನಿಸರ್ಗ ದ್ವಂದ್ವಮಾನತೆ, ಅಂದರೆ ಉತ್ತಮ ಮಾನವ ಬದುಕಿಗೆ ಮತ್ತು ಬದುಕಿನ ಪರಿಸ್ಥಿತಿಗಳಿಗೆ ನಿಸರ್ಗವನ್ನು ವಿನಿಯೋಗಿಸಿಕೊಳ್ಳಲು ಮಾಡುವ ಯತ್ನಗಳು, ದ್ವಂದ್ವಾತ್ಮಕ ಮತ್ತು ಚಾರಿತ್ರಿಕ ಭೌತಿಕವಾದದ ಆಧಾರ. ಈ ದ್ವಂದ್ವಾತ್ಮಕ ಪ್ರಕ್ರಿಯೆಯಲ್ಲಿ, ಮನುಷ್ಯರು ನಿಸರ್ಗವನ್ನು ಬಳಸುತ್ತಾ ಅದನ್ನು ಮಾರ್ಪಾಟು ಮಾಡುತ್ತಿರುವಾಗಲೇ, ನಿಸರ್ಗವೂ ಕೂಡ ಮನುಷ್ಯನನ್ನು ರೂಪಾಂತರಿಸುತ್ತಿರುತ್ತದೆ ಮತ್ತು ಮನುಷ್ಯನ ವಿಕಸನದ ಮೇಲೆ ಪರಿಣಾಮ ಬೀರುತ್ತಿರುತ್ತದೆ. ಏಂಗೆಲ್ಸ್ ಅವರು ತಮ್ಮ ಪ್ರಬಂಧ 'ದಿ ಪಾರ್ಟ್ ಪ್ಲೇಡ್ ಬೈ ಲೇಬರ್ ಇನ್ ದಿ ಟ್ರಾನ್ಸಿಷನ್ ಫ್ರಮ್ ಎಪ್ ಟು ಮ್ಯಾನ್'(ಮಂಗನಿಂದ ಮಾನವನ ಪರಿವರ್ತನೆಯಲ್ಲಿ ಶ್ರಮವು ವಹಿಸಿದ ಪಾತ್ರ) ದಲ್ಲಿ ಹೇಗೆ ಮಾನವ ನಿಸರ್ಗ ದ್ವಂದ್ವಮಾನತೆಯು ವಿಕಾಸವಾಗಿದೆ ಎನ್ನುವುದನ್ನು ತೋರಿಸಿದ್ದಾರೆ. ಮನುಷ್ಯನ ಕೈ, ಇಂದ್ರಿಯ ಜ್ಞಾನಗಳು, ಮಾತು ಮುಂತಾದವುಗಳ ಬೆಳವಣಿಗೆಯಲ್ಲಿ ಶ್ರಮವು ಹೇಗೆ ಪಾತ್ರ ವಹಿಸಿದೆ ಎನ್ನುವುದನ್ನು ಏಂಗೆಲ್ಸ್ ತೋರಿಸಿಕೊಟ್ಟಿದ್ದಾರೆ. ಇವಾವುದೂ ಯಾವುದೋ ದೈವಶಕ್ತಿಗಳ ಕೈವಾಡಗಳಲ್ಲ, ಬದಲಿಗೆ ಅವುಗಳ ಮೂಲವಿರುವುದು ಬದುಕಿನ ಭೌತಿಕ ಆಧಾರದಲ್ಲಿ.

**ನಿಸರ್ಗದ ದ್ವಂದ್ವಾತ್ಮಕತೆ:** ಏಂಗೆಲ್ಸ್ ಅವರು ದ್ವಂದ್ವಾತ್ಮಕ ಭೌತಿಕವಾದವನ್ನು ಇನ್ನೂ ಮುಂದುವರಿಸಿ ನಿಸರ್ಗ ಮತ್ತು ವೈಜ್ಞಾನಿಕ ಬೆಳವಣಿಗೆಗೆಗಳಿಗೂ ವಿಸ್ತರಿಸಿ ಪರಿಶೋಧಿಸಿದರು. "ದ್ವಂದ್ವಾತ್ಮಕತೆಯು ಬೇರೇನೂ ಅಲ್ಲ, ಅದು ನಿಸರ್ಗ, ಮಾನವ ಸಮಾಜ ಮತ್ತು ಚಿಂತನೆಯ ಚಲನೆ ಹಾಗೂ ಬೆಳವಣಿಗೆಯ ಸಾಮಾನ್ಯ ನಿಯಮಗಳ ವಿಜ್ಞಾನ" ಎಂಬ ನಿರ್ಧಾರಕ್ಕೆ ಅವರು ಬಂದರು.

**ದ್ವಂದ್ವಾತ್ಮಕತೆ ಮತ್ತು ಮಾನವಶಾಸ್ತ್ರ :** ಏಂಗೆಲ್ಸ್ ಅವರು ಚಾರಿತ್ರಿಕ ಭೌತಿಕವಾದದ ನಿಯಮಗಳನ್ನು ಅವರ ಕಾಲದಲ್ಲಿ ಲಭ್ಯವಿದ್ದ ಪ್ರಾಚೀನ ಮಾನವ ಸಮಾಜಗಳ ಮಾನವಶಾಸ್ತ್ರದ ಸಾಕ್ಷ್ಯಗಳಿಗೆ ಅನ್ವಯಿಸಿದರು. ತಮ್ಮ **'ಆರಿಜಿನ್ಸ್ ಆಫ್ ಫ್ಯಾಮಿಲಿ, ಪ್ರೈವೇಟ್ ಪ್ರಾಪರ್ಟಿ ಅಂಡ್ ದಿ ಸ್ಟೇಟ್'**(ಕುಟುಂಬ, ಖಾಸಗಿ ಆಸ್ತಿ ಮತ್ತು ಪ್ರಭುತ್ವದ ಉಗಮ) ಪುಸ್ತಕದಲ್ಲಿ ಏಂಗೆಲ್ಸ್ ಅವರು ಆಧುನಿಕ ವರ್ಗ ಸಮಾಜದ ಸುತ್ತ ಇರುವ ಮಿಥ್ಯೆಗಳನ್ನು ನಗ್ನಗೊಳಿಸುತ್ತಾರೆ ಮತ್ತು ಹೇಗೆ ಆಸ್ತಿ–ಆಧಾರಿತ ವರ್ಗ ಸಂಬಂಧಗಳು ಕುಟುಂಬದ ಮೂಲಗಳನ್ನು ರೂಪಿಸುತ್ತವೆ, 'ಸ್ತ್ರೀಕುಲ'ದ ಚಾರಿತ್ರಿಕ ಸೋಲನ್ನು –ಏಕಪತಿತ್ವ ಅಥವಾ ಏಕಪತ್ನಿತ್ವ, ಪುರುಷಪ್ರಾಧಾನ್ಯತೆ ಮತ್ತು ಮಹಿಳೆಯರ ಮೇಲಿನ ದಬ್ಬಾಳಿಕೆಯ ವ್ಯವಸ್ಥೆಯನ್ನು – ಎತ್ತಿ ತೋರಿಸುತ್ತದೆ ಎಂದು ಪ್ರಮಾಣೀಕರಿಸುತ್ತಾರೆ.

**ದ್ವಂದ್ವಾತ್ಮಕತೆ ಮತ್ತು ಚರಿತ್ರೆ:** 'ದಿ ಪೆಸೆಂಟ್ ವಾರ್ ಇನ್ ಜರ್ಮನಿ'(1849–50)(ಜರ್ಮನಿಯಲ್ಲಿ ರೈತರ ಯುದ್ಧ) ಲೇಖನದ ಮೂಲಕ ಏಂಗೆಲ್ಸ್ ಅವರು ದ್ವಂದ್ವಾತ್ಮಕ ಭೌತಿಕವಾದವನ್ನು ಚರಿತ್ರೆಗೆ ಅನ್ವಯಿಸಿದ ಮೊಟ್ಟ ಮೊದಲ ನೇರ ಪ್ರಯತ್ನವಾಗಿದೆ.

**ದ್ವಂದ್ವಾತ್ಮಕತೆ ಮತ್ತು ತತ್ವಶಾಸ್ತ್ರ:** ಮಾರ್ಕ್ಸ್‌ವಾದವನ್ನು ಖಂಡಿಸಲು ಯೂಜಿನ್ ಡ್ಯೂರಿಂಗ್ ಮುಂದಿಟ್ಟ 'ಗ್ರ್ಯಾಂಡ್ ಥಿಯರಿ'(ಮಹಾ ಸಿದ್ಧಾಂತ)ಯ ಮುಸುಕನ್ನು ಬಯಲು ಮಾಡುತ್ತ ಏಂಗೆಲ್ಸ್ ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. 'ಯಾಂಟಿ–ಡ್ಯೂರಿಂಗ್' ಕೃತಿಯು ಮಾರ್ಕ್ಸ್‌ವಾದ, ದ್ವಂದ್ವಾತ್ಮಕ ಹಾಗೂ ಚಾರಿತ್ರಿಕ ಭೌತಿಕವಾದದ ಸಿಂಧುತ್ವವನ್ನು ಸಾಬೀತುಗೊಳಿಸುವಲ್ಲಿ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದೆ.

ಆದ್ದರಿಂದ ಮಾನವ ಚಟುವಟಿಕೆಯ ಮತ್ತು ಪ್ರಯತ್ನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಏಂಗೆಲ್ಸ್ ಅವರು ಸ್ವತಂತ್ರವಾಗಿ ಹಾಗೂ ಮಾರ್ಕ್ಸ್ ಅವರ ಜತೆ ಜಂಟಿಯಾಗಿ ಎರಡು ರೀತಿಯಲ್ಲೂ ಅತ್ಯುತ್ತಮವಾದ ಕೊಡುಗೆ ನೀಡಿರುವುದು ಸ್ಪಷ್ಟವಾಗಿದೆ. ಮಾನವ–ನಿಸರ್ಗ ತತ್ವಮೀಮಾಂಸೆಯನ್ನು ವಿವರಿಸುವುದರಿಂದ ಹಿಡಿದು ನೈಸರ್ಗಿಕ ವಿಜ್ಞಾನಗಳು, ಮಾನವಶಾಸ್ತ್ರ, ಚರಿತ್ರೆ, ರಾಜಕೀಯ ಅರ್ಥಶಾಸ್ತ್ರ ಮತ್ತು ತತ್ವಶಾಸ್ತ್ರದವರೆಗೂ ಏಂಗೆಲ್ಸ್ ಅವರು ಈ ಕ್ರಾಂತಿಕಾರಿ ಚಳುವಳಿ ಹಾಗೂ ಅದರ ಸೈದ್ಧಾಂತಿಕ ತಳಪಾಯ ಹಾಕುವಲ್ಲಿನ ಬೆಳವಣಿಗೆಗೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಆದಾಗ್ಯೂ, ಅವರು ಸ್ವತಂತ್ರವಾಗಿ ಅಥವಾ ಜಂಟಿಯಾಗಿ ಇಬ್ಬರೂ ಹೊರತಂದ ಎಲ್ಲಾ ಕೃತಿಗಳೂ ಪರಸ್ಪರ ಚರ್ಚೆಗಳ ಮೂಲಕ ಶ್ರೀಮಂತವಾಗಿವೆ ಎಂಬ ಸಂಗತಿಯನ್ನು ಒತ್ತಿಹೇಳಬೇಕು.

**ರಾಜಕೀಯ ಚಟುವಟಿಕೆ**

ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗ ಚಳುವಳಿಯ ಈ ಇಬ್ಬರು ಮಹಾನ್ ನೇತಾರರು ಇಂತಹ ಪಥಪ್ರದರ್ಶಕ ಸೈದ್ಧಾಂತಿಕ ತಳಹದಿಯನ್ನು ಬೆಳೆಸುತ್ತಿದ್ದರೂ, ಕೇವಲ ಅಕಡೆಮಿಕ್ ಸಿದ್ಧಾಂತಿಗಳಷ್ಟೇ ಆಗಿರದೆ, ಅವರ ಕಾಲದ ಕಾರ್ಮಿಕ ಚಳುವಳಿಯಲ್ಲಿ ಹಲವಾರು ಬಾರಿ ಸಕ್ರಿಯವಾಗಿ ಪಾಲ್ಗೊಂಡರು, ಅನೇಕ ವೇಳೆ ಮುಂದಾಳತ್ವ ವಹಿಸಿ ಮಾರ್ಗದರ್ಶನ ನೀಡಿದರು ಕೂಡ. ಕಾರ್ಮಿಕ ವರ್ಗವನ್ನು ವಿಜಯದತ್ತ ಕೊಂಡೊಯ್ಯಲು ಸಮರ್ಥವಾದ ಕ್ರಾಂತಿಕಾರಿ ಸಂಘಟನೆಯನ್ನು ಕಟ್ಟುವುದಕ್ಕಾಗಿ ಮಾರ್ಕ್ಸ್‌ವಾದದ ಈ ಇಬ್ಬರು ಮಹಾನ್ ಸ್ಥಾಪಕ ನೇತಾರರು ತಮ್ಮ ಬದುಕನ್ನು ಮುಡಿಪಾಗಿಟ್ಟಿದ್ದರು. 1864 ರಲ್ಲಿ, ಮೊದಲ ಅಂತರ್ರಾಷ್ಟ್ರೀಯ ಎಂದು ಜನಪ್ರಿಯವಾಗಿ ಕರೆಯಲ್ಪಟ್ಟ ಇಂಟರ್ ನ್ಯಾಷನಲ್ ವರ್ಕಿಂಗ್ ಮೆನ್ಸ್ ಅಸೋಶಿಯೇಷನ್ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಹಲವಾರು ಎಡಪಂಥೀಯ ಗುಂಪುಗಳನ್ನು ಒಂದು ಸರ್ವಸಾಮಾನ್ಯ ಸಂಘಟನೆಯಾಗಿ ಒಟ್ಟುಗೂಡಿಸುವಲ್ಲಿ ಇದು ಮೊಟ್ಟ ಮೊದಲ ಪ್ರಯತ್ನವಾಗಿತ್ತು ಮತ್ತು ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಚಳುವಳಿಯನ್ನು ಮುಂದೆ ಕೊಂಡೊಯ್ಯುವಲ್ಲಿ ಪ್ರಮುಖ ಹೆಜ್ಜೆಯಾಗಿತ್ತು.

**ವೈಜ್ಞಾನಿಕ ಮತ್ತು ಕ್ರಾಂತಿಕಾರಕ**

ಮಾರ್ಕ್ಸ್ ಅವರ ಮರಣಾನಂತರ, ಮಾರ್ಕ್ಸ್‌ವಾದಿ ದೃಷ್ಟಿಕೋನದ ಅಮೂಲ್ಯ ಕೃತಿಗಳು ಹಾಗೂ ಸೈದ್ಧಾಂತಿಕ ಮೂಲಾಧಾರಗಳನ್ನು ಪ್ರಮುಖವಾಗಿ ಏಂಗೆಲ್ಸ್ ಅವರ ಮೂಲಕವೇ ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗ ಮತ್ತು ಜಗತ್ತು ತಿಳಿದುಕೊಂಡಿತು. ಮಾರ್ಕ್ಸ್ ಅವರು ಬಿಟ್ಟುಹೋಗಿದ್ದ ಅಪಾರ ಟಿಪ್ಪಣಿಗಳನ್ನು ಜೋಡಿಸಿದ್ದು ಮತ್ತು ಸಂಪಾದಿಸಿದ್ದು ಏಂಗೆಲ್ಸ್ ಅವರು. 'ಕ್ಯಾಪಿಟಲ್'(ಸಂಪುಟ 2 ಮತ್ತು 3) ಕೃತಿಯನ್ನು ಆ ಟಿಪ್ಪಣಿಗಳನ್ನು ಜೋಡಿಸಿ ಸಂಪಾದಿಸುವ ಮೂಲಕ ಏಂಗೆಲ್ಸ್ ಹೊರತಂದರು. 'ಕಮ್ಯುನಿಸ್ಟ್ ಪ್ರಣಾಳಿಕೆ'ಯ ಹಲವಾರು ಆವೃತ್ತಿಗಳಿಗೆ ಮುನ್ನುಡಿ ಬರೆದವರು ಏಂಗೆಲ್ಸ್ ಮತ್ತು ಮಾರ್ಕ್ಸ್ ಕೃತಿಗಳ ಹೊಸ ಆವೃತ್ತಿಗಳಿಗೆ ಆ ನಂತರದ ಸಮಕಾಲೀನ ಬೆಳವಣಿಗೆಗಳ ಆಧಾರದಲ್ಲಿ ಮುನ್ನುಡಿಗಳನ್ನು ಬರೆಯುವುದರ ಮೂಲಕ ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಚಳುವಳಿಯನ್ನು ಶ್ರೀಮಂತಗೊಳಿಸಿದರು ಹಾಗೂ ಚಳುವಳಿಯನ್ನು ಮುಂದುವರಿಸಲು ಪ್ರೋತ್ಸಾಹ ನೀಡಿದರು.

**ಲೆನಿನ್ ಹೇಳುವಂತೆ, ಏಂಗೆಲ್ಸ್ "ಕಾರ್ಮಿಕ ವರ್ಗಕ್ಕೆ ತನ್ನನ್ನು ತಾನು ಅರಿತುಕೊಳ್ಳಲು ಮತ್ತು ತನ್ನ ಬಗ್ಗೆ ಪ್ರಜ್ಞಾಶೀಲವಾಗಲು ಕಲಿಸಿದರು, ಮತ್ತು ಅವರ ಕನಸುಗಳಿಗೆ ವಿಜ್ಞಾನವನ್ನು ಬದಲಿಯಾಗಿಸಿದರು..."**

# ಕಾರ್ಪೋರೇಟ್ ಕೃಷಿ ಹೇರುವ, ಸಾರ್ವಜನಿಕ ಆಸ್ತಿಗಳ ಲೂಟಿಗೆ ತೆರೆಯುವ.........

ಪುಟ 8 ರಿಂದ

ಯಾವುದೇ ನ್ಯಾಯಾಲಯ ಮತ್ತು ನ್ಯಾಯಾಧಿಕರಣ ಅಥವಾ ಮೂಲ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸಕ್ಷಮವಾದ ಯಾವುದೇ ಇತರ ಪ್ರಾಧಿಕಾರದ ಮುಂದೆ ಬಾಕಿ ಇರುವ 79 ಎ, 79ಬಿ ಹಾಗೂ 79ಸಿ ಪ್ರಕರಣಗಳಿಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳು ಈ ಮೂಲಕ ಕೊನೆಗೊಳ್ಳತಕ್ಕದ್ದು."

**ಕೆಲ ಭೂಮಿಗಳಿಗೆ ರಕ್ಷಣೆಯೆಂಬ ಮಹಾ ಮೋಸ**

ಮೂಲ ಕಾಯ್ದೆಯ 80 ಕಲಂಗೆ ತಿದ್ದುಪಡಿ ಮಾಡಿದೆ. ಅದರ ಶೀರ್ಷಿಕೆಯು ಈ ಮೊದಲು "ಬೇಸಾಯಗಾರರಲ್ಲದವರಿಗೆ ವರ್ಗಾವಣೆ ನಿಷೇಧ" ಎಂದಿದ್ದನ್ನು "ಕೆಲ ಭೂಮಿಗಳ ವರ್ಗಾವಣೆ ನಿಷೇಧ" ಎಂದು ಬದಲಾಯಿಸಿದೆ.

ಅಂದರೆ, ಈ ಮುಂಚಿನಂತೆ ಕೃಷಿಕರು ಕೃಷಿಕರಲ್ಲದವರಿಗೆ ಮಾರಾಟ ಮಾಡುವುದಾಗಲೀ, ಗೇಣಿಗಾಗಿ ನೀಡುವುದಾಗಲೀ ಮತ್ತು ಅಡಮಾನ ಹಾಗೂ ಉಡುಗೊರೆಯಾಗಿ ನೀಡುವುದನ್ನು ನಿಷೇಧಿಸಿ ಕೃಷಿಕರಿಗೆ ಮಾತ್ರ ಭೂಮಿ ಎಂದು ಖಾತರಿ ಪಡಿಸಿ ಅವರ ಉದ್ಯೋಗ ಭದ್ರತೆಯನ್ನು ಇದೂ ಕೂಡಾ ನೀಡುತ್ತಿತ್ತು. ಈಗ ಅದರ ಮೂಲಾಂಶವನ್ನು ದುರ್ಬಲಗೊಳಿಸಿ ಬೇಸಾಯಗಾರರಲ್ಲದವರಿಗೆ ಕೃಷಿ ಭೂಮಿಯನ್ನು ಕೊಡಬಹುದು ಆದರೇ ಕೆಲವು ಭೂಮಿಗಳಿಗೆ ಮಾತ್ರ ನಿರ್ಬಂಧವೆನ್ನುತ್ತಿದೆ.

ಆದ್ದರಿಂದ ಈ ನೀತಿಗೆ ಅಡ್ಡಿಯಾಗಿದ್ದ ಮೂಲ ಕಾಯ್ದೆಯ ಕಲಂ 80. 1)ರ ಎ ಮತ್ತು ಬಿ ಅಂಶಗಳನ್ನು ತೆಗೆದು ಹಾಕಿದೆ. ಹಾಗೂ ಬಿ.1 ನೆ ಅಂಶಕ್ಕೆ ಪ್ರತ್ಯಾಯೋಜಿಸಿ, ಎ – ವರ್ಗದ ನೀರಾವರಿ ಜಮೀನುಗಳನ್ನು (ಅಂದರೇ ಎರಡು ಅಥವಾ ಹೆಚ್ಚು ಬೆಳೆಯುವ ಪ್ರದೇಶ) ಕೃಷಿಕರಲ್ಲದವರು ಪಡೆಯುವುದನ್ನು ತಡೆದಿದೆ.

ಇದು ನಿಜವೇ ಎಂದು ಪರಿಶೀಲಿಸಬಹುದು. ಏಕೆಂದರೇ ಇಲ್ಲಿ ಕೃಷಿಕರಲ್ಲದವರು ಯಾರು? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಈ ಸುಗ್ರೀವಾಜ್ಞೆಯ ಮೊದಲ ಕಲಂನ ಎರಡನೇ ಅಂಶವು ಈ ಸುಗ್ರೀವಾಜ್ಞೆಯ ಕಲಂ.2, 3, 4, 5, 6, 10, 11 ಈ ಪ್ರಕರಣಗಳು 1974 ಮಾರ್ಚ್ 01, ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರಲಿವೆ ಎನ್ನುತ್ತದೆ. ಅಂದರೇ, ಯಾರೆಲ್ಲಾ, ಕೃಷಿ ಭೂಮಿಯನ್ನು ಖರೀದಿಸಿ ಬೇಸಾಯದಲ್ಲಿ ತೊಡಗುವರೋ, ಕಂಪನಿ, ಸಂಸ್ಥೆಗಳು, ಸಹಕಾರ ಸಂಘಗಳು, ಭೂಮಾಲಕರು, ಗೇಣಿ ಮಾಡುವವರು, ಅಡಮಾನಮಾಡಿಕೊಂಡು ತೊಡಗಿದವರು, ಉಡುಗೊರೆ ಪಡೆದವರು ಮುಂತಾಗಿ, ಇವರೆಲ್ಲರೂ ಕೃಷಿಕರೇ ಆಗುವುದರಿಂದ, ಎ– ವರ್ಗದ ನೀರಾವರಿ ಜಮೀನುಗಳಿಗೆ ಯಾರಿಂದ ರಕ್ಷಣೆ? ಇದು ಕೇವಲ ಕಣ್ಣೊರೆಸುವ ಮತ್ತು ಜನ ವಂಚನೆಯ ಪ್ರಕರಣವಾಗಿದೆ.

ಸಿ ಅಂಶದಲ್ಲಿ "ಕೃಷಿಕರಲ್ಲದವರು" ಎಂಬ ಪದವನ್ನು ಹಾಗು ಡಿ. ಇ. ಎಫ್ ಅಂಶಗಳನ್ನು ಬಿಟ್ಟು ಬಿಡಲಾಗಿದೆ. ಆ ಮೂಲಕ ಈಗಿನಂತೆ, ಕೃಷಿಕರಲ್ಲದವರು ಪಡೆದ ಜಮೀನುಗಳನ್ನು ಐದು ವರ್ಷದೊಳಗೆ ಬೇಸಾಯದಲ್ಲಿ ತೊಡಗದಿದ್ದರೇ ಸರಕಾರವೇ ಜಮೀನುಗಳನ್ನು ವಾಪಾಸು ಪಡೆಯುವ ಅಂಶವನ್ನು ಮುಚ್ಚಿಡಲಾಗಿದೆ.

ಅಲ್ಲದೇ ಕಲಂ 80ಎ ಯನ್ನು ಸೇರ್ಪಡೆ ಮಾಡಿ ಕರ್ನಾಟಕ ಅನು ಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಸಮುದಾಯಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ–1978 ರಂತೆ ನಿಷೇಧದ ಅವಧಿಯಲ್ಲಿ ಮುಂಜೂರು ಮಾಡದಂತೆ ತಡೆಯಲಾಗಿದೆ! ಆದರೇ ಪಡೆಯದಂತೆ ತಡೆಯಲಾಗಿದೆಯೆ?

ಈ ಪ್ರಶ್ನೆಗಳಿವೆ.

**ಸಾರ್ವಜನಿಕ ಸಂಸ್ಥೆಗಳ ಖಾಸಗೀಕರಣದ ಇಂಗಿತ**

ಮೂಲ ಕಾಯ್ದೆಯ ಕಲಂ 81ರ ಶೀರ್ಷಿಕೆ "ಕೆಲ ಪ್ರಕರಣಗಳಲ್ಲಿ ಕಲಂ.79 ಎ ಮತ್ತು ಬಿ ಹಾಗೂ 80 ಗಳು ಅನ್ವಯಿಸವು" ಎಂದಿದ್ದುದನ್ನು ಈ ಸುಗ್ರೀವಾಜ್ಞೆ ಅದನ್ನು "ಕೃಷಿ ಭೂಮಿಯ ಮಾರಾಟ ಮತ್ತು ಅಡಮಾನದ ಮೇಲೆ ನಿರ್ಬಂದ" ಎಂದು ಬದಲಾಯಿಸಿದೆ.

ಮಾತ್ರವಲ್ಲಾ, ಕಲಂ 80 ರ ಒಂದನೇ ಪ್ರಕರಣದಲ್ಲಿರುವ 79 ಎ ಮತ್ತು ಬಿ ಹಾಗು ಕಲಂ 80 ಎಂಬ ಪದಗಳನ್ನು ತೆಗೆದು ಹಾಕಲಾಗಿದೆ.

ಮೂಲ ಕಾಯ್ದೆಯ ಮೂಲ ಕಲಂ 81, ಕೆಲವು ಸರಕಾರಿ ಹಾಗೂ ಅರೆ ಸರಕಾರಿ ಸಂಸ್ಥೆಗಳಿಗೆ ಕೃಷಿ ಭೂಮಿಗಳನ್ನು ಅಭಿವೃದ್ಧಿ ಸಲುವಾಗಿ ಪಡೆಯಲು ರಿಯಾಯಿತಿ ನೀಡಿತ್ತು. ಇವುಗಳಲ್ಲಿ ಕಂಪನಿಗಳು, ನಿಗಮಗಳು, ಮಂಡಳಿಗಳು ಸೇರಿವೆ. ಆದರೇ ಇವುಗಳಲ್ಲಿ ಶೇ 51 ರಷ್ಟು ಸಾರ್ವಜನಿಕ ಅಂದರೇ ಸರಕಾರದ ಬಂಡವಾಳವಿರಬೇಕೆಂದಿದೆ.

ಅವುಗಳೆಂದರೇ,

1) KSRTC 2)KPCL 3) KHB 4) KIADB 5) KSCB 6)BDA 7) KNP 8) Co-Operative societies 9) ಹಣಕಾಸು ಸಂಸ್ಥೆಗಳು 10) ಶೇ 51 ಸಾರ್ವಜನಿಕ ಬಂಡವಾಳವಿರುವ ಕಂಪನಿಗಳು, ನಿಗಮಗಳು 11) ಕಾಫಿ ಮಂಡಳಿ.

ಈ ಸಂಸ್ಥೆಗಳು, ಉಡುಗೊರೆ, ಖರೀದಿ, ಕೊಡುಗೆ, ಅಡಮಾನಗಳ ಮೂಲಕ ರಾಜ್ಯದಲ್ಲಿ ಲಕ್ಷಾಂತರ ಹೆಕ್ಟಾರ್ ಜಮೀನುಗಳನ್ನು ಹೊಂದಿವೆ. ಅವುಗಳ ಮೌಲ್ಯ ಲಕ್ಷಾಂತರ ಕೋಟಿ ರೂ. ಗಳಷ್ಟಿದೆ.

ಈಗ ಈ ಸಂಸ್ಥೆಗಳಿಗೆ ಸೇರಿದ ಈ ಲಕ್ಷಾಂತರ ಹೆಕ್ಟಾರ್ ಜಮೀನುಗಳನ್ನು ಖಾಸಗಿ ಕಂಪನಿಗಳಿಗೆ ಮತ್ತು ಸಂಸ್ಥೆಗಳಿಗೆ ಮಾರಾಟ ಹಾಗೂ ಅಡಮಾನ ಮಾಡಲು ಅನುವು ಮಾಡಿ ಕೊಡುವ ಸಾವಿರಾರು ಕೋಟಿ ರೂಗಳನ್ನು ಲೂಟಿಗೊಳಪಡಿಸುವ ದುರುದ್ದೇಶದಿಂದ ಈ ತಿದ್ದುಪಡಿ ತಂದಿದೆ. ಶೀರ್ಷಿಕೆಯನ್ನು ಬದಲಾಯಿಸಿದೆ.

ಈ ಕಲಂಗೆ 2 (ಎ) ಸೇರ್ಪಡೆ ಮಾಡಿ 80 ನೇ ಕಲಂನ ಒಂದನೇ ಉಪ ಪ್ರಕರಣದಡಿ ಎ ಮತ್ತು ಬಿ ಖಂಡಗಳಲ್ಲಿ ಹೇಳಲಾದ ಸಂಸ್ಥೆಗಳನ್ನು ಹೊರತು ಪಡಿಸಿ, ಯಾವೊಬ್ಬ ವ್ಯಕ್ತಿಯ ಪರವಾಗಿ ಕೃಷಿ ಭೂಮಿಯನ್ನು ಅಡಮಾನ ಮಾಡುವಂತಿಲ್ಲ ಎಂದಿದೆ.

ಅಂದರೇ, ಅಂತಹ ಸಂಸ್ಥೆಗಳನ್ನು ಖಾಸಗೀಕರಿಸುವ ಮತ್ತು ಅವುಗಳ ಜಮೀನುಗಳನ್ನು ಮುಂದೆ ಖಾಸಗೀ ಕಂಪನಿಗಳಿಗೆ ವಹಿಸಿಕೊಡುವ ಇಂಗಿತವನ್ನು ಈ ಮೂಲಕ ತೋರಿದೆ. ಮೂಲ ಕಾಯ್ದೆಯಿಂದ ವಿನಾಯಿತಿಗಳು ಎಂಬ ಆರನೇ ಅಧ್ಯಾಯದ ಕಲಂ 104 ಪ್ಲಾಂಟೇಷನ್ ಗಳ ವಿಚಾರದಲ್ಲಿ ಮತ್ತು ಕಲಂ 109 ರ ಕೆಲವು ಸೌಲಭ್ಯಗಳಿಗಾಗಿ ಕೆಲ ಭೂಮಿಗಳ ವಿನಾಯಿತಿ ಎಂಬ ಶೀರ್ಷಿಕೆಗಳಡಿ ಬರುತ್ತಿದ್ದ 79ಎ ಮತ್ತು 79ಬಿ ಅಂಕೆಗಳನ್ನು ತಗೆದು ಹಾಕಿದೆ. ●



# ಭಾರತದ ಕಾರ್ಮಿಕ ಆಂದೋಲನ–ಶತಮಾನದ ನೋಟ

**ಭಾರತದ ಮೊದಲ ಕೇಂದ್ರೀಯ ಕಾರ್ಮಿಕ ಸಂಘಟನೆ 'ಆಲ್ ಇಂಡಿಯ ಟ್ರೇಡ್ ಯೂನಿಯನ್ ಕಾಂಗ್ರೆಸ್'(ಎಐಟಿಯುಸಿ) ಸ್ಥಾಪನೆಗೊಂಡು ಈ ಅಕ್ಟೋಬರ್ 31ಕ್ಕೆ ನೂರು ವರ್ಷಗಳಾದವು. ಈ ಸಂದರ್ಭದಲ್ಲಿ ಭಾರತದಲ್ಲಿ ಕಾರ್ಮಿಕ ಆಂದೋಲನದ ಹುಟ್ಟು ಮತ್ತು ಬೆಳವಣಿಗೆಗಳ ಇತಿಹಾಸದತ್ತ ಒಂದು ಇಣುಕುನೋಟ ನೀಡುವ ಈ ಲೇಖನ ಸರಣಿಯನ್ನು ಆರಂಭಿಸುತ್ತಿದ್ದೇವೆ. ಇದು ದೇಶದ ಕಾರ್ಮಿಕ ಇತಿಹಾಸದ ಪ್ರಮುಖ ಅಧ್ಯಯನಕಾರರೂ, ಸ್ವತಃ ಕಾರ್ಮಿಕ ಮುಖಂಡರೂ ಆದ ಸುಕೋಮಲ್ ಸೆನ್ ಅವರ ಪ್ರಖ್ಯಾತ ಕೃತಿ 'Working Class of India-History of Emergence and Movement' ನ ಕನ್ನಡ ಅನುವಾದವನ್ನು ಆಧರಿಸಿದೆ. 1830ರಿಂದ 2010 ರ ವರೆಗಿನ ಭಾರತದ ಕಾರ್ಮಿಕ ವರ್ಗದ ಉದಯ ಮತ್ತು ಚಳವಳಿಯ ವಿಶ್ಲೇಷಣಾತ್ಮಕ ಇತಿಹಾಸವನ್ನು ಕೊಡುವ ಈ ಕೃತಿಯನ್ನು ಸಿಐಟಿಯು ನ ರಾಜ್ಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಸಿ.ಆರ್.ಶಾನಭಾಗ ಕನ್ನಡಕ್ಕೆ ಅನುವಾದ ಮಾಡಿದ್ದು ಸದ್ಯದಲ್ಲೇ 'ಕ್ರಿಯಾ ಮಾಧ್ಯಮ'ದಿಂದ ಪ್ರಕಟವಾಗಲಿದೆ.**

# ಭಾರತದ ಕಾರ್ಮಿಕ ವರ್ಗದ ಉದಯದ ಹಿನ್ನೆಲೆ –ವಸಾಹತುಶಾಹಿಯ ಶೋಷಕ ಆಳ್ವಿಕೆ

ಆಧುನಿಕ ಕಾರ್ಮಿಕ ವರ್ಗದ ಚಳುವಳಿ ಕೈಗಾರಿಕಾ ಕ್ರಾಂತಿಯ ಒಂದು ಉತ್ಪನ್ನವಾಗಿದೆ. ಕೈಗಾರಿಕಾ ಕ್ರಾಂತಿ ಇಂಗ್ಲೆಂಡಲ್ಲಿ ತನ್ನ ಕೇಂದ್ರದೊಂದಿಗೆ ತ್ವರಿತವಾಗಿ ಭೂಖಂಡಕ್ಕೆ ಹರಡುತ್ತಿದ್ದಾಗ, ಭಾರತವು ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟಿತು. ಆದ್ದರಿಂದ ತನ್ನದೇ ಆದ ನೆಲದಲ್ಲಿ ಕೈಗಾರಿಕಾ ಕ್ರಾಂತಿಯನ್ನು ವೀಕ್ಷಿಸುವ ಬದಲು, ಭಾರತವು ಮೆಟ್ರೋಪಾಲಿಟನ್ ಇಂಗ್ಲೆಂಡ್‌ನ ವಸಾಹತುಶಾಹಿ ಅನುಬಂಧವಾಗಿ ಕಾರ್ಯನಿರ್ವಹಿಸಿತು, ತನ್ನ ಧಣಿಯ–ದೇಶದಲ್ಲಿ ಕೈಗಾರಿಕಾ ಕ್ರಾಂತಿಯ ಪ್ರಕ್ರಿಯೆಯನ್ನು ಚುರುಕುಗೊಳಿಸಿತು ಮತ್ತು ಅದೇ ಸಮಯದಲ್ಲಿ ತನ್ನದೇ ಆದ ಸಾಂಪ್ರದಾಯಿಕ ಆರ್ಥಿಕ ಕ್ರಮದಲ್ಲಿ ಬಲವಂತವಾದ ವಿಘಟನೆಯನ್ನು ಕಂಡಿತು. ಆದ್ದರಿಂದ ಭಾರತದಲ್ಲಿ ಬಂಡವಾಳಶಾಹಿಯ ಅಭಿವೃದ್ಧಿಯು ಬಹಳ ತಿರುಚಿದ ಮತ್ತು ಹೆಚ್ಚು ವಿಳಂಬವಾದ ಪ್ರಕ್ರಿಯೆಯಾಗಿದೆ. ಭಾರತದ ಕಾರ್ಮಿಕ–ವರ್ಗದ ಚಳುವಳಿಯೂ ತುಂಬಾ ನಂತರದ ಹಂತದಲ್ಲಿ ಅಭಿವೃದ್ಧಿಗೊಂಡಿತು.

ಭಾರತದಲ್ಲಿ ಬಂಡವಾಳಶಾಹಿಯ ಮೊದಲ ಅಂಶವು ಕಾಣಿಸಿಕೊಂಡದ್ದು ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ. ಇದು ಕ್ರಮೇಣ ಬಹಳ ಸಂಕೀರ್ಣವಾದ ಸಾಮಾಜಿಕ ಮತ್ತು ಆರ್ಥಿಕ ಪ್ರಕ್ರಿಯೆಯ ಮೂಲಕ ಅಭಿವೃದ್ಧಿ ಹೊಂದಿತು. ಜಗತ್ತಿನ ಇತರೆಡೆಗಳಂತೆ ಆಧುನಿಕ ಭಾರತದ ಕಾರ್ಮಿಕ ವರ್ಗವೂ ಭಾರತದ ಬಂಡವಾಳಶಾಹಿ ಅಭಿವೃದ್ಧಿಯ ಒಂದು ಉತ್ಪನ್ನವಾಗಿದೆ. ಆದರೆ ಭಾರತದ ಕಾರ್ಮಿಕ ವರ್ಗದ ಉಗಮಕ್ಕೆ ಸಂಬಂಧಿಸಿದ ಅತ್ಯಂತ ಸಂಕೀರ್ಣವಾದ ಪ್ರಕ್ರಿಯೆ ಮತ್ತು ವಿಶಿಷ್ಟ ಸಮಸ್ಯೆಗಳು ವಿವರವಾದ ಮತ್ತು ವಿಸ್ತಾರವಾದ ಅಧ್ಯಯನದ ವಿಷಯವಾಗಿದೆ. ಆದಾಗ್ಯೂ, ಈ ಪ್ರಕ್ರಿಯೆಯ ಮೂಲಭೂತ ಪ್ರವೃತ್ತಿಯನ್ನು ಗ್ರಹಿಸಲು ಕೆಲವು ಸಂಗತಿಗಳು ಸಹಾಯ ಮಾಡಬಹುದು. ಭಾರತದ ಆರ್ಥಿಕತೆ ಮತ್ತು ಸಾಮಾಜಿಕ ವ್ಯವಸ್ಥೆಯ ಬಗ್ಗೆ ಮಾರ್ಕ್ಸ್ ಅವರ ವಿಶ್ಲೇಷಣೆಯು ಅಂತಹ ಅಧ್ಯಯನಕ್ಕೆ ಒಂದು ಮಾರ್ಗದರ್ಶಿಯಾಗಿ ಉಳಿದಿದೆ.

1853 ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಚಾರ್ಟರ್ ನವೀಕರಣವು ಕೊನೆಯ ಬಾರಿಗೆ ಬ್ರಿಟಿಷ್ ಸಂಸತ್ತಿನ ಮುಂದೆ ಬಂದಾಗ ಮಾರ್ಕ್ಸ್ ಭಾರತದ ಕುರಿತಾದ 'ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್'ಗೆ ಲೇಖನಗಳ ಸರಣಿಯನ್ನು ಬರೆದರು. ಇವುಗಳ ಜೊತೆಗೆ ಭಾರತದ ವಿವಿಧ ಉಲ್ಲೇಖಗಳೊಂದಿಗೆ ಅವರ ಪ್ರಸಿದ್ಧ ಕೃತಿ "ಕ್ಯಾಪಿಟಲ್"ನ ಅಧ್ಯಾಯಗಳಲ್ಲಿ ಮಾಡಲಾದ ವಿಶ್ಲೇಷಣೆಯು ಭಾರತದ ಬಗ್ಗೆ ಮಾರ್ಕ್ಸ್ ಚಿಂತನೆಯ ಸಾರವನ್ನು ಒದಗಿಸುತ್ತದೆ. ಮಾರ್ಕ್ಸ್ ಅವರ ವಿಶ್ಲೇಷಣೆಯು 'ಏಷಿಯಾಟಿಕ್ ಎಕಾನಮಿ'ಯ ಗುಣಲಕ್ಷಣಗಳಿಂದ ಪ್ರಾರಂಭವಾಗುತ್ತದೆ, ಅದು ತಳಮಟ್ಟದ ಗ್ರಾಮ ವ್ಯವಸ್ಥೆಯಲ್ಲಿನ ಆದಿಕಾಲದ ಕಮ್ಯುನಿಸಂನ ಅವಶೇಷಗಳಿಂದ ಮತ್ತು ಮೇಲಿನಿಂದ ನಿರಂಕುಶ ಕೇಂದ್ರ ಸರ್ಕಾರದಿಂದ ಹುಟ್ಟಿಕೊಂಡಿತು. 'ಕ್ಯಾಪಿಟಲ್'ನ ಮೊದಲ ಸಂಪುಟದಲ್ಲಿ ಮಾರ್ಕ್ಸ್ ಭಾರತದ ಸಾಂಪ್ರದಾಯಿಕ ಆರ್ಥಿಕತೆ ಮತ್ತು ಸಾಮಾಜಿಕ ವ್ಯವಸ್ಥೆಯ ಬಗ್ಗೆ ಆಳವಾದ ವಿಶ್ಲೇಷಣೆ ಮಾಡುತ್ತಾರೆ. ಮಾರ್ಕ್ಸ್ ಹೀಗೆ ಭಾರತದ ಸಮಾಜವನ್ನು ವಿಶ್ಲೇಷಿಸುತ್ತಿರುವಾಗ, ಕೈಗಾರಿಕಾ ಕ್ರಾಂತಿ ಅದಾಗಲೇ ಇಂಗ್ಲೆಂಡ್‌ನಲ್ಲಿ ನಡೆದಿತ್ತು ಮತ್ತು ಬಂಡವಾಳಶಾಹಿ ಇಂಗ್ಲೆಂಡ್‌ನಿಂದ ಇತರ ಯುರೋಪಿಯನ್ ದೇಶಗಳಿಗೆ ವಿಸ್ತರಿಸುತ್ತಿತ್ತು ಎಂಬುದು ಕುತೂಹಲಕಾರಿಯಾಗಿದೆ.

ಭಾರತದ ಕೈಗಾರಿಕೆ ಮತ್ತು ಕೃಷಿಯ ಈ ಸಾಂಪ್ರದಾಯಿಕ ವ್ಯವಸ್ಥೆಯು ಸಾಮ್ರಾಜ್ಯಶಾಹಿ ಲೂಟಿಯಿಂದ ವ್ಯರ್ಥವಾಯಿತು. ವಸಾಹತುಶಾಹಿ ಹಿತಾಸಕ್ತಿಗಾಗಿ ರೈಲ್ವೆ ಮತ್ತು ಕೆಲವು ಸಂಪರ್ಕ ಕೈಗಾರಿಕೆಗಳ ಸ್ಥಾಪನೆಯು ಪ್ರಕ್ರಿಯೆಯನ್ನು ಪೂರ್ಣಗೊಳಿಸಿತು.

ಏಷಿಯಾಟಿಕ ಉತ್ಪಾದನಾ ವಿಧಾನದ ಬಗ್ಗೆ ಇನ್ನೂ ಕೆಲವು ವಿಭಿನ್ನ ಅಭಿಪ್ರಾಯಗಳು ಬಂದಿದ್ದರೂ ಸಹ, ಮಾರ್ಕ್ಸ್‌ನ ಈ ವಿವರಣೆಯು ಪ್ರಾಚೀನ ಭಾರತದ ಆರ್ಥಿಕತೆ ಮತ್ತು ಸಮಾಜದ ಮೂಲತತ್ವವನ್ನು ಹೊರತಂದಿದೆ..

**ವಸಾಹತುಶಾಹಿಗೆ ನೆರವಾಗಲು**
**ಹೊಸ ಊಳಿಗಮಾನ್ಯ ವ್ಯವಸ್ಥೆ**

ಮೇಲೆ ಹೇಳಿದಂತೆ ವಸಾಹತುಶಾಹಿ ಆಳ್ವಿಕೆ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಂದ ಶೋಷಣೆ ಈ ಸಾಂಪ್ರದಾಯಿಕ ಮತ್ತು ಸ್ವಾವಲಂಬಿ ಸಮಾಜಗಳ ಉತ್ಪಾದನಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಹಾಳುಮಾಡಿತು. 1757 ರಲ್ಲಿ ನಡೆದ ಪ್ಲಾಸ್ಸಿ ಕದನದಲ್ಲಿ ವಿಜಯದ ಮುಂದುವರಿದ ಭಾಗವಾಗಿ ಬ್ರಿಟಿಷ್ ಸೈನ್ಯವು ಮುನ್ನಡೆದು ಭಾರತದ ವಿವಿಧ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರಿಂದ, ಆ ಪ್ರದೇಶಗಳಲ್ಲಿನ ಹಳೆಯ ಆರ್ಥಿಕ ವ್ಯವಸ್ಥೆ ಮತ್ತು ಸಾಮಾಜಿಕ ಶ್ರಮ–ವಿಭಜನೆಗಳು ಏಕಕಾಲದಲ್ಲಿ ಚೂರುಚೂರಾದವು. ಹೀಗೆ ಆಕ್ರಮಣದಿಂದ ಸ್ವಾಧೀನ ಪಡಿಸಿಕೊಂಡ ಈ ವಲಯಗಳ ಹೆಚ್ಚುವರಿ ಉತ್ಪನ್ನಗಳು ಸಹ ವಸಾಹತುಶಾಹಿಗಳ ಕೈಗೆ ಸಿಲುಕಿದವು, ನಂತರ ಅವರು ಭಾರತದ ಸಂಪತ್ತನ್ನು ನೇರವಾಗಿ ಲೂಟಿ ಮಾಡಲು ಮತ್ತು ಇಂಗ್ಲೆಂಡ್‌ಗೆ ರಫ್ತು ಮಾಡಲು ಪ್ರಾರಂಭಿಸಿದರು. ಭಾರತದ ಆಂತರಿಕ ವ್ಯಾಪಾರದ ಮೇಲೆ ಹೆಚ್ಚಿನ ತೆರಿಗೆ ವಿಧಿಸುವ ಮತ್ತು ಏಕಕಾಲದಲ್ಲಿ ಹಣ–ಸಾಲ ನೀಡುವ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದ ಈಸ್ಟ್ ಇಂಡಿಯಾ ಕಂಪನಿ ಭಾರತದ ಜನರಿಂದ ಭಾರಿ ಮೊತ್ತದ ಹಣವನ್ನು ಸುಲಿಗೆ ಮಾಡಿತು.

ಒಳಸಂಚಿನಿಂದ ಪಡೆದ ಮಿಲಿಟರಿ ವಿಜಯ ಮತ್ತು ವಶಪಡಿಸಿಕೊಂಡ ಪ್ರದೇಶಗಳ ಸಂಪತ್ತನ್ನು ಲೂಟಿ ಮಾಡುವುದು ಹಲವಾರು ದಶಕಗಳವರೆಗೆ ಮುಂದುವರೆಯಿತು. ತರುವಾಯ ವಸಾಹತುಶಾಹಿಗಳು ಶಾಶ್ವತ ಆದಾಯ ಮತ್ತು ಬ್ರಿಟಿಷ್ ಆಡಳಿತದ ಬಲವರ್ಧನೆಯನ್ನು ಖಚಿತಪಡಿಸಿಕೊಳ್ಳಲು ಶೋಷಣೆಯನ್ನು ನಿಯಂತ್ರಿಸಬೇಕು ಮತ್ತು ಒಂದು ರೀತಿಯಲ್ಲಿ ಕಾನೂನುಬದ್ಧಗೊಳಿಸಬೇಕು ಎಂದು ಅರಿತುಕೊಂಡರು. ಆದ್ದರಿಂದ ಬ್ರಿಟಿಷ್ ಕೈಗಾರಿಕಾ ಬಂಡವಾಳದ ಹಿತದೃಷ್ಟಿಯಿಂದ, ಸಾಮ್ರಾಜ್ಯಶಾಹಿಗಳು ಕೆಲವು ಆಡಳಿತಾತ್ಮಕ ವಿಧಾನಗಳನ್ನು ಮತ್ತು ಭೂ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳನ್ನು ಪರಿಚಯಿಸಿದರು.

1793 ರಲ್ಲಿ ಲಾರ್ಡ್ ಕಾರ್ನ್‌ವಾಲಿಸ್‌ನ ವೈಸ್‌ರಾಯಾಗಿದ್ದ ಸಮಯದಲ್ಲಿ, ಬ್ರಿಟಿಷ ವಸಾಹತುಶಾಹಿಗಳು ಪೂರ್ವ ಭಾರತದ ಜಮೀನುದಾರರಿಂದ ಕರ ವಸೂಲಿ ಮಾಡಲು ಶಾಶ್ವತ ಇತ್ಯರ್ಥ (ಪರ್ಮನೆಂಟ್ ಸೆಟ್ಲಮೆಂಟ್) ಕಾಯಿದೆ ಜಾರಿಗೊಳಿಸಿ ಸ್ಥಿರ ತೆರಿಗೆ ದರವನ್ನು ನಿಗದಿಪಡಿಸಿದರು. 1793 ರ ಕಾಯಿದೆ ಮತ್ತು ನಂತರದ ಕಾಯಿದೆಗಳು ಭೂ–ಮಾಲೀಕತ್ವದ ಔಪಚಾರಿಕ ಹಕ್ಕುಗಳನ್ನು ಜಮೀನದಾರರನ್ನು ಹೊರತುಪಡಿಸಿ ಬೇರೆ ಯಾರಿಗೂ ನೀಡಲಿಲ್ಲ, ಗ್ರಾಮ ಸಮುದಾಯದ ಸದಸ್ಯರು ಮತ್ತು ಸಣ್ಣ ಊಳಿಗಮಾನ್ಯ ಪ್ರಭುಗಳ ಆನುವಂಶಿಕ ಹಕ್ಕುಗಳನ್ನು ಗುರುತಿಸಲಿಲ್ಲ. ಈ ವ್ಯವಸ್ಥೆಯು ಜಮೀನದಾರ ಎಂದು ಕರೆಯಲ್ಪಡುವ ಸ್ಥಳೀಯ ತೆರಿಗೆ ಸಂಗ್ರಾಹಕರ ಪರವಾಗಿ ಬಂಗಾಳದ ಪ್ರೆಸಿಡೆನ್ಸಿಯ ಜನರನ್ನು ತಮ್ಮ ಆನುವಂಶಿಕ ಭೂಮಿಯ–ಹಕ್ಕುಗಳಿಂದ ಹೊರಹಾಕಿತು.

ಒಂದು ರೀತಿಯ ಭೂ–ಮಾಲೀಕತ್ವದ ಹಕ್ಕನ್ನು ಪಡೆದುಕೊಂಡಿದ್ದರೂ ಸಹ, ಈ ಊಳಿಗಮಾನ್ಯ ಜಮೀನದಾರರುಗಳು ಭೂಮಿಯ ಬಾಡಿಗೆಯ ಹನ್ನೊಂದರಲ್ಲಿ ಹತ್ತು–ಭಾಗವನ್ನು. ಬ್ರಿಟಿಷ್ ವಸಾಹತುಶಾಹಿ ಪ್ರಭುತ್ವಕ್ಕೆ ನೀಡಬೇಕಾಗಿತ್ತು, ಅದು ವಿಫಲವಾದರೆ, ಪ್ರಭುತ್ವವು ತನ್ನ ಭೂಮಿಯನ್ನು ಈ ಮೊತ್ತವನ್ನು ಪಾವತಿಸಬಹುದಾದ ಬೇರೆ ಯಾರಿಗಾದರೂ ಮಾರಬಹುದಾಗಿತ್ತು. ಆದ್ದರಿಂದ ವಸಾಹತುಶಾಹಿ ಆಡಳಿತಗಾರರನ್ನು ತೃಪ್ತಿಪಡಿಸುವ ಮತ್ತು ಸ್ವಯಂ–ಉನ್ನತಿಯ ಪ್ರಯತ್ನದಲ್ಲಿ, ಈ ಜಮೀನದಾರರು ರೈತರ ಶೋಷಣೆಯನ್ನು ತೀವ್ರಗೊಳಿಸಿದರು. ಸರ್ಕಾರಕ್ಕೆ ಪಾವತಿಸಬೇಕಾದ ತಮ್ಮದೇ ಕಂತುಗಳನ್ನು ನಿಗದಿಪಡಿಸಲಾಗಿದ್ದರೂ, ಜಮೀನದಾರರು ರೈತರ ಮೇಲೆ ತೆರಿಗೆ ದರವನ್ನು ಹೆಚ್ಚಿಸುವ ಸ್ವಾತಂತ್ರ್ಯವನ್ನು ಹೊಂದಿದ್ದರು. ಈ ಪ್ರಕ್ರಿಯೆಯ ಮೂಲಕ ಪ್ರಾಚೀನ ಭಾರತದ ಊಳಿಗಮಾನ್ಯ ಶ್ರೀಮಂತರು ಕಣ್ಮರೆಯಾಗುವುದರೊಂದಿಗೆ, ಲೇವಾದೇವಿದಾರರು, ವ್ಯಾಪಾರಿಗಳು ಮತ್ತು ವಸಾಹತುಶಾಹಿ ಅಧಿಕಾರಿಗಳಿಂದ ಹುಟ್ಟಿದ ಭೂಮಾಲೀಕರ ಹೊಸ ಸ್ತರವು ದೃಶ್ಯದಲ್ಲಿ ಕಾಣಿಸಿಕೊಂಡಿತು. ಕೃಷಿಕ ಮತ್ತು ಜಮೀನದಾರರ ನಡುವೆ ಪರಾವಲಂಬಿ ಮಧ್ಯವರ್ತಿಗಳ ಸರಣಿಯು ಮೊಳಕೆಯೊಡೆಯಿತು, ಪ್ರತಿಯೊಬ್ಬರೂ ತಮ್ಮದೇ ಆದ ಪಾಲನ್ನು ಸುಲಿಗೆ ಮಾಡಲು ಪ್ರಯತ್ನಿಸಿದರು ಮತ್ತು ಇದರಿಂದಾಗಿ ರೈತರ ಶೋಷಣೆಯನ್ನು ಎಲ್ಲಾ ಪ್ರಮಾಣಗಳಿಗಿಂತ ಮೀರಿ ತೀಕ್ಷ್ಣಗೊಳಿಸಿದರು.

ದಕ್ಷಿಣ ಭಾರತದಲ್ಲಿ ವಸಾಹತುಶಾಹಿಗಳು ರೈತರನ್ನು ಶೋಷಿಸಲು ರೈತವಾರಿ ವ್ಯವಸ್ಥೆಯನ್ನು ಪರಿಚಯಿಸಿದರು. ರೈತನು ಒಂದು ಜಮೀನಿನ ಖಾಯಂ ಹಿಡುವಳಿದಾರನಾದನು, ಭೂಮಿ ಉಳುವವನು ಕಟ್ಟುಪಾಡುಗಳಿಂದ ಸಿಕ್ಕಿಹಾಕಿಕೊಂಡನು ಮತ್ತು ವಾಸ್ತವವಾಗಿ ಭೂಮಿಗೆ ಸರಪಳಿಯಿಂದ ಬಂಧಿಸಲ್ಪಟ್ಟನು.

ಜಮಿಂದಾರಿ ಮತ್ತು ರೈತವಾರಿ ವ್ಯವಸ್ಥೆಗಳು ರೈತರನ್ನು ಶೋಷಿಸುವ ಮಾರ್ಪಡಿಸಿದ ಊಳಿಗಮಾನ್ಯ ವಿಧಾನಗಳನ್ನು ಸಂರಕ್ಷಿಸುವ ಎರಡು ಪ್ರಮುಖ ಮಾರ್ಗಗಳಾದವು. ಈ ವ್ಯವಸ್ಥೆಗಳು ವಸಾಹತುಶಾಹಿಗಳ ಹಿತಾಸಕ್ತಿಗಳನ್ನು ಕಾಪಾಡಲು ಸಂಪೂರ್ಣವಾಗಿ ನೆರವಾದವು ಮತ್ತು, ರೈತರನ್ನು ಅರೆ ಗುಲಾಮರ ಸ್ಥಾನಕ್ಕೆ ಇಳಿಸಿದವು.

**ಪುಟ 14 ನೋಡಿ**




**ಸುಕೋಮಲ್ ಸೆನ್**
(1934–2017)

ಕಲ್ಕತ್ತಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವೀಧರರಾದ ಸುಕೋಮಲ್ ಸೇನ್ ಅವರು ಭಾರತದ ಕಾರ್ಮಿಕ ಆಂದೋಲನದಲ್ಲಿ ದೀರ್ಘಕಾಲದ ಮತ್ತು ಅನುಭವಿ ಕಾರ್ಯಕರ್ತರಾಗಿದ್ದರು. ಅವರು 1982ರಿಂದ 2008ರ ವರೆಗೆ ಎಂಟು ದಶಲಕ್ಷ ಸಾರ್ವಜನಿಕ ಉದ್ಯೋಗಿಗಳನ್ನು ಪ್ರತಿನಿಧಿಸುವ ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಸಿಐಟಿಯು ಉಪಾಧ್ಯಕ್ಷ ರಾಗಿ ಸೇವೆ ಸಲ್ಲಿಸಿದ್ದ ಇವರು ಅಂತರರಾಷ್ಟ್ರೀಯ ಕಾರ್ಮಿಕ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. 1982 ರಲ್ಲಿ ಪ್ರೇಗ್‌ನಲ್ಲಿ ನಡೆದ 'ಸಾರ್ವಜನಿಕ ಮತ್ತು ಸಂಬಂಧಿತ ನೌಕರರ ಟ್ರೇಡ್ ಯೂನಿಯನ್ ಇಂಟರ್‌ನ್ಯಾಷನಲ್' (ಟಿಯುಐ)ನ ನಿರ್ದೇಶನ ಸಮಿತಿ ಸಭೆಯಲ್ಲಿ ಭಾಗವಹಿಸಿದರು. 1996 ರಲ್ಲಿ ಅದರ ಪ್ರಧಾನ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡರು 2009 ರ ಜೂನ್ ವರೆಗೆ ಈ ಹುದ್ದೆಯಲ್ಲಿದ್ದರು. 2011 ರವರೆಗೆ ಅವರು ವರ್ಲ್ಡ್ ಫೇಡರೇಶನ್ ಆಫ್ ಟ್ರೇಡ್ ಯೂನಿಯನ್ಸ್ (ಡಬ್ಲ್ಯುಎಫ್‌ಟಿಯು)ನ ಅಧ್ಯಕ್ಷಮಂಡಳಿಯ ಸದಸ್ಯರಾಗಿದ್ದರು.

ವಿದ್ವತ್ಪೂರ್ಣ ಬರಹಗಾರರಾದ ಸುಕೋಮಲ್ ಸೆನ್ ಅವರು ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಚಳವಳಿಯ ಇತಿಹಾಸ,. ಮೇ ದಿನ ಮತ್ತು ಭಾರತದಲ್ಲಿ ಎಂಟು ಗಂಟೆಯ ಕೆಲಸದ ದಿನದ ಹೋರಾಟ; ಕಮ್ಯುನಿಸ್ಟ್ ಪ್ರಣಾಳಿಕೆ: ಕ್ರಾಂತಿಯ ಸಿದ್ಧಾಂತದ 150 ನೇ ವಾರ್ಷಿಕೋತ್ಸವದ ಕೊಡುಗೆ ಮತ್ತು ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಇತಿಹಾಸ. ಪುಸ್ತಕಗಳ ಲೇಖಕರಾಗಿದ್ದಾರೆ. ಅವರು ತಮ್ಮ ಮಾತೃಭಾಷೆಯಾದ ಬಂಗಾಳಿಯಲ್ಲಿ, ಭಾರತದ ಸಮಾಜದಲ್ಲಿ ಸಂಸ್ಕೃತಿ ಮತ್ತು ಸಾಮಾಜಿಕ ಕ್ರಾಂತಿಯ ಪ್ರಶ್ನೆ, ಜಾತಿ, ಧರ್ಮ ಮತ್ತು ಭಾರತೀಯ ಸಮಾಜ, ಫ್ಯಾಸಿಸಂ ಮತ್ತು ಭಾರತೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಕಾರ್ಮಿಕ ವರ್ಗದ ಪಾತ್ರದ ಪುಸ್ತಕಗಳನ್ನೂ ಬರೆದಿದ್ದಾರೆ. ಭಾರತದಿಂದ ಪ್ರಕಟವಾಗುವ ಕೆಲವು ಸಂಪಾದಿತ ಪುಸ್ತಕಗಳಲ್ಲಿ ಮತ್ತು ಹಲವಾರು ಪತ್ರಿಕೆಗಳಲ್ಲಿ ಅವರ ಲೇಖನಗಳು ಪ್ರಕಟವಾಗಿವೆ.

ಅವರು ಭಾರತದಲ್ಲಿ ಮೇದಿನದ ಮೂಲದ ಬಗ್ಗೆ ಇಂಗ್ಲಿಷ್‌ನಲ್ಲಿ ಬರೆದ 'ಮೇ ಡೇ ಇನ್ ಇಂಡಿಯಾ' ಲೇಖನ, ಇಟಲಿಯ ಮೇ ಡೇ ಇನ್ಸ್ಟಿಟ್ಯೂಟ್ ನಿಂದ ಪ್ರಕಟವಾದ ಜಗತ್ತಿನ ವಿವಿಧೆಡೆ ಮೇ ದಿನದ ಕುರಿತ ಅತಿದೊಡ್ಡ ಸಂಪಾದಿತ ಪುಸ್ತಕದಲ್ಲಿ ಸ್ಥಾನ ಪಡೆದಿದೆ.

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅಂಗವಾದ 'ಎಂಪ್ಲಾಯೀಸ್ ಫೋರಂ'ನ ಸ್ಥಾಪನಾ ಸಂಪಾದಕರಾಗಿದ್ದರು. ಅವರು 1982 ರಿಂದ 1994 ರವರೆಗೆ ಸಿಪಿಐ(ಎಂ) ಸಂಸತ್ ಸದಸ್ಯರಾಗಿದ್ದರು.

# 'ನಮ್ಮ ಧೋರಣೆ ನಿಮ್ಮ ಅಗತ್ಯಗಳಿಗೆ ಚೆನ್ನಾಗಿ ಬೆರೆತುಕೊಳ್ಳುತ್ತದೆ' ಶ್ರೀಮಂತ ವಿದೇಶೀ ಹೂಡಿಕೆದಾರರಿಗೆ ಪ್ರಧಾನಿಗಳ ಭರವಸೆ

ಇದು ನವಂಬರ್ 5ರಂದು **Virtual Global Investors Roundtable (VGIR) 2020** , ಅಂದರೆ ಅಂತರ್ಜಾಲದಲ್ಲಿ ಜಾಗತಿಕ ಹೂಡಿಕೆದಾರರ ದುಂಡುಮೇಜಿನ ಸಭೆಯಲ್ಲಿ ಪ್ರಧಾನ ಮತ್ರಿಗಳು ನೀಡಿದ ಭರವಸೆ. ಜಗತ್ತಿನ ಒಟ್ಟು 6 ಟ್ರಿಲಿಯನ್ ಡಾಲರ್ (ಸುಮಾರು 4. 5 ಕೋಟಿ ಕೋಟಿ ರೂ.ಗಳು) ಆಸ್ತಿಗಳ ವ್ಯವಹಾರದಲ್ಲಿರುವ ಜಗತ್ತಿನ 20 ಅತ್ಯಂತ ಶ್ರೀಮಂತ ಹೂಡಿಕೆದಾರರು ಈ ಸಭೆಯಲ್ಲಿ ಭಾಗವಹಿಸಿದರು. ಪ್ರಧಾನ ಮಂತ್ರಿಗಳು 'ಬಿಹಾರದಲ್ಲಿ ಬಿರುಸಿನ ಚುನಾವಣಾ ಪ್ರಚಾರದ ನಡುವೆಯೂ ಈ ಸಭೆಯಲ್ಲಿ ಭಾಗವಹಿಸಿದರು. ಜತೆಗೆ ಮುಕೇಶ್ ಅಂಬಾನಿ, ರತನ್ ಟಾಟಾ, ದಿಲಿಪ್ ಸಾಂಘವಿ, ಉದಯ್ ಕೊಟಕ್, ದೀಪಕ್ ಪಾರೇಖ್ ಮತ್ತು ನಂದನ್ ನೀಲೆಕಣಿಯಂತಹ ಅತಿರಥ, ಮಹಾರಥ ಉದ್ಯಮಿಗಳೂ ಇದ್ದರು.

ನಮ್ಮಲ್ಲಿ ಕಾರ್ಪೊರೇಟ್ ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸಿದ್ದೇವೆ, ಹೊಸ ಕಾರ್ಮಿಕ ಸಂಹಿತೆಗಳನ್ನು ತಂದಿದ್ದೇವೆ, ವಿವಿಧ ವಲಯಗಳಲ್ಲಿ ವಿವಿಧ ರೀತಿಗಳ ಉತ್ಪಾದನಾ ಉತ್ತೇಜನೆಗಳನ್ನು ಪ್ರಕಟಿಸಿದ್ದೇವೆ; ಹೂಡಿಕೆದಾರರಿಗೆ ಅತ್ಯುತ್ತಮ ಮತ್ತು ಅತಿ ಸುರಕ್ಷಿತ ದೀರ್ಘಕಾಲದ ಪ್ರತಿಫಲಗಳು ಬೇಕು ಎಂದು ನಮಗೆ ಗೊತ್ತು. "ಇಂತಹ ಒಂದು ಧೋರಣೆ ನಿಮ್ಮ ಅಗತ್ಯಗಳಿಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ" ಎಂದು ಪ್ರಧಾನಿಗಳು ಹೇಳಿದರು. ( ಸುಭೋದ್ ವರ್ಮ, ನ್ಯೂಸ್‌ಕ್ಲಿಕ್, ನವಂಬರ್ 15)

ಅಂದರೆ ಇವೆಲ್ಲ ಕ್ರಮಗಳು ಜಗತ್ತಿನ ಅತ್ಯಂತ ಶ್ರೀಮಂತ ಹೂಡಿಕೆದಾರರ ಅಗತ್ಯಗಳನ್ನು ಪೂರೈಸಲಿಕ್ಕಾಗಿ ಎಂರ್ಥವಲ್ಲವೇ?

ಇದೇ ಪ್ರಧಾನ ಮಂತ್ರಿಗಳು ಸಂಸತ್ತು ಪ್ರತಿಪಕ್ಷಗಳ ಸದಸ್ಯರ ಗೈರು ಹಾಜರಿಯಲ್ಲಿ ಕಾರ್ಮಿಕ ಆಂದೋಲನ ಬಹುವಾಗಿ ವಿರೋಧಿಸುತ್ತಿದ್ದ ಮೂರು ಕಾರ್ಮಿಕ ಸಂಹಿತೆಗಳನ್ನು ಪಾಸು ಮಾಡಿಸಿಕೊಂಡ ನಮತರ ಇವು ಕಾರ್ಮಿಕರಒಳಿತಿಗಾಗಿ, ಇವು ಎಲ್ಲರಿಗೂ ಕನಿಷ್ಟ ವೇತನ, ಕೆಲಸದ ಸ್ಥಳಗಳಲ್ಲಿ ಸುರಕ್ಷೆ ಇತ್ಯಾದಿಗಳನ್ನು ಖಾತ್ರಿ ಪಡಿಸುತ್ತದೆ ಎಂದಿದ್ದರು. ಇದನ್ನು ಉಳಿದ ಕಾರ್ಮಿಕ ಸಂಘಟನೆಗಳಂತೂ ನಂಬಿಲ್ಲ, ಸ್ವತಃ ಸಂಘ ಪರಿವಾರಕ್ಕೆ ಸೇರಿದ ಕಾರ್ಮಿಕ ಸಂಘಟನೆಯೂ ನಂಬಿಲ್ಲ. ಅದೇ ರೀತಿ ಮೂರು ಕೃಷಿ ಮಸೂದೆಗಳು ರೈತರ ಹಿತದೃಷ್ಟಿಯಿಂದ ಎಂಬುದನ್ನು ಯಾವ ರೈತ ಸಂಘಟನೆಯೂ ನಂಬಿಲ್ಲ.

ಜಗತ್ತಿನ ಅತ್ಯಂತ ಶ್ರೀಮಂತ ಹೂಡಿಕೆದಾರರಿಗೆ ನೀಡಿದ ಭರವಸೆ ಈ ಅಪನಂಬಿಕೆಯನ್ನು ಸಾಬೀತು ಮಾಡಿದೆ. ನಿಜವಾಗಿಯೂ ಮೋದಿ ಸರಕಾರದ ಧೋರಣೆ ಹೂಡಿಕೆದಾರರ ಅಗತ್ಯಗಳಿಗೆ ಚೆನ್ನಾಗಿಯೇ ಬೆರೆತುಕೊಳ್ಳುತ್ತದೆ. ಹೆಚ್ಚು ತೆರಿಗೆ ತೆರಬೇಕಾಗಿಲ್ಲ, ಮಾಲಕರ ಪರವಾಗಿರುವ ಹೊಸ ಕಾರ್ಮಿಕ ಸಂಹಿತೆಗಳಿಂದಾಗಿ ಕಾರ್ಮಿಕರಿಂದ ಏನೂ ತೊಂದರೆ ಇರುವುದಿಲ್ಲ, ನಮ್ಮ ಕೃಷಿ ವ್ಯವಸ್ಥೆಯನ್ನೂ ಸಾಗುವಳಿಯಿಂದ ಮಾರಾಟದ ವರೆಗೂ ಕಾರ್ಪೊರೇಟ್ ಹೂಡಿಕೆಗಳಿಗೆ ತೆರೆಯಲಾಗಿದೆ ಇನ್ನೇನು ಬೇಕು? ಎಂದು ಈ ಅರ್ಥಶಾಸ್ತ್ರಜ್ಞರು ಮಾರ್ಮಿಕವಾಗಿ ಹೇಳಿದ್ದಾರೆ.

ಆದರೆ ದೇಶದ ಪ್ರಧಾನ ಮಂತ್ರಿಗಳು ದೇಶದ ಜನರಿಗೆ 'ಸ್ವಾವಲಂಬನೆ'ಯು ಮಾತಾಡುತ್ತ, ವಿದೇಶಿ ಹೂಡಿಕೆದಾರರಿಗೆ ಖಾತ್ರಿಪಡಿಸಬೇಕೆಂದಿರುವ ಸೌಲಭ್ಯಗಳು ಬಹುಪಾಲು ಭಾರತೀಯರಿಗೆ ಸಾವು–ಬದುಕಿನ ವಿಷಯಗಳು ಎಂಬುದು ಈ ಹೂಡಿಕೆದಾರರಿಗೆ ಗೊತ್ತಿದೆಯೇ ಎಂದು ಮುಂದುವರೆದು ಅವರು ಕೇಳುತ್ತಾರೆ.

## ನ್ಯೂ ಇಂಡಿಯಾ ನ್ಯೂಸ್




**ನಿನ್ನ ಬೆಳೆಯನ್ನು ಕೊಳ್ಳಲು ಎಷ್ಟೊಂದು ಕಂಪನಿಗಳು!**
ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

# 'ಇದೋ ಸುಪ್ರಿಂ ಕೋರ್ಟ್ ಇಲ್ಲಿದೆ ಎಂಬ ಸಂದೇಶ' ಎಲ್ಲರಿಗೂ ಇಲ್ಲ!

ಉತ್ತರ ಪ್ರದೇಶದ ಮಥುರಾದಲ್ಲಿ ಒಂದು ತಿಂಗಳಿಗೂ ಹೆಚ್ಚು ಸಮಯದಿಂದ ಜೈಲಿನಲ್ಲಿರುವ ಕೇರಳ ಮೂಲದ ದಿಲ್ಲಿಯ ಪತ್ರಕರ್ತ ಸಿದ್ದಿಕಿ ಕಪ್ಪನ್‌ಗೆ ಜಾಮೀನು ಅರ್ಜಿ ಸಲ್ಲಿಸಲು 49 ದಿನಗಳ ನಂತರ ಈಗ ಅವಕಾಶವನ್ನು ಕೊಡಲಾಗಿದೆ. ಅಕ್ಟೋಬರ್ 5ರಂದು ಬಂಧಿಸಿದ ಆತನ ಬಿಡುಗಡೆಯ ಬಗ್ಗೆ ಮಧ್ಯಂತರ ಆದೇಶ ನೀಡಬೇಕೆಂಬ ಅರ್ಜಿಯ ವಿಚಾರಣೆಯಲ್ಲಿ ಆ ಬಗ್ಗೆ ಏನೂ ಹೇಳದೆ, ಮುಖ್ಯ ನ್ಯಾಯಾಧೀಶರ ನೇತೃತ್ವದ ಮೂವರು ನ್ಯಾಯಾಧೀಶರ ಪೀಠ ನವಂಬರ್ 16ರಂದು ಉತ್ತರ ಪ್ರದೇಶ ಪೊಲಿಸ್‌ಗೆ ನೋಟೀಸ್ ಕಳಿಸಿ ವಿಚಾರಣೆಯನ್ನು ಮತ್ತೆ ನವಂಬರ್ 20ಕ್ಕೆ ಮುಂದೂಡಿತ್ತು. ನವಂಬರ್ 20ರಂದು ಸುಪ್ರಿಂ ಕೋರ್ಟಿಗೆ ಉತ್ತರಪ್ರದೇಶ ಸರಕಾರದ ಪರವಾಗಿ ಸಾಲಿಸಿಟರ್ ಜನರಲ್ "ಆರೋಪಿ ವಕೀಲರನ್ನು ಭೇಟಿ ಮಾಡಲು ಉತ್ತರಪ್ರದೇಶ ಸರಕಾರದ ಆಕ್ಷೇಪವಿಲ್ಲ" ಎಂದು ಹೇಳಿದ ಮೇಲೆ ವಿಚಾರಣೆಯನ್ನು ಮುಂದಿನ ವಾರಕ್ಕೆ ಹಾಕಲಾಗಿದೆ ಎಂದು ವರದಿಯಾಗಿದೆ.

ಕೇರಳದ ಒಂದು ವೆಬ್ ಪತ್ರಿಕೆಯ ದಿಲ್ಲಿ ಪಬ್ರಿನಿಧಿಯಾಗಿ ಕಳೆದ 9 ವರ್ಷಗಳಿಂದ ಕೆಲಸ ಮಾಡುತ್ತಿರುವ ಕಪ್ಪನ್ ಹಾಥ್ರಸ್‌ನಲ್ಲಿ 19ವರ್ಷದ ದಲಿತ ಹುಡುಗಿಯ ಮೇಲೆ ಅತ್ಯಾಚಾರ, ಅದರಿಂದಾಗಿ ಆಕೆಯ ಸಾವಿನ ಘಟನೆಯ ಬಗ್ಗೆ ತಮ್ಮ ಮಾಧ್ಯಮಕ್ಕೆ ವರದಿ ಮಾಡಲು ಹೊರಟಿದ್ದರು ಎನ್ನಲಾಗಿದೆ. ಅಕ್ಟೋಬರ್ 5ರಂದು ಉತ್ತರ ಪ್ರದೇಶ ಪೋಲೀಸರು ಅವರು, ಮತ್ತು ಜತೆಗೆ ಪಯಣಿಸುತ್ತಿದ್ದ ಇತರ ಮೂವರನ್ನು ಬಂಧಿಸಿ ಮಥುರಾ ಜೈಲಿಗೆ ಹಾಕಿದ್ದರು. ಕೇರಳ ಕಾರ್ಯನಿರತ ಪತ್ರಕರ್ತರ ಸಂಘ ಅವರ ಬಿಡುಗಡೆಗಾಗಿ ಮಾಡುತ್ತಿರುವ ಪ್ರಯತ್ನ ಇನ್ನೂ ಯಶಸ್ವಿಯಾಗಿಲ್ಲ. ಅವರ ಕುಟುಂಬದವರೂ ಸೇರಿದಂತೆ ಯಾರನ್ನೂ ಅವರನ್ನು ಭೇಟಿ ಮಾಡಲು ಬಿಟ್ಟಿಲ್ಲ ಎಂದು ಹೇಳಲಾಗಿತ್ತು. ಆದರೆ ಉತ್ತರಪ್ರದೇಶ ಪೋಲಿಸ್ ತಾವು ಆರೋಪಿ ವಕೀಲರನ್ನು ಭೇಟಿ ಮಾಡಲಾಗಲೀ, ಕುಟುಂಬದವರನ್ನು ಭೇಟಿಯಾಗಲಾಗಲೀ ಆಕ್ಷೇಪಸಿಲ್ಲ ಎಂದು ಈಗ ಸುಪ್ರಿಂ ಕೋರ್ಟಿಗೆ ಹೇಳಿದ್ದಾರೆ.

ಕಳದ ವಾರ ರಿಪಬ್ಲಿಕ್ ಟಿವಿ ಮುಖ್ಯ ಸಂಪಾದಕ ಅರ್ಣಬ್ ಗೋಸ್ವಾಮಿಗೆ ಸುಪ್ರಿಂ ಕೋರ್ಟಿನಿಂದ ಮಧ್ಯಂತರ ಜಾಮೀನು ಸಿಕ್ಕಿದ ನಂತರ, ಉತ್ತರಪ್ರದೇಶದ ಪೋಲೀಸರು ಬಂಧಿಸಿರುವ ಪತ್ರಕರ್ತ ಕಪ್ಪನ್‌ಗೆ ಏಕಿಲ್ಲ ಎಂಬ ಪ್ರಶ್ನೆ ವ್ಯಾಪಕವಾಗಿ ಕೇಳಬಂದಿತ್ತು.

ಬಿಡುಗಡೆ ಪಡೆಯಬಹುದೆಂಬ ನಿರೀಕ್ಷೆಗೆ ಕಾರಣ ಗೋಸ್ವಾಮಿಯವರ ಕೇಸಿನ ವಿಚಾರಣೆಯ ಸಂದರ್ಭದಲ್ಲಿ ಇಬ್ಬರು ನ್ಯಾಯಾಧೀಶರ ಪೀಠದ ಮುಖ್ಯಸ್ಥರಾದ ನ್ಯಾಯಮೂರ್ತಿ ಚಂದ್ರಚೂಡ್ ರವರ ಮಾತುಗಳು.

**"ಸಂವಿಧಾನಿಕ ನ್ಯಾಯಾಲಯಗಳಾಧ ಹೈಕೋರ್ಟ್‌ಗಳು ವೈಯಕ್ತಿಕ ಸ್ವಾತಂತ್ರ್ಯದ ನಿರಾಕರಣೆಯ ವಿಷಯದಲ್ಲಿ ಸಾಕಷ್ಟು ಮಾಡುತ್ತಿಲ್ಲ ಎಂದು ಸುಪ್ರಿಂ ಕೋರ್ಟಿಗೆ ಬೇಸರವಾಗಿದೆ" ಎಂದ ಅವರು " ಈ ನ್ಯಾಯಾಲಯ ಇಂದು ಮಧ್ಯಪ್ರವೇಶಿಸದಿದ್ದರೆ, ನಾವು ವಿನಾಶದ ದಾರಿಯಲ್ಲಿ ಪಯಣಿಸುತ್ತಿದ್ದೇವೆ ಎಂಬುದನ್ನು ನಿರಾಕರಿಸುವುದು ಸಾಧ್ಯವಾಗುವುದಿಲ್ಲ...ರಾಜ್ಯ ಸರಕಾರಗಳು ಈ ರೀತಿ ವ್ಯಕ್ತಿಗಳ ಮೇಲೆ ಗುರಿಯಿಡುತ್ತಿದ್ದರೆ, ಸುಪ್ರಿಂ ಕೋರ್ಟ್ ಇಲ್ಲಿದೆ ಎಂಬ ಸಂದೇಶವನ್ನು ಕಳಿಸೋಣ" ಎಂದಿದ್ದರು..**


ನವಂಬರ್ 11ರಂದು ಕ್ರಿಮಿನಲ್ ಕೇಸೊಂದರಲ್ಲಿ ಮಹಾರಾಷ್ಟ್ರ ಪೋಲಿಸ್ ಬಂಧಿಸಿದ ರಿಪಬ್ಲಿಕ್ ಟಿವಿಯ ಮಾಲಕ ಮತ್ತು ಮುಖ್ಯ ಸಂಪಾದಕ ಅರ್ಣಬ್ ಗೋಸ್ವಾಮಿ ಏಳೇ ದಿನಗಳಲ್ಲಿ ಸುಪ್ರಿಂ ಕೋರ್ಟಿನಿಂದ ಮಧ್ಯಂತರ ಜಾಮೀನು ಪಡೆದಾಗ "ನನ್ನ ಗಂಡನಿಗೆ ನ್ಯಾಯವನ್ನು ನಿರಾಕರಿಸುತ್ತಿರುವಂತೆ ನನಗನಿಸುತ್ತದೆ. ನ್ಯಾಯಾಂಗ ಮತ್ತು ಸರಕಾರದ ವಿವಿಧ ಹಂತಗಳ ಅಧಿಕಾರಿಗಳನ್ನು ಕಂಡು ವಿನಂತಿಸಿಕೊಂಡರೂ ನ್ಯಾಯ ಇನ್ನೂ ಸಿಕ್ಕಿಲ್ಲ. ನಾವೂ ಈ ದೇಶದ ನಾಗರಿಕರಲ್ಲವೇ?" ಎಂದು ನೋವಿನಿಂದ ಕೇಳಿದ ಅವರ ಪತ್ನಿ ರೈಹಾನ "ನ್ಯಾಯಾಂಗ ಕೂಡ ನಮ್ಮನ್ನು ಕೈಬಿಟ್ಟಂತೆ ಕಾಣುತ್ತದೆ. ನ್ಯಾಯ ಎಲ್ಲರಿಗೂ ಅಲ್ಲ, ಕೆಲವರಿಗೆ ಮಾತ್ರ" ಎಂದಿದ್ದರು.

**ಕೆಲವರು ಮಾತ್ರ ಸೂಪರ್ ನಾಗರಿಕರೇ?**

ಮುಂಬೈ ಹೈಕೋರ್ಟ್ ಗೋಸ್ವಾಮಿಯವರ ಜಾಮೀನು ಅರ್ಜಿ ತಿರಸ್ಕರಿಸಿದ ನಂತರ ಸುಪ್ರಿಂ ಕೋರ್ಟ್ ಮೊರೆ ಹೊಕ್ಕ ಮರುದಿನವೇ ಅವರ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಂಡದ್ದೂ ಹಲವರಿಗೆ ಆಶ್ಚರ್ಯ ಉಂಟು ಮಾಡಿತ್ತು. **ಸ್ವತಃ ಸುಪ್ರಿಂ ಕೋರ್ಟ್ ಬಾರ್ ಅಸೋಸಿಯೇಷನ್‌ನ ಅಧ್ಯಕ್ಷ ಮತ್ತು ಖ್ಯಾತ ವಕೀಲ ದುಷ್ಯಂತ ದವೆ ಈ ಕುರಿತು ಸುಪ್ರಿಂ ಕೋರ್ಟಿನ ಸೆಕ್ರೆಟರಿ ಜನರಲ್ ರವರಿಗೆ ಪತ್ರ ಬರೆದರು ಎಂಬುದು ಗಮನಾರ್ಹ.** ಕೊವಿಡ್ ಸೋಂಕಿನ ಕಳೆದ ಎಂಟು ತಿಂಗಳಲ್ಲಿ, ಸಾವಿರಾರು ನಾಗರಿಕರು ಜೈಲುಗಳಲ್ಲಿದ್ದಾರೆ, ವಾರಗಟ್ಟಲೆ, ತಿಂಗಳಾನುಗಟ್ಟಲೆ ಅವರ ಅರ್ಜಿಗಳು ವಿಚಾರಣೆಯ ಪಟ್ಟಿಗೇ ಬರುವುದೇ ಇಲ್ಲ . ಆದರೆ ಸುಪ್ರಿಂ ಕೋರ್ಟಿಗೆ ಅರ್ಣಬ್ ಗೋಸ್ವಾಮಿ ಅರ್ಜಿ ಬಂದಾಗಲೆಲ್ಲ ಅದು ತಕ್ಷಣವೇ ಪಟ್ಟಿಯಲ್ಲಿ ಸೇರುವುದು ಏಕೆ ಮತ್ತು ಹೇಗೆ ಎಂಬುದು ಕಳವಳ ಉಂಟು ಮಾಡುತ್ತದೆ ಎಂದು ದವೆಯವರು ತಮ್ಮ ಪತ್ರದಲ್ಲಿ ಆತಂಕ ವ್ಯಕ್ತಪಡಿಸಿದ್ದರು.

ಭಾರತದ ಮುಖ್ಯ ನ್ಯಾಯಾಧೀಶರು ಮತ್ತು ಮಾಸ್ಟರ್ ಆಫ್ ರೋಸ್ಟರ್ ರಿಂದ ಈ ಬಗ್ಗೆ ವಿಶೇಷ ಆದೇಶವೇನಾದರೂ ಇದೆಯೇ, ಅಥವ ಆಡಳಿತದ ಮುಖ್ಯಸ್ಥರಾಗಿ ಸೆಕ್ರೆಟರಿ ಜನರಲ್ ಅಥವ ರಿಜಿಸ್ಟ್ರಾರ್‌ಅವರಿಗೆ ವಿಶೇಷ ಆದ್ಯತೆ ನೀಡುತ್ತಿದ್ದಾರೆಯೇ ಎಂದು ದವೆಯವರು ಸೆಕ್ರೆಟರಿ ಜನರಲ್ ಅವರಿಗೆ ಬರೆದ ಪತ್ರದಲ್ಲಿ ನೇರವಾಗಿಯೆ ಕೇಳಿದ್ದರು.

" ಇದನ್ನು ಆಡಳಿತ ವಿಭಾಗದ ಯಾರು ನಡೆಸಿದ್ದರೂ ಅದು ಅಧಿಕಾರದ ಸಂಪೂರ್ಣ ದುರುಪಯೋಗ, ಕೆಲವು ವಕೀಲರು ಪ್ರತಿನಿಧಿಸುವ ಕಕ್ಷಿದಾರರಿಗೆ ವಿಶೇಷ ಸೌಲಭ್ಯ ದೊರೆಯುತ್ತದೆ ಎಂಬ ಭಾವನೆಯನ್ನು ಉಂಟು ಮಾಡುತ್ತದೆ. ಇದು ಸುಪ್ರಿಂ ಕೋರ್ಟಿನಂತಹ ಮಹಾನ್ ಸಂಸ್ಥೆಗೆ ಶೋಭೆ ತರುವಂತದ್ದಲ್ಲ" ಎಂದು ತಮ್ಮ ಪತ್ರದಲ್ಲಿ ಹೇಳಿದ್ದ ದವೆಯವರು ತಮ್ಮ ಈ ಪತ್ರವನ್ನು ನ್ಯಾಯಮೂರ್ತಿ ಚಂದ್ರಚೂಡ ಅವರ ನ್ಯಾಯಪೀಠದೆದುರು ಇಡಬೇಕು ಎಂದೂ ಕೇಳಿದ್ದರು.




ವ್ಯಂಗ್ಯಚಿತ್ರ: ಸಾತ್ವಿಕ್ ಗಡೆ, ದಿ ಹಿಂದು

"ಸಿಎಎ, ಕಲಮು 370, ಹೇಬಿಯಸ್ ಕಾರ್ಪಸ್, ಚುನಾವಣಾ ಬಾಂಡುಗಳು ಮುಂತಾದವುಗಳನ್ನು ತಿಂಗಳುಗಳೇ ಕಳೆದರೂ ವಿಚಾರಣೆಗೆ ಎತ್ತಿಕೊಳ್ಳದಿರುವಾಗ, ಅರ್ಣಬ್ ಗೋಸ್ವಾಮಿಯ ಅರ್ಜಿಗಳು ಗಂಟೆಗಳಲ್ಲೇ ವಿಚಾರಣೆಗೆ ಎತ್ತಿಕೊಳ್ಳಬೇಕಾದ ವಿಷಯಗಳ ಪಟ್ಟಿಯಲ್ಲಿ ಬರುತ್ತವೆ. ಆತನೇನು ಸೂಪರ್ ನಾಗರಿಕನೇ?" ಎಂದು ಪ್ರಖ್ಯಾತ ವಕೀಲ ಪ್ರಶಾಂತ ಭೂಷಣ್ ಈ ಕುರಿತು ಟಿಪ್ಪಣಿ ಮಾಡಿದ್ದರು.

ಇದು ಅನೇಕ ಮಾನವ ಹಕ್ಕುಗಳ ಹೋರಾಟಗಾರರನ್ನು ಯುಎಪಿಎ ಮುಂತಾದ ಕರಾಳ ಕಾಯ್ದೆಗಳ ಅಡಿಯಲ್ಲಿ ತಿಂಗಳಾನುಗಟ್ಟಲೆ ವಿಚಾರಣೆಯಿಲ್ಲದೆ, ಆರೋಫ ಪಟ್ಟಿಯನ್ನೂ ಹಾಕದೆ ಜೈಲಿನಲ್ಲಟ್ಟಿರುವ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವವಾದಿಗಳ ನಡುವೆ ಸಾರ್ವತ್ರಿಕವಾಗಿ ವ್ಯಕ್ತವಾಗಿರುವ ಅಭಿಪ್ರಾಯ ಕೂಡ.

**ಕುಣಾಲ್ ಕಾಮ್ರ 'ನ್ಯಾಯಾಂಗ ನಿಂದನೆ'**

ಈ ಹಿನ್ನೆಲೆಯಲ್ಲಿ ಅರ್ಣಬ್ ಗೋಸ್ವಾಮಿಯವರಿಗೆ ಮಧ್ಯಂತರ ಜಾಮೀನು ಸಿಕ್ಕ ಬಗ್ಗೆ ಪ್ರಖ್ಯಾತ ಸ್ಟಾಂಡ್–ಅಪ್ ಕಾಮಿಡಿಯನ್ ಕುಣಾಲ್ ಕಾಮ್ರ ಅವರ ಕಟು ಟ್ವೀಟ್‌ಗಳು ಅವರನ್ನು 'ನ್ಯಾಯಾಂಗ ನಿಂದನೆ'ಯ ಆರೋಪಕ್ಕೆ ಒಳಪಡಿಸಿವೆ. ಈ ದೇಶದ ಸುಪ್ರಿಂ ಕೋರ್ಟ್ ಈ ದೇಶದ ಅತ್ಯಂತ ಸರ್ವೋಚ್ಚ ಜೋಕರ್ ಆಗಿದೆ, ಬೆನ್ನುಮೂಳೆ ಇರುವ ಎಲ್ಲ ವಕೀಲರುಗಳು ಸುಪ್ರಿಂ ಕೋರ್ಟ್ ಅಥವ ನ್ಯಾಯಾಧೀಶರ ಬಗ್ಗೆ ಹೇಳುವಾಗ 'ಗೌರವಾನ್ವಿತ' ಎಂದು ಸೇರಿಸುವುದನ್ನು ನಿಲ್ಲಿಸಬೇಕು, ಏಕೆಂದರೆ ಗೌರವ ಎಂಬುದು ಆ ಕಟ್ಟಡದಿಂದ ಬಹಳ ಹಿಂದೆಯೇ ಹೊರಟು ಹೋಗಿದೆ ಎಂದು ಕಾಮ್ರ ಟಿಪ್ಪಣಿ ಮಾಡಿರುವುದಾಗಿ ವರದಿಯಾಗಿದೆ.

ತನ್ನ ವಿರುದ್ಧ ನ್ಯಾಯಾಂಗ ನಿಂದನೆಯ ಪ್ರಶ್ನೆ ಎದ್ದಾಗಲೂ "ನನ್ನ ಅಭಿಪ್ರಾಯ ಬದಲಾಗಿಲ್ಲ, ಏಕೆಂದರೆ ಇತರರ ವೈಯಕ್ತಿಕ ಸ್ವಾತಂತ್ರ್ಯದ ವಿಷಯಗಳಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ಮೌನವನ್ನು ಟೀಕಿಸದೆ ಇರಲು ಸಾಧ್ಯವಿಲ್ಲ" ಎಂದಿರುವ ಅವರು ತನಗಾಗಿ ಕೊಡಬೇಕಾದ ನ್ಯಾಯಾಲಯದ ಸಮಯವನ್ನು ನೋಟುರದ್ಧತಿ ಅರ್ಜಿ, ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಹಿಂತೆಗೆದುಕೊಳ್ಳುವುದಕ್ಕೆ ಸವಾಲು ಹಾಕಿರುವ ಅರ್ಜಿ, ಚುನಾವಣಾ ಬಾಂಡುಗಳ ಕಾನೂನುಬದ್ಧತೆ ಮುಂತಾದ ತನ್ನ ನ್ಯಾಯಾಂಗ ನಿಂದನೆ ವಿಷಯಕ್ಕಿಂತ ಹೆಚ್ಚು ಮಹತ್ವದ ವಿಷಯಗಳಿಗೆ ಕೊಡಿ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ನಿಜ, ನ್ಯಾಯಮೂರ್ತಿ ಚಂದ್ರಚೂಡ ಅವರು ಹೇಳಿದಂತೆ "ನ್ಯಾಯಾಲಯ ಇಂದು ಮಧ್ಯಪ್ರವೇಶಿಸದಿದ್ದರೆ, ನಾವು ವಿನಾಶದ ದಾರಿಯಲ್ಲಿ ಪಯಣಿಸುತ್ತಿದ್ದೇವೆ ಎಂಬುದನ್ನು ನಿರಾಕರಿಸುವುದು ಸಾಧ್ಯವಾಗುವುದಿಲ್ಲ. ..ರಾಜ್ಯ ಸರಕಾರಗಳು ಈ ರೀತಿ ವ್ಯಕ್ತಿಗಳ ಮೇಲೆ ಗುರಿಯಿಡುತ್ತಿದ್ದರೆ, ಸುಪ್ರಿಂ ಕೋರ್ಟ್ ಇಲ್ಲಿದೆ ಎಂಬ ಸಂದೇಶವನ್ನು ಕಳಿಸಬೇಕಾಗುತ್ತ.ದೆ"

ಆದರೆ ಅಂತಹ ಸಂದೇಶವನ್ನು ಎಲ್ಲರಿಗೂ ಕಳಿಸುತ್ತಿಲ್ಲ ಎಂಬುದೇ ಹಲವರ ಆತಂಕ. ಆದ್ದರಿಂದ ದೇಶ ಈಗಾಗಲೇ ವಿನಾಶದ ಹಾದಿಯಲ್ಲಿ ಸಾಗಿದೆ ಎಂದು ಒಬ್ಬ ವಿಶ್ಲೇಷಕರು ಹೇಳಿದ್ದಾರೆ.

# ನೋಟು ರದ್ದತಿಯೂ, ಕಪ್ಪು ಹಣವೂ ಮತ್ತು ಅನೌಪಚಾರಿಕ ವಲಯದ ನಾಶದ ಹೆಮ್ಮೆಯೂ




**ಹೊಸ ನೋಟುಗಳೊಂದಿಗೆ ಬದಲಾಯಿಸಿಕೊಳ್ಳಲು ಹೊರ ಬರದ ಹಳೆಯ ನೋಟುಗಳನ್ನು ಕೊಲ್ಲುವ ಉದ್ದೇಶ ಹೊಂದಿದ್ದ ನೋಟು ರದ್ದತಿಯು ಕಪ್ಪು ಹಣದ ವಿರುದ್ಧದ ಕಾರ್ಯಾಚರಣೆ ಎಂದೇ ಹೇಳಲಾಗಿತ್ತು. ಆದರೆ, ರದ್ದು ಮಾಡಿದ ನೋಟುಗಳ ಪೈಕಿ ಶೇ.99.3ರಷ್ಟು ನೋಟುಗಳು ವಿನಿಮಯಗೊಂಡ ಅಂಶವು ಇದನ್ನು ಒಂದು ಭಾರೀ ಅಧ್ವಾನದ ಕ್ರಮವಾಗಿ ದಾಖಲಿಸಿದೆ, ಅದೇ ಸಮಯದಲ್ಲಿ ಈ ಅಧ್ವಾನದ ಕ್ರಮವು ದೇಶದ ಶೇ.85ರಷ್ಟು ಉದ್ಯೋಗ ಮತ್ತು ಜಿಡಿಪಿಯ ಶೇ.45ರಷ್ಟು ಭಾಗ ಪಾಲು ಹೊಂದಿರುವ ರೈತರ ಕೃಷಿಯೂ ಸೇರಿದಂತೆ ಅನೌಪಚಾರಿಕ ವಲಯದ ಮೇಲೆ ಬಲವಾದ ಹೊಡೆತ ಕೊಟ್ಟಿತು ಎಂಬುದು ಜಗಜ್ಜಾಹೀರಾಗಿದೆ. ಆದರೆ ಮೋದಿಯವರು ಮತ್ತು ಅವರ ಆರ್ಥಿಕ ಸಲಹೆಗಾರರು ಅನೌಪಚಾರಿಕ ವಲಯದ ವಿನಾಶದ ಬಗ್ಗೆಯೇ ಹೆಮ್ಮೆ ಪಡುತ್ತಾರೆ!**


**ಪ್ರೊ. ಪ್ರಭಾತ್ ಪಟ್ನಾಯಕ್** ಅನು:ಕೆ.ಎಂ.ನಾಗರಾಜ್

2016ರ ನವೆಂಬರ್ 8 ರಂದು 500 ರೂ. ಮತ್ತು 1000 ರೂ. ನೋಟುಗಳನ್ನು ರದ್ದುಪಡಿಸಿದ ಕ್ರಮವು ಕಪ್ಪು ಹಣವನ್ನು (ಅಂದರೆ, ತೆರಿಗೆ ಲೆಕ್ಕಕ್ಕೆ ಸಿಗದ ಹಣವನ್ನು) ನಿಗ್ರಹಿಸುವಲ್ಲಿ ಯಶಸ್ವಿಯಾಗಿದೆ ಎಂದು ನರೇಂದ್ರ ಮೋದಿ ಹೇಳಿದ್ದಾರೆ. ನೋಟು ರದ್ದತಿಯಾಗಿ ಅದಾಗಲೇ ನಾಲ್ಕು ವರ್ಷಗಳು ಕಳೆದಿರುವುದರಿಂದ ಇಂತಹ ಒಂದು ಪೊಳ್ಳು ಹೇಳಿಕೆಯನ್ನು ನೀಡಿ ಬಚಾವಾಗಬಹುದು ಎಂದು ಅವರು ನಂಬಿರುವಂತೆ ಕಾಣುತ್ತದೆ. ಅದರ ಸತ್ಯ ಏನು ಎಂಬುದು ದೇಶದ ಬಹುತೇಕ ಜನರಿಗೆ ಗೊತ್ತಿದೆ.

ನೋಟು ರದ್ದತಿಯ ಮೂಲಕ ಕಪ್ಪು ಹಣವನ್ನು ನಿಗ್ರಹಿಸಲಾಗಿದೆ ಎಂದಾಗ, ಅದನ್ನು ಸಾಧಿಸಿದ ವ್ಯವಸ್ಥೆ ಇದ್ದಿರಲೇಬೇಕು ಮತ್ತು ಆ ವ್ಯವಸ್ಥೆಯು ಈ ಕಾರ್ಯವನ್ನು ಹೇಗೆ ಸಾಧಿಸಿತು ಎಂಬುದು ಕಾಣುವಂತಿರಬೇಕು. ಇಲ್ಲದಿದ್ದರೆ, 2016ರ ಒಲಿಂಪಿಕ್ ಕ್ರೀಡಾಕೂಟವು ಭಾರತದಲ್ಲಿ ಕಪ್ಪು ಹಣವನ್ನು ನಿಗ್ರಹಿಸಿತು ಎಂದು ಹೇಳುವುದಕ್ಕೂ ಈ ಹೇಳಿಕೆಗೂ ಏನೂ ವ್ಯತ್ಯಾಸವೇ ಇರುವುದಿಲ್ಲ. ಅಲ್ಲದೆ, ಕಪ್ಪು ಹಣವನ್ನು ನಿಗ್ರಹಿಸಲಾಯಿತು ಎಂಬ ಸಂಗತಿಯನ್ನೇ ಸರ್ಕಾರವು ಇನ್ನೂ ಅಧಿಕೃತವಾಗಿ ದೃಢಪಡಿಸಿಲ್ಲ. ಆದುದರಿಂದ, ಅದನ್ನು ಸಾಧಿಸಿದ ನಿರ್ದಿಷ್ಟ ಕಾರ್ಯವಿಧಾನ ಯಾವುದು ಎಂಬುದನ್ನು ಸ್ಪಷ್ಟಪಡಿಸಿದರೆ ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸುವುದು ನಮಗೆ ಸಾಧ್ಯವಾಗುತ್ತದೆ.

ನೋಟುಗಳನ್ನು ರದ್ದುಪಡಿಸಿದ ಸಂದರ್ಭದಲ್ಲಿ ಮೋದಿ ಸರ್ಕಾರವು ಒಂದು ವ್ಯವಸ್ಥೆಯನ್ನು ಸ್ಪಷ್ಟಪಡಿಸಿತ್ತು. ಈ ವ್ಯವಸ್ಥೆಯ ಪ್ರಕಾರ, 500 ರೂ ಮತ್ತು 1000 ರೂ ನೋಟುಗಳನ್ನು ಹೊಂದಿದ್ದವರು ಅವುಗಳನ್ನು ಹೊಸ ನೋಟುಗಳೊಂದಿಗೆ ಬದಲಾಯಿಸಿಕೊಳ್ಳಲು ಬ್ಯಾಂಕಿಗೆ/ಬಯಲಿಗೆ ಬರುತ್ತಾರೆ. ಆ ಸಮಯದಲ್ಲಿ ಅವರು ಅಷ್ಟೊಂದು ದೊಡ್ಡ ಮೊತ್ತದ ಹಣವನ್ನು ಇಟ್ಟುಕೊಂಡಿದ್ದರ ಬಗ್ಗೆ ವಿವರಣೆ ಕೊಡಲೇಬೇಕಾಗುತ್ತದೆ. ಇಲ್ಲವೇ, ತಮ್ಮ ಕಪ್ಪು ಹಣ ಬಹಿರಂಗಗೊಳ್ಳುವುದನ್ನು ತಪ್ಪಿಸಿಕೊಳ್ಳಲು ಅವರು ತಮ್ಮಲ್ಲಿರುವ ಕರೆನ್ಸಿ ನೋಟುಗಳನ್ನು "ಸಾಯಲು" ಬಿಡಬೇಕು. ಅಂದರೆ, ಹಣ ಕಳೆದುಕೊಳ್ಳುತ್ತಾರೆ. ಹಾಗಾಗಿ, ನೋಟು ರದ್ದತಿಯು ಕಪ್ಪು ಹಣದ ವಿರುದ್ಧ ಒಂದು ಹೊಡೆತವಾಗುತ್ತದೆ.

ಚಲಾವಣೆಯಲ್ಲಿರುವ ನೋಟುಗಳು ಭಾರತೀಯ ರಿಸರ್ವ್ ಬ್ಯಾಂಕಿನ ಹೊಣೆಗಾರಿಕೆಯಾಗುತ್ತವೆ. ಹಾಗಾಗಿ, ಅವುಗಳ ಒಂದು ಭಾಗವು "ಸತ್ತರೆ" ಮತ್ತು ತತ್ಸಂಬಂಧವಾದ ರಿಸರ್ವ್ ಬ್ಯಾಂಕಿನ ಆಸ್ತಿಗಳು ಬದಲಾಗದೆ ಉಳಿದ ಸಂದರ್ಭದಲ್ಲಿ ರಿಸರ್ವ್ ಬ್ಯಾಂಕ್, ಇಂಥಹ ಸತ್ತ ಹಳೆಯ ನೋಟುಗಳಿಗೆ ಸಮನಾದ ಮೌಲ್ಯದ ಹೊಸ ನೋಟುಗಳನ್ನು ಮುದ್ರಿಸಿ ಅವುಗಳನ್ನು ಸರ್ಕಾರಕ್ಕೆ ಒಪ್ಪಿಸಬಹುದು ಮತ್ತು ಸರ್ಕಾರವು ಈ ಹಣವನ್ನು ಯಾವ ಉದ್ದೇಶಕ್ಕೆ ಬೇಕಾದರೂ ಬಳಸಬಹುದು. ಹಾಗಾಗಿ, ನೋಟು ರದ್ದತಿಯಿಂದಾಗಿ, ಸತ್ತ ನೋಟುಗಳ ಮೌಲ್ಯಕ್ಕೆ ಸಮನಾಗಿ ದೊರೆಯುವ ಸುಮಾರು 3 ರಿಂದ 4 ಲಕ್ಷ ಕೋಟಿ ರೂಪಾಯಿ ಹಣವನ್ನು ಬಡ ಮನೆ-ಮಂದಿಗೆ ಹಂಚಲೂ ಬಹುದು ಮತ್ತು ಕಪ್ಪು ಹಣವನ್ನು ನಿಗ್ರಹಿಸಿದಂತೆಯೂ ಆಗುತ್ತದೆ ಎಂಬ ಅಂದಾಜಿನ ಲೆಕ್ಕದಲ್ಲಿ ಬಿಜೆಪಿಯ ಮುಖ ರಂಗೇರಿತ್ತು.





ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್

ಹೊಸ ನೋಟುಗಳೊಂದಿಗೆ ಬದಲಾಯಿಸಿಕೊಳ್ಳಲು ಹೊರ ಬರದ ಹಳೆಯ ನೋಟುಗಳನ್ನು ಈ ರೀತಿಯಲ್ಲಿ ಕೊಲ್ಲುವ ಉದ್ದೇಶ ಹೊಂದಿದ್ದ ನೋಟು ರದ್ದತಿಯು ಕಪ್ಪು ಹಣದ ವಿರುದ್ಧದ ಕಾರ್ಯಾಚರಣೆ ಎಂದೇ ಹೇಳಲಾಗಿತ್ತು. ಆದರೆ, ರದ್ದು ಮಾಡಿದ ನೋಟುಗಳ ಪೈಕಿ ಶೇ.99.3ರಷ್ಟು ನೋಟುಗಳು ವಿನಿಮಯಗೊಂಡ ಅಂಶವು ಕಪ್ಪು ಹಣದ ವಿರುದ್ಧ ಜರುಗಿಸಿದ ನೋಟು ರದ್ದತಿಯು ಒಂದು ಭಾರೀ ಅಧ್ವಾನದ ಕ್ರಮವಾಗಿ ಪರಿಣಮಿಸಿತು ಎಂಬುದು ಜಗಜ್ಜಾಹೀರಾಗಿದೆ. ಮತ್ತು, ಅದೇ ಸಮಯದಲ್ಲಿ ಈ ಅಧ್ವಾನದ ಕ್ರಮವು ದೇಶದ ಶೇ.85ರಷ್ಟು ಉದ್ಯೋಗ ಮತ್ತು ಜಿಡಿಪಿಯ ಶೇ.45ರಷ್ಟು ಭಾಗ ಪಾಲು ಹೊಂದಿರುವ ರೈತರ ಕೃಷಿಯೂ ಸೇರಿದಂತೆ ಅನೌಪಚಾರಿಕ ವಲಯದ ಮೇಲೆ ಬಲವಾದ ಹೊಡೆತ ಕೊಟ್ಟಿತು.

ಡೊನಾಲ್ಡ್ ಟ್ರಂಪ್ ಅವರಂತೆ ಮೋದಿ ಸಹ ಸೋಲನ್ನು ಒಪ್ಪಿಕೊಳ್ಳುವವರಲ್ಲ. ಕಪ್ಪು ಹಣವನ್ನು ನಿಗ್ರಹಿಸಲಾಗಿದೆ ಎಂದು ಈಗ ಪದೇ ಪದೇ ಮೋದಿ ಹೇಳುತ್ತಾರೆ. ಅಷ್ಟೇ ಅಲ್ಲ, ಅನೌಪಚಾರಿಕ ವಲಯದ ವಿನಾಶದ ಬಗ್ಗೆಯೂ ಹೆಮ್ಮೆ ಪಡುತ್ತಾರೆ. ಈ ಸಂಬಂಧವಾಗಿ ಕೆ.ಸುಬ್ರಮಣ್ಯಂ (ಭಾರತ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ) ಅವರು ಎಕನಾಮಿಕ್ ಟೈಮ್ಸ್ (ನವೆಂಬರ್ 9) ಪತ್ರಿಕೆಯಲ್ಲಿ ಬರೆದ ತಮ್ಮ ಲೇಖನದಲ್ಲಿ ಮೋದಿಯವರ ಸಮರ್ಥನೆಗೆ ಧುಮುಕಿದ್ದಾರೆ.

ಈ ಇಬ್ಬರೂ ಬಳಸುವ "ಔಪಚಾರಿಕೀಕರಣ" (formalisation) ಶಬ್ದವು ಏನನ್ನು ಅರ್ಥೈಸುತ್ತದೆ ಎಂದರೆ, ನೋಟು ರದ್ದತಿಯ ಪರಿಣಾಮವಾಗಿ "ಅನೌಪಚಾರಿಕ" (informal) ಚಟುವಟಿಕೆಗಳನ್ನು "ಔಪಚಾರಿಕ" (formal) ಚಟುವಟಿಕೆಗಳು ಪಲ್ಲಟಗೊಳಿಸಿವೆ. ಈ ವಿದ್ಯಮಾನವು ಅವರ ಸಾಧನೆಯಾಗುವುದರ ಬದಲು ಒಂದು ಸಮಸ್ಯೆಯೇ ಆಗಿ ಪರಿಣಮಿಸಿದೆ. ಅವರು ಹೇಳುವಂತೆ ಔಪಚಾರಿಕೀಕರಣವು ಒಂದು ಒಳ್ಳೆಯ ವಿದ್ಯಮಾನ ಎನ್ನುವುದಕ್ಕಿಂತಲೂ ಹೆಚ್ಚಾಗಿ, ಜನರಿಗೆ ಒಂದು ಅನಾಹುತವಾಗಿ ಪರಿಣಮಿಸಿದೆ. ಏಕೆಂದರೆ, ಅದು ನಿರುದ್ಯೋಗವನ್ನು ಸೃಷ್ಟಿಸಿದೆ. ಅನೌಪಚಾರಿಕ ವಲಯದ ಚಟುವಟಿಕೆಗಳ ಔಪಚಾರಿಕೀಕರಣವು, ಒಂದು ಸುಧಾರಣೆ ಎಂದು ಹೇಳಲಡ್ಡಿಯಿಲ್ಲ, ಉದ್ಯೋಗಗಳ ಸಂಖ್ಯೆ ಕಡಿತಗೊಳ್ಳದಿದ್ದರೆ.




ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಆದರೆ, ಇಲ್ಲಿ ಉದ್ಯೋಗಗಳು ಕಡಿತಗೊಂಡಿವೆ. ಈ ಕಾರಣದಿಂದಾಗಿಯೇ ಮೋದಿ ಅವರ ಗುಂಪಿನಿಂದ ಹೊರಗಿರುವ ಪ್ರತಿಯೊಬ್ಬರೂ ಅಷ್ಟೊಂದು ಆತಂಕಗೊಂಡಿರುವುದು.

ಈ ಉದಾಹರಣೆಯನ್ನು ನೋಡಿ. ಅನೌಪಚಾರಿಕ ವಲಯದ ಲಕ್ಷಾಂತರ ಸಣ್ಣ ಸಣ್ಣ ವ್ಯಾಪಾರಿಗಳನ್ನು ವಾಲ್‌ಮಾರ್ಟ್ ಎಂಬ ದೈತ್ಯ ಸಂಸ್ಥೆಯು ನುಂಗಿ ಹಾಕುತ್ತದೆ. ಅಂದರೆ, ಚಿಲ್ಲರೆ ವ್ಯಾಪಾರವು ಬೃಹತ್ ಸಂಸ್ಥೆಗಳಿಗೆ ಪಲ್ಲಟವಾಗುವಂತೆ ನೋಡಿಕೊಂಡಾಗ, ಅನೌಪಚಾರಿಕ ವಲಯದ ಚಟುವಟಿಕೆಗಳನ್ನು ಔಪಚಾರಿಕ ವಲಯಕ್ಕೆ ತಂದಂತಾಗುತ್ತದೆ. ಸಣ್ಣ ವ್ಯಾಪಾರಿಗಳು ಮಾಡುವ ನಗದು ವ್ಯವಹಾರಗಳಿಗೆ ಹೋಲಿಸಿದರೆ ವಾಲ್‌ಮಾರ್ಟ್‌ನ ವಹಿವಾಟಿನಲ್ಲಿ ಹೆಚ್ಚು ಕ್ರೆಡಿಟ್ ಕಾರ್ಡ್ ಪಾವತಿಗಳಿರುತ್ತವೆ. ಲೆಕ್ಕ ಪುಸ್ತಕಗಳನ್ನು ವಾಲ್‌ಮಾರ್ಟ್ ಹೆಚ್ಚು ವ್ಯವಸ್ಥಿತವಾಗಿ ಇಟ್ಟುಕೊಳ್ಳುತ್ತದೆ. ಹಾಗಾಗಿ, ತೆರಿಗೆ ವಂಚನೆಯ ಸಾಧ್ಯತೆ ಕಡಿಮೆ (ಇದು ನಿಜವೆಂದೇ ಭಾವಿಸೋಣ). ಈ ಬದಲಾವಣೆಯನ್ನೇ ಔಪಚಾರಿಕ ವಲಯದ ಒಂದು ಪ್ರಯೋಜನ ಎಂದು ತಿಳಿಯಲಾಗಿದೆ. ಅದೇನೇ ಇರಲಿ, ವಾಲ್‌ಮಾರ್ಟ್ ಸೃಷ್ಟಿಸುವ ಉದ್ಯೋಗಗಳು, ಅದು ನಾಶಪಡಿಸಿದ ಉದ್ಯೋಗಗಳ ಸಂಖ್ಯೆಗೆ ಸಮನಾಗಿದ್ದರೆ ಮಾತ್ರ ಈ ಬದಲಾವಣೆಗೆ ಅರ್ಥವಿರುತ್ತದೆ. ಒಂದು ವೇಳೆ ವಾಲ್‌ಮಾರ್ಟ್ ನಿವ್ವಳ ನಿರುದ್ಯೋಗ ಸೃಷ್ಟಿಗೆ ಕಾರಣವಾದರೆ, ಈ ಔಪಚಾರಿಕೀಕರಣವು ಒಂದು ಅನಾಹುತವೇ ಸರಿ. ಈ ಸರಳ ಸತ್ಯವನ್ನು ಗುರುತಿಸದ ಮೋದಿ ಸರ್ಕಾರವು, ಎಲ್ಲರೂ ಪರಿಗಣಿಸುವ ಈ ದುರಂತವನ್ನು ತನ್ನ ಸಾಧನೆ ಎಂದೇ ಬಗೆಯುತ್ತದೆ. ಅನೌಪಚಾರಿಕ ಉದ್ಯೋಗಗಳನ್ನು ಔಪಚಾರಿಕ ಉದ್ಯೋಗಗಳು ಬದಲಿಸಿವೆ ಎಂಬುದಾಗಿ ಮುಖ್ಯ ಆರ್ಥಿಕ ಸಲಹೆಗಾರರು ಮಾತನಾಡುತ್ತಾರೆ. 100 ಅನೌಪಚಾರಿಕ ಉದ್ಯೋಗಗಳನ್ನು ಕೇವಲ 50 ಔಪಚಾರಿಕ ಉದ್ಯೋಗಗಳು ಬದಲಾಯಿಸಿವೆ ಎಂಬ ಅಂಶದ ಬಗ್ಗೆ ಅವರು ಮೌನವಹಿಸುತ್ತಾರೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ಸಮಯದಿಂದಲೂ, ಅನೌಪಚಾರಿಕ ವಲಯದ ಉದ್ಯೋಗಗಳನ್ನು ರಕ್ಷಿಸುವ ಬಗ್ಗೆ ಒಮ್ಮತವಿತ್ತು, ಉದ್ಯೋಗ ರಕ್ಷಣೆಯ ಉಲ್ಲಂಘನೆಗಳಿದ್ದರೂ ಸಹ. ಉದ್ಯೋಗ ರಕ್ಷಣೆಯ ಸಲುವಾಗಿಯೇ ಕೈ ಮಗ್ಗದ ವಸ್ತ್ರಗಳ ಉತ್ಪಾದನೆಗೆ ಮೀಸಲಾತಿ ಒದಗಿಸಲಾಗಿತ್ತು. ಕರಕುಶಲ ವಸ್ತುಗಳ ಉತ್ಪಾದನೆಯನ್ನು ಮತ್ತು ವಿಕೇಂದ್ರೀಕರಣ ನೀತಿಯನ್ನು ಗಾಂಧೀಜಿ ಪ್ರೋತ್ಸಾಹಿಸಿದ್ದರು. ಬಂಡವಾಳ ಹೂಡಿಕೆಯನ್ನು ಉತ್ಪಾದನಾ ಸಾಮಗ್ರಿಗಳ ತಯಾರಿಕೆಯತ್ತ ತಿರುಗಿಸಿದಾಗ ಅನಿವಾರ್ಯವಾಗಿ ಉದ್ಭವಿಸುವ ಗ್ರಾಹಕ ಸರಕುಗಳ ಕೊರತೆಯನ್ನು ನೀಗುವ ಸಲುವಾಗಿ ವಿಕೇಂದ್ರೀಕೃತ ವಲಯವನ್ನು ಬೆಂಬಲಿಸುವ ನೀತಿಯನ್ನು ಯೋಜನಾ ಆಯೋಗದ ಅಂದಿನ ಸದಸ್ಯರಾಗಿದ್ದ ಪಿ.ಸಿ.ಮಹಾಲನೋಬಿಸ್ ಅವರು ರೂಪಿಸಿದ್ದರು. ಸದಾ ಕಾಲವೂ ವಿಕೇಂದ್ರೀಕೃತ ವಲಯದ ದೃಢ ಸಮರ್ಥಕರಾದ ಎಡ ಪಂಥೀಯರು ವಾಲ್‌ಮಾರ್ಟ್ ಪ್ರವೇಶವನ್ನು ತೀವ್ರವಾಗಿ ವಿರೋಧಿಸಿದ್ದರು, ಉದ್ಯೋಗಗಳು ನಾಶವಾಗುತ್ತವೆ ಎಂಬ ನೆಲೆಯಲ್ಲಿ.


ನಿರುದ್ಯೋಗ ಸೃಷ್ಟಿಸುವ ಔಪಚಾರಿಕತೆಯನ್ನು ಕೊಂಚವೂ ಅಳುಕಿಲ್ಲದೆ ಶ್ಲಾಘಿಸುವ ದೇಶದ ಮೊದಲ ರಾಜಕೀಯ ಪಕ್ಷವೆಂದರೆ, ಬಿಜೆಪಿ. ನೋಟು ರದ್ದತಿ, ಜಿಎಸ್‌ಟಿ, ಅಥವಾ ಇತ್ತೀಚೆಗೆ ಅಂಗೀಕಾರಗೊಂಡ ಕೃಷಿ ಕಾಯ್ದೆಗಳ ಮೂಲಕ ಅನೌಪಚಾರಿಕ ವಲಯದ ಮೇಲೆ ನಿರಂತರ ದಾಳಿ ನಡೆಸುವುದೇ ಬಿಜೆಪಿ ಸರ್ಕಾರದ ಮುಖ್ಯ ಲಕ್ಷಣವಾಗಿ ಕಾಣುತ್ತದೆ. ನಿರುದ್ಯೋಗದ ಬಗ್ಗೆ ಸ್ಪಷ್ಟವಾಗಿ ಕಾಣುವ ಅದರ ಕಾಳಜಿಯ ಕೊರತೆಗೆ ಬಹುಶಃ ಆರ್ಥಿಕ ವಿಷಯಗಳ ಬಗ್ಗೆ ಅಜ್ಞಾನವೇ ಕಾರಣ ಎಂದು ವಿವರಿಸಬಹುದೇನೋ. ಆದರೆ, ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರರ ಕಾಳಜಿ ಎಷ್ಟು ನಿಗೂಢವೋ ಅಷ್ಟೇ ಕಳವಳಕಾರಿ.

ಔಪಚಾರಿಕರಣವು ಕಪ್ಪು ಹಣವನ್ನು ನಿವಾರಿಸುತ್ತದೆ ಎಂಬ ನಿಲುವಿಗೆ ಯಾವುದೇ ಆಧಾರವಿಲ್ಲ. ಈ ಬಗ್ಗೆ ಮಂಡಿಸುವ ವಾದ ಹೀಗಿದೆ: ನಗದು ಹಣದ ಬಳಕೆಯೇ ಕಪ್ಪು ಹಣ ಸೃಷ್ಟಿಯ ಮೂಲ. ನಗದು ಬಳಕೆಯ ಬದಲಾಗಿ ಡಿಜಿಟಲ್ ವರ್ಗಾವಣೆ ಅಥವಾ ಬ್ಯಾಂಕ್ ಮೂಲಕ ವ್ಯವಹಾರ ನಡೆಸಿದರೆ, ತೆರಿಗೆ ಪರಿಶೀಲನೆಯಿಂದ ತಪ್ಪಿಸಿಕೊಳ್ಳುವುದು ಕಷ್ಟವಾಗುತ್ತದೆ. ಹಾಗಾಗಿ, ಕಪ್ಪು ಹಣ ಸೃಷ್ಟಿಯಾಗುವ ಸಾಧ್ಯತೆ ಕಡಿಮೆಯಾಗುತ್ತದೆ. ಔಪಚಾರಿಕೀಕರಣವು, ನಗದು ಬಳಕೆಯಿಂದ ಡಿಜಿಟಲ್ ಅಥವಾ ಬ್ಯಾಂಕ್ ಮೂಲಕದ ವ್ಯವಹಾರಗಳಿಗೆ ಹೊರಳುವುದಕ್ಕೆ ಸಂಬಂಧಿಸುತ್ತದೆ. ಭಾರತವು ನಗದು-ಕಡಿಮೆ ಆಧರಿತವಾಗಿ ಪರಿವರ್ತನೆಯಾಗಿರುವುದೇ ನೋಟು ರದ್ದತಿಯ ಸಾಧನೆ ಎಂದು ಮೋದಿ ಹೊಗಳಿಕೊಳ್ಳುತ್ತಾರೆ.

ಹೆಚ್ಚು ನಗದು ಬಳಕೆಯು ಕಡಿಮೆ ಪಾರದರ್ಶಕವಾಗಿರುವುದರಿಂದ ಕಪ್ಪು ಆರ್ಥಿಕತೆ ಬೆಳೆಯುತ್ತದೆ ಎಂಬ ವಾದಕ್ಕೆ ಯಾವುದೇ ಆಧಾರವಿಲ್ಲ. ಜರ್ಮನಿ ಮತ್ತು ಜಪಾನ್‌ನಂತಹ ಮುಂದುವರಿದ ಬಂಡವಾಳಶಾಹಿ ದೇಶಗಳೂ ಹೆಚ್ಚು ನಗದು ಬಳಕೆ ಮಾಡುತ್ತವೆ. ಆದರೆ, ತುಲನಾತ್ಮಕವಾಗಿ, ಅವುಗಳ ಕಪ್ಪು ಆರ್ಥಿಕತೆಯ ಗಾತ್ರವು ಭಾರತದ ಕಪ್ಪು ಆರ್ಥಿಕತೆಗಿಂತ ದೊಡ್ಡದು ಎಂದು ಹೇಳಲು ಸಾಧ್ಯವಿಲ್ಲ. ಮತ್ತೊಂದೆಡೆ, ನೈಜೀರಿಯಾ ದೇಶದ ನಗದು ಬಳಕೆಯ ಪ್ರಮಾಣವು ಬಹಳ ಕಡಿಮೆ ಇದೆ. ಆದರೂ, ಕಪ್ಪು ಹಣವನ್ನು ನೈಜೀರಿಯಾ ತೊಡೆದು ಹಾಕಿದೆ ಎಂದು ಯಾರೂ ಹೇಳುವಂತಿಲ್ಲ. ಡಿಜಿಟಲ್ ವ್ಯವಹಾರಗಳನ್ನು ಉತ್ತೇಜಿಸುವ ಸಂಸ್ಥೆಗಳಿಗೆ ಮೋದಿ ಸರಕಾರವು ಪಕ್ಷಪಾತಿಯಾಗಿದೆ ಎಂಬುದು ಬಹಳ ಹಿಂದಿನಿಂದಲೂ ಸ್ಪಷ್ಟವೇ. ಈ ಪಕ್ಷಪಾತದ ಧೋರಣೆಗೆ ಕಾರಣ ಏನೇ ಇರಲಿ, ಡಿಜಿಟಲ್ ವ್ಯವಹಾರಗಳು ಕಪ್ಪು ಹಣವನ್ನು ನಿಯಂತ್ರಿಸುವ ಸಾಧನ ಎಂಬುದು ಆಧಾರವಿಲ್ಲದ ಸಮರ್ಥನೆ.

ಮೋದಿ ಮತ್ತು ಅವರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ಈ ಇಬ್ಬರೂ ಔಪಚಾರಿಕೀಕರಣವು ನಗದು ಬಳಕೆಯನ್ನು ಕಡಿಮೆ ಮಾಡಿದೆ **ಪುಟ 14 ನೋಡಿ**

# ನೋಟು ರದ್ದತಿಯೂ ಮತ್ತು .........




ಪುಟ 13 ರಿಂದ

ಎಂದು ಹೇಳುತ್ತಾರಾದರೂ ಸಹ ಅದಕ್ಕೆ ಯಾವುದೇ ಆಧಾರವಿಲ್ಲ. ನೋಟು ರದ್ದತಿಯ ತರುವಾಯ ಭಾರತದಲ್ಲಿ ನಗದು ಬಳಕೆ ಕಡಿಮೆಯಾಗಿದೆ ಎಂಬ ಹೇಳಿಕೆಯು ಶುದ್ಧಾಂಗ ಸುಳ್ಳು. ಪ್ರಧಾನ ಮಂತ್ರಿಯವರ ಇಂತಹ ಆಧಾರರಹಿತ ಹೇಳಿಕೆಯು ಯಾರನ್ನಾದರೂ ನಿಬ್ಬೆರಗಾಗಿಸುತ್ತದೆ. ಅನೌಪಚಾರಿಕ ವಲಯದ ತೂಕ ಕಡಿಮೆ ಎಂಬ ಅರ್ಥದಲ್ಲಿ ಅರ್ಥವ್ಯವಸ್ಥೆಯು ಹೆಚ್ಚು ಔಪಚಾರಿಕವಾದದ್ದು ಎನ್ನಬಹುದು. ಇದು ನೋಟು ರದ್ದತಿಯ ವಿರುದ್ಧದ ನಿಖರ ಟೀಕೆಯೂ ಹೌದು. ಆದರೆ, ನೋಟು ರದ್ದತಿಯ ಕಾರಣದಿಂದಾಗಿ ಭಾರತದಲ್ಲಿ ನಗದು ಬಳಕೆಯು ಎಳ್ಳಷ್ಟೂ ಕಡಿಮೆಯಾಗಿಲ್ಲ ಎಂಬುದಂತೂ ನಿಜ.

ನಗದು ಬಳಕೆಯ ಅಳತೆಗೋಲು ಎನಿಸಿರುವ ಕರೆನ್ಸಿ–ಜಿಡಿಪಿ ಅನುಪಾತವು ನೋಟು ರದ್ದತಿಯ ನಂತರ ತೀವ್ರ ಕುಸಿತ ಕಂಡಿತ್ತು. ನಂತರ ಚೇತರಿಸಿಕೊಂಡ ಈ ಅನುಪಾತವು ಈಗ ನೋಟು ರದ್ದತಿ ಪೂರ್ವ ಸ್ಥಿತಿಗೆ ಮರಳಿದೆ. ರಿಸರ್ವ್ ಬ್ಯಾಂಕಿನ 2019–20ನೇ ಸಾಲಿನ ವರದಿಯು ಕರೆನ್ಸಿ–ಜಿಡಿಪಿ ಅನುಪಾತದ ಬಗ್ಗೆ ಹೀಗೆ ಹೇಳುತ್ತದೆ: “ಚಲಾವಣೆಯಲ್ಲಿರುವ ಒಟ್ಟು ಕರೆನ್ಸಿಯಲ್ಲಿ ಶೇ.14.5ರ ಬೆಳವಣಿಗೆಯಾಗಿದೆ, ಹಿಂದಿನ ವರ್ಷದ ಶೇ.16.8ಕ್ಕೆ ಹೋಲಿಸಿದರೆ ಈ ವರ್ಷ ತುಸು ಇಳಿಕೆಯಾಗಿದೆ. ಆದಾಗ್ಯೂ, ಕರೆನ್ಸಿ–ಜಿಡಿಪಿ ಅನುಪಾತವು, ಹಿಂದಿನ ವರ್ಷದ ಶೇ. 11.3ರ ಏರಿಕೆಗೆ ಹೋಲಿಸಿದರೆ, 2019–20ರಲ್ಲಿ ಶೇ. 12ಕ್ಕೆ ಏರಿದೆ.” ಹಾಗಾಗಿ, ನೋಟು ರದ್ದತಿಯಿಂದಾಗಿ ಭಾರತವು ನಗದು–ಕಡಿಮೆ ಆಧಾರಿತ ಆರ್ಥಿಕತೆಯಾಗಿ ಮಾರ್ಪಟ್ಟಿದೆ ಎಂಬ ಮೋದಿಯವರ ಹೇಳಿಕೆಯೂ ತಪ್ಪಾಗಿದೆ.

ನಗದು ಬಳಕೆಯ ಹೆಚ್ಚಳದಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ, ನಗದು ವ್ಯವಹಾರದಂತಲ್ಲದೆ, ಡಿಜಿಟಲ್ ವ್ಯವಹಾರಗಳಿಗೆ ಒಂದು ವೆಚ್ಚ ತೆರಬೇಕಾಗುತ್ತದೆ. ಆದ್ದರಿಂದ, ಅಲ್ಪ ಲಾಭದ ಮೇಲೆ ನಿಂತಿರುವ ಅನೌಪಚಾರಿಕ ವಲಯದಲ್ಲಿ ಡಿಜಿಟಲ್ ವ್ಯವಹಾರಗಳು ಹೆಚ್ಚು ಪ್ರಚಲಿತವಾಗಿಲ್ಲ. ಔಪಚಾರಿಕ ವಲಯವೂ ಸಹ, ದುಬಾರಿ ಡಿಜಿಟಲ್ ವ್ಯವಹಾರಗಳ ಬದಲು, ನಗದು ವ್ಯವಹಾರಗಳನ್ನೇ ಬಯಸುತ್ತದೆ.

ಇತ್ತೀಚಿನ ತಿಂಗಳುಗಳಲ್ಲಿ ಹಲವಾರು ‘ಚಿಪ್ಪು’ ಕಂಪನಿ(ಶೆಲ್ ಕಂಪನಿ)ಗಳ ಬಾಗಿಲು ಮುಚ್ಚಿರುವುದರಿಂದಾಗಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತಷ್ಟು ಹೆಚ್ಚಿದೆ ಎಂದು ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರರು ಹೇಳುತ್ತಾರೆ. ಅವರು ಉಲ್ಲೇಖಿಸುವ ಅಂಕಿ ಅಂಶಗಳು ಸರಿಯಾಗಿವೆ ಎಂದೇ ಭಾವಿಸೋಣ ಮತ್ತು ನೋಟು ರದ್ದತಿಯಿಂದ ಆರಂಭವಾದ ಸರ್ಕಾರದ ಕ್ರಮಗಳಿಂದಾಗಿಯೇ ಈ ಶೆಲ್ ಕಂಪನಿಗಳ ಬಾಗಿಲು ಮುಚ್ಚಿವೆ ಎಂದೇ ಭಾವಿಸೋಣ. ಈ ಕ್ರಮಗಳ ಪರಿಣಾಮವಾಗಿ ಉಂಟಾದ ಕೆಲವು ಪ್ರಯೋಜನಗಳು ಸ್ಥೂಲ ಅರ್ಥವ್ಯವಸ್ಥೆಯು ಚರಾಂಶಗಳ ಏರು ಪೇರುಗಳ ಮೂಲಕ ವ್ಯಕ್ತಗೊಳ್ಳುತ್ತವೆ. ಶೆಲ್ ಕಂಪನಿಗಳ ಮುಚ್ಚುವಿಕೆಯಿಂದಲೇ ಉದ್ಯೋಗ ಸೃಷ್ಟಿಯಾಗುವುದಿಲ್ಲ ಅಥವಾ ಹಸಿವು ನೀಗುವುದಿಲ್ಲ ಅಥವಾ ಜನರ ಜೀವನ ಸುಧಾರಿಸುವುದಿಲ್ಲ; ಸ್ಥೂಲ ಅರ್ಥವ್ಯವಸ್ಥೆಯು ಕೆಲವು ಚರಾಂಶಗಳ ಮೇಲೆ ಪರಿಣಾಮ ಬೀರುವ ಮೂಲಕ ಹಾಗೆ ಮಾಡಬಹುದು. ನೋಟು ರದ್ದತಿಯಿಂದಾಗಿ ಸ್ಥೂಲ ಅರ್ಥವ್ಯವಸ್ಥೆಯ ಒಂದೇ ಒಂದು ಚರಾಂಶವೂ ಉತ್ತೇಜಿತಗೊಂಡದ್ದನ್ನು ಮುಖ್ಯ ಆರ್ಥಿಕ ಸಲಹೆಗಾರರು ಉಲ್ಲೇಖಿಸುವುದಿಲ್ಲ. ಹಾಗೆ ಮಾಡುವುದು ಅವರಿಗೆ ನಿಜಕ್ಕೂ ಸಾಧ್ಯವಿಲ್ಲ. ಆದರೆ ಅನೌಪಚಾರಿಕ ವಲಯದ ಸಂಕಟಗಳು, ನೋಟು ರದ್ದತಿಯಿಂದಾಗಿ ಈ ವಲಯದಲ್ಲಿ ಉಂಟಾದ ನಿರುದ್ಯೋಗ, ಇವುಗಳು ಕೆಲವು ವಿದ್ವಾಂಸರು ನಡೆಸಿದ ಅಧ್ಯಯನಗಳ ಮೂಲಕ ಬೆಳಕಿಗೆ ಬಂದಿವೆ. ಮೋದಿ ಮತ್ತು ಅವರ ಮುಖ್ಯ ಆರ್ಥಿಕ ಸಲಹೆಗಾರರು ಈ ಅಧ್ಯಯನಗಳನ್ನು ಅವಲೋಕಿಸುವುದು ಒಳಿತು.

# ಭಾರತದ ಕಾರ್ಮಿಕ ವರ್ಗದ ಉದಯದ ಹಿನ್ನೆಲೆ



ಪುಟ 11 ರಿಂದ

**ದೇಶೀಯ ಉದ್ಯಮದ ನಾಶ ಮತ್ತು ಗ್ರಾಮ ಆರ್ಥಿಕತೆಯ ಮೇಲೆ ಅತಿಯಾದ ಒತ್ತಡ**

ತನ್ನ ಕೈಗಾರಿಕಾ ಕ್ರಾಂತಿಯ ಮುಂದುವರಿಕೆಗಾಗಿ ಭಾರತದ ಲೂಟಿ ಮಾಡಿದ ಸಂಪತ್ತನ್ನು ಇಂಗ್ಲೆಂಡ್‌ಗೆ ರಫ್ತು ಮಾಡುವುದರ ಜೊತೆಗೆ, ಇಂಗ್ಲಿಷ್ ಬಂಡವಾಳಶಾಹಿಗಳು ಇಂಗ್ಲೆಂಡ್‌ನ ಕೈಗಾರಿಕಾ ಉತ್ಪನ್ನಗಳನ್ನು ಭಾರತದಲ್ಲಿ ಮಾರಾಟ ಮಾಡುವ ಅಗತ್ಯವನ್ನು ಕಂಡರು. 1757 ರಲ್ಲಿ ಪ್ಲಾಸ್ಸಿ ಯುದ್ಧದ ನಂತರ ಈಸ್ಟ್ ಇಂಡಿಯಾ ಕಂಪೆನಿಯು ಇಷ್ಟು ದಿನ ಅನುಭವಿಸುತ್ತಿದ್ದ ಭಾರತದೊಂದಿಗಿನ ವ್ಯಾಪಾರದ ಏಕಸ್ವಾಮ್ಯವು ಒಟ್ಟಾರೆಯಾಗಿ ಬ್ರಿಟಿಷ್ ಬಂಡವಾಳಶಾಹಿ ವರ್ಗದ ಮುಕ್ತ ವ್ಯಾಪಾರದ ಆಸಕ್ತಿಯನ್ನು ರಕ್ಷಿಸಲಿಲ್ಲ. ಹೊಸ ಮಾರುಕಟ್ಟೆಗಳ ಶಕ್ತಿಯುತ ಹುಡುಕಾಟದಿಂದ ಪ್ರೇರೇಪಿಸಲ್ಪಟ್ಟ ಇಂಗ್ಲಿಷ್ ಬೂರ್ಜ್ವಾಸಿ ಈಸ್ಟ್ ಇಂಡಿಯಾ ಕಂಪನಿಯ ಸವಲತ್ತುಗಳನ್ನು ರದ್ದುಗೊಳಿಸುವ ದೊಡ್ಡ ಪ್ರಮಾಣದ ಅಭಿಯಾನವನ್ನು ಪ್ರಾರಂಭಿಸಿತು. 1813 ರಲ್ಲಿ ಭಾರತದೊಂದಿಗಿನ ವ್ಯಾಪಾರದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಏಕಸ್ವಾಮ್ಯವನ್ನು ರದ್ದುಪಡಿಸಲಾಯಿತು.

ಇದು ವಾಸ್ತವವಾಗಿ ಭಾರತದ ಆರ್ಥಿಕ ಶೋಷಣೆಯಲ್ಲಿ ಹೊಸ ಹಂತವನ್ನು ಸೂಚಿಸುತ್ತದೆ. ಈಸ್ಟ್ ಇಂಡಿಯಾ ಕಂಪನಿ ಬಹಳ ಹಿಂದೆಯೇ ಮುಖ್ಯವಾಗಿ ಇಂಗ್ಲೆಂಡ್‌ಗೆ ಭಾರತದ ರೇಷ್ಮೆ, ಮಸ್ಲಿನ್ ಮತ್ತು ಇತರ ಐಷಾರಾಮಿ ವಸ್ತುಗಳನ್ನು ರಫ್ತು ಮಾಡಿ ಮಾರಾಟ ಮಾಡುವ ಮೂಲಕ ಲಾಭ ಗಳಿಸುತ್ತಿತ್ತು. ಆದರೆ 1813 ರ ನಂತರ ಭಾರತದ ಮಾರುಕಟ್ಟೆಯನ್ನು ಬ್ರಿಟಿಷ್ ಕೈಗಾರಿಕಾ ಸರಕುಗಳಿಗೆ ಮುಕ್ತಗೊಳಿಸಲಾಯಿತು, ಇದರ ಪರಿಣಾಮವಾಗಿ ಭಾರತಕ್ಕೆ ಬ್ರಿಟಿಷ್ ರಫ್ತು ಶೀಘ್ರವಾಗಿ ಹೆಚ್ಚಾಯಿತು.

ವಾಣಿಜ್ಯ ಕೇಂದ್ರಗಳನ್ನು ಬಂದರುಗಳೊಂದಿಗೆ ಸಂಪರ್ಕಿಸುವ ರೈಲ್ವೆಯನ್ನು ಭಾರತದಲ್ಲಿ ತ್ವರಿತವಾಗಿ ಪರಿಚಯಿಸುವ ಮೂಲಕ, ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ರಫ್ತು ಕಾರ್ಯಾಚರಣೆಯನ್ನು ಉತ್ತೇಜಿಸಲು ಪ್ರಯತ್ನಿಸಿದರು.

ಭಾರತಕ್ಕೆ ಬ್ರಿಟಿಷ್ ಸರಕುಗಳನ್ನು ಅನಿಯಂತ್ರಿತವಾಗಿ ರಫ್ತು ಮಾಡುವುದರೊಂದಿಗೆ ಇಂಗ್ಲೆಂಡ್‌ನಲ್ಲಿ ಆಮದು ಮಾಡಿಕೊಳ್ಳುವ ಭಾರತದ ಜವಳಿ ಮತ್ತು ರೇಷ್ಮೆ ಉತ್ಪನ್ನಗಳ ಬೆಲೆಯ ಮೇಲೆ ಶೇಕಡಾ 70 ರಿಂದ 80 ರವರೆಗೆ ಭಾರೀ ಆಮದು ಸುಂಕವನ್ನು ವಿಧಿಸಲಾಯಿತು. ವಸಾಹತುಶಾಹಿಗಳ ವ್ಯಾಪಾರ ನೀತಿಯಲ್ಲಿನ ಈ ವಿನಾಶಕಾರಿ ತಾರತಮ್ಯದ ಮೂಲಕ ಭಾರತದ ಆರ್ಥಿಕತೆಯು ದುಪ್ಪಟ್ಟು ನಷ್ಟ ಅನುಭವಿಸಿತು ಮತ್ತು ನಿರ್ದಿಷ್ಟವಾಗಿ ಭಾರತದ ಜವಳಿ ಉದ್ಯಮವು ಹಾಳಾಯಿತು, ಬ್ರಿಟಿಷ್ ತಯಾರಿಕೆ ಕೈಗಾರಿಕೆಗಳ ಮತ್ತು ಅದರ ಜವಳಿ ವಿಭಾಗವು ತ್ವರಿತಗತಿಯಲ್ಲಿ ಅಭಿವೃದ್ಧಿ ಹೊಂದಿತು. ಆದ್ದರಿಂದ ಇದು ತಾಂತ್ರಿಕ ಶ್ರೇಷ್ಠತೆಯಿಂದ ಮಾತ್ರವಲ್ಲ, ಒಂದೆಡೆ ಮುಕ್ತ ವ್ಯಾಪಾರದ ನೀತಿ ಮತ್ತು ಇನ್ನೊಂದೆಡೆ ಭಾರತದ ಆಮದು ನಿಷೇಧದಿಂದಲೂ ಸಾಮ್ರಾಜ್ಯಶಾಹಿಗಳು ಸ್ಥಳೀಯ ಭಾರತದ ಕೈಗಾರಿಕೆಗಳನ್ನು ಹಾಳುಗೆಡವಿದರು ಮತ್ತು ತಮ್ಮ ದೇಶದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಮುಂದಾದರು. ಜವಳಿ ಕೈಗಾರಿಕೆಗಳ ವಿಷಯದಲ್ಲಿ ಮಾತ್ರವಲ್ಲ, ಭಾರತದ ಲೋಹ ಮತ್ತು ಇತರ ಕೈಗಾರಿಕೆಗಳೂ ಅದೇ ರೀತಿಯಲ್ಲಿ ಹಾಳಾದವು.

ಭಾರತದ ಕಚ್ಚಾ ವಸ್ತುಗಳು ಬ್ರಿಟಿಷ್ ಉತ್ಪಾದನಾ ಉದ್ಯಮದ ಅಭಿವೃದ್ಧಿಗೆ ಅನಿವಾರ್ಯ ಸರಕಾಗಿದ್ದವು ಬ್ರಿಟಿಷ್ ಕೈಗಾರಿಕಾ ಉತ್ಪನ್ನಗಳೊಂದಿಗೆ ಭಾರತದ ಮಾರುಕಟ್ಟೆಯನ್ನು ಪ್ರವೇಶ ಮಾಡುವುದು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಆಸಕ್ತಿಯಾಗಿದ್ದರಿಂದ, ಭಾರತದ ಕಚ್ಚಾ ವಸ್ತುಗಳು ಮತ್ತು ಕೃಷಿ ಉತ್ಪನ್ನಗಳನ್ನು ಇಂಗ್ಲೆಂಡ್‌ಗೆ ಆಮದು ಮಾಡಿಕೊಳ್ಳುವ ತುರ್ತು ಅವಶ್ಯಕತೆಯೂ ಇತ್ತು. ಸಾಮ್ರಾಜ್ಯಶಾಹಿಗಳು ವಿನ್ಯಾಸಗೊಳಿಸಿದ ಈ ದೈತ್ಯಾಕಾರದ ವ್ಯಾಪಾರ ನೀತಿಯು ಭಾರತವನ್ನು ಬಂಡವಾಳಶಾಹಿ ಬ್ರಿಟನ್‌ಗೆ ಬೇಕಾದ ಕಾರ್ಷಿಕ ಮತ್ತು ಕಚ್ಚಾ ವಸ್ತುಗಳ ಉತ್ಪಾದಕ ಬಾಲಂಗೋಚಿಯಾಗಿ ಪರಿವರ್ತಿಸಿತು, ಅದೇ ಕಾಲದಲ್ಲಿ ಊಳಿಗಮಾನ್ಯ ಶೋಷಣೆಯ ವಿಧಾನಗಳನ್ನು ಕಾಪಾಡಿಕೊಂಡಿತು.

ಇದು ದೇಶೀಯ ಕಾರ್ಮಿಕರ ಆಂತರಿಕ ಶ್ರಮ–ವಿಭಜನೆಯ, ಮುಖ್ಯವಾಗಿ ದೇಶೀಯ ಕೈಗಾರಿಕೆ ಮತ್ತು ಕೃಷಿಯ ನಡುವಿನ ವಿಭಜನೆ ಮೇಲೆ ಹಾನಿಕಾರಕ ಪರಿಣಾಮವನ್ನು ಉಂಟುಮಾಡಿತು. ಈ ಪ್ರಕ್ರಿಯೆಯು ಭಾರತದ ಕುಶಲಕರ್ಮಿಗಳನ್ನು ತಮ್ಮ ಪರಂಪರಾಗತ ವೃತ್ತಿಯಿಂದ ಕ್ರೂರವಾಗಿ ಹೊರಹಾಕಿತು ಮತ್ತು ಈ ಬೇರುಸಹಿತ ಕಿತ್ತುಹಾಕಲ್ಪಟ್ಟ ಜನರಿಗೆ ಈಗಾಗಲೇ ಭಾರೀ ಹೊರೆಏರಲ್ಪಟ್ಟ ಹಳ್ಳಿಗಳಿಗೆ ಮರಳುವುದನ್ನು ಬಿಟ್ಟು ಬೇರೆ ಪರ್ಯಾಯವಿಲ್ಲವಾಯಿತು. ಭಾರತದ ಸಾಂಪ್ರದಾಯಿಕ ಆರ್ಥಿಕತೆಯಲ್ಲಿ ವಿಶಿಷ್ಟವಾದ ಕೈಗಾರಿಕಾ ಮತ್ತು ಕೃಷಿ ಉತ್ಪಾದನೆಯ ಏಕತೆಯ ಪ್ರಾಚೀನ ಸಂಯೋಜನೆಯ ಅಂಶವನ್ನು ಕೆಡವಲಾಯಿತು, ಸಾವಿರ ವರ್ಷಗಳ ಅವಧಿಯ ನಾಗರಿಕತೆಯನ್ನು ದುರ್ಬಲ ಗೊಳಿಸಲಾಯಿತು ಮತ್ತು ಭಾರತದ ಸಮಾಜದ ಸಂರಚನೆಯು ವಿಘಟನೆಯಾಯಿತು. ಈ ವಿದ್ಯಮಾನವು ಭಾರತದ ದುಡಿಯುವ ಜನಸಮುದಾಯದ ದುಃಖವನ್ನು ತೀವ್ರಗೊಳಿಸಿತು. ಬ್ರಿಟನ್‌ಗೆ ಬೇಕಾದ ಕಾರ್ಷಿಕ ಮತ್ತು ಕಚ್ಚಾ ವಸ್ತುಗಳ ಉತ್ಪಾದಕ ಬಾಲಂಗೋಚಿಯಾಗಿ ಪರಿವರ್ತಿಸಿದ ಭಾರತದ ರೂಪಾಂತರದ ಈ ಪ್ರಕ್ರಿಯೆ ತೀರಾ ವೇದನಾಮಯವಾಗಿತ್ತು

ಭಾರತದ ಆಧುನಿಕ ಕೈಗಾರಿಕೆಗಳ ಬೆಳವಣಿಗೆ, ಭಾರತದ ಕಾರ್ಮಿಕ ವರ್ಗದ ಉದಯ, ಅದರ ನಂತರದ ಅಭಿವೃದ್ಧಿ ಮತ್ತು ಅದರೊಂದಿಗೆ ಸಂಪರ್ಕ ಹೊಂದಿದ ಸಂಕೀರ್ಣ ಸಮಸ್ಯೆಗಳನ್ನು ಭಾರತದ ಕೃಷಿ ಆರ್ಥಿಕತೆಯ ಮೇಲಿನ ಈ ಅಸಾಧಾರಣ ಅತಿಶಯ ಒತ್ತಡದ ಐತಿಹಾಸಿಕ ದೃಷ್ಟಿಕೋನದಲ್ಲಿ ಪರಿಗಣಿಸಬೇಕಾಗಿದೆ.



# ಸೌಮಿತ್ರ ಚಟ್ಟೋಪಾಧ್ಯಾಯ

ಬಂಗಾಳಿ ಮತ್ತು ಭಾರತದ ಚಿತ್ರರಂಗದ ಒಬ್ಬ ಮೇರು ನಟ ಮತ್ತು ಹಿರಿಯ ವ್ಯಕ್ತಿತ್ವ ಸೌಮಿತ್ರ ಚಟ್ಟೋಪಾಧ್ಯಾಯ ನವಂಬರ್ 15 ರಂದು ತಮ್ಮ 85 ನೇ ವಯಸ್ಸಿನಲ್ಲಿ ನಿಧನರಾದರು. ಬಂಗಾಳಿ ಚಿತ್ರರಂಗಕ್ಕೆ ಅವರ ಕೊಡುಗೆ ಬಹುಮುಖಿ ಎನ್ನಲಾಗಿದೆ. ವರು ಜಗದ್ವಿಖ್ಯಾತ ಭಾರತೀಯ ಸಿನೆಮಾ ನಿರ್ದೇಶಕ ಸತ್ಯಜಿತ್ ರಾಯ್ ರವರ ಪ್ರೀತಿಯ ನಟರಾಗಿದ್ದರು, ಅವರ ಚಿತ್ರಗಳ ಕ್ಲಿಷ್ಟ ಪಾತ್ರಗಳಿಗೆ ಜೀವ ತುಂಬಿದವರು ಎನ್ನಲಾಗಿದೆ.

ಅವರು ಉನ್ನತ ಕಲಾವಿದ ಮಾತ್ರವಲ್ಲ, ದೇಶದ ಸಾಮಾಜಿಕ ಮತ್ತು ರಾಜಕೀಯ ಪ್ರಶ್ನೆಗಳ ಬಗ್ಗೆ ಅವರದ್ದು ನೇರ ನುಡು. ಕೊನೆಯ ದಿನದ ವರೆಗೂ ಅವರು ಎಡಪಂಥದ ಕಟ್ಟಾ ಬೆಂಬಲಿಗರಾಗಿದ್ದರು. ‘ಗಣಶಕ್ತಿ’ ಪತ್ರಿಕೆಯ ಈ ವರ್ಷದ ಪೂಜಾ ವಿಶೇಷಾಂಕದಲ್ಲಿ ಅವರು “ಈಗಲೂ ನನ್ನ ನಂಬಿಕೆ–ಎಡಪಂಥ ಮಾತ್ರವೇ ಪರ್ಯಾಯ’ ಎಂಬ ಸುಂದರ ಲೇಖನವನ್ನು ಬರೆದಿದ್ದರು.

ಪಶ್ಚಿಮ ಬಂಗಾಳದ ಸಿಪಿಐ(ಎಂ) ಮುಖಂಡರಾದ ಸೂರ್ಯಕಾಂತ ಮಿಶ್ರ, ಬಿಮನ್ ಬಸು, ಸುಜನ್ ಚಕ್ರವರ್ತಿ ಮತ್ತು ಇತರ ಪ್ರತಿಷ್ಠಿತಿಮುಖಂಡರು ರವೀಂದ್ರ ಸದನದಲ್ಲಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

# ಸ್ಟಾನ್ ಸ್ವಾಮಿಯವರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಮಧ್ಯಪ್ರವೇಶಿಸಬೇಕು – ಮಾನವ ಹಕ್ಕಗಳ ಆಯೋಗದ ಅಧ್ಯಕ್ಷರಿಗೆ ಎನ್.ಪಿ.ಆರ್.ಡಿ. ಪತ್ರ

ರಾಷ್ಟ್ರೀಯ ಅಂಗವಿಕಲರ ಹಕ್ಕುಗಳ ವೇದಿಕೆ(ಎನ್.ಪಿ.ಆರ್.ಡಿ.) ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಹೆಚ್.ಎಲ್.ದತ್ತು ಅವರಿಗೆ ಈಗ ಮಹಾರಾಷ್ಟ್ರದ ತಲೋಜ ಜೈಲಿನಲ್ಲಿ ಇಟ್ಟಿರುವ ಮಾನವ ಹಕ್ಕುಗಳ ಹೋರಾಟಗಾರ ಫಾದರ್ ಸ್ಟಾನ್ ಸ್ವಾಮಿ ಅವರಿಗೆ ಅಂಗವಿಕಲ ಬಂಧಿಗಳಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಲು ಮಧ್ಯಪ್ರವೇಶಿಸಬೇಕು ಎಂದು ವಿನಂತಿಸಿ ಅರ್ಜಿ ಸಲ್ಲಿಸಿದೆ.

ಭೀಮ–ಕೊರೆಗಾಂವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಬಂಧಿಸಲಾದ ಸ್ಟಾನ್ ಸ್ವಾಮಿಯವರಿಗೆ 83 ವರ್ಷ, ಅವರು ಪಾರ್ಕಿನ್ಸನ್ ಕಾಯಿಲೆಯಿಂದ ನರಳುತ್ತಿದ್ದಾರೆ. ಇದು ಒಂದು ಅಂಗವಿಕಲತೆ ಎಂದು ಗುರುತಿಸಲಾಗಿದೆ. ಆದ್ದರಿಂದ ಅವರಿಗೆ ಈ ಕಾಯಿಲೆ ಉಂಟು ಮಾಡಿರುವ ತೊಂದರೆಗಳನ್ನು ನಿವಾರಿಸುವ ಸೌಲಭ್ಯಗಳನ್ನು ಒದಗಿಸಲು ಸರಕಾರ ಬಾಧ್ಯವಾಗಿದೆ ಎಂದು ಎನ್‌ಪಿಆರ್‌ಡಿ ತನ್ನ ಪತ್ರದಲ್ಲಿ ನೆನಪಿಸಿದೆ.

ಅವರು ನೀರು ಮತ್ತು ಇತರ ದ್ರವಪದಾರ್ಥಗಳನ್ನು ಸೇವಿಸಲು ಸ್ಟ್ರಾ ಮತ್ತು ಸಿಪ್ಪರ್‌ಗಳನ್ನು ತಮ್ಮ ಜತೆಗಿಟ್ಟುಕೊಳ್ಳುತ್ತಿದ್ದರು. ಎನ್‌ಐಎ ಅವರನ್ನು ಬಂಧಿಸಿದಾಗ ಅವನ್ನು ವಶಪಡಿಸಿಕೊಂಡು, ಅವನ್ನು ಹಿಮದಿರುಗಿಸಲಿಲ್ಲ, ತಲೋಜ ಜೈಲಿನ ಅಧಿಕಾರಿಗಳು ಈ ಅಗ್ಗದ ಸವಲತ್ತುಗಳನ್ನು ಒದಗಿಸಲು ನಿರಾಕರಿಸಿದರು.. ಸ್ಟಾನ್ ಸ್ವಾಮಿಯವರು ನವಂಬರ್ 6ರಂದು ಇವನ್ನು ಒದಗಿಸುವಂತೆ ಮುಂಬೈಯಲ್ಲಿ ವಿಶೇಷ ನ್ಯಾಯಾಲಯವನ್ನು ಕೇಳಬೇಕಾಗಿ ಬಂತು. ಅದು ಈ ವಿನಂತಿಯ ತುರ್ತನ್ನು ಅರಿಯದೆ ಎನ್‌ಐಎ ಗೆ ಈ ವಿಷಯದಲ್ಲಿ ಉತ್ತರ ಕೊಡಲು ನವಂಬರ್ 26ರ ವರೆಗೆ ಅವಕಾಶ ಕೊಟ್ಟಿದೆ!

ಇವು ಸ್ಟಾನ್ ಸ್ವಾಮಿಯವರಿಗೆ ಆಹಾರ ಸೇವನೆಗೆ ಅಗತ್ಯವಾದ್ದರಿಂದ, ಇವನ್ನು ಒದಗಿಸದಿರುವುದು ಆಹಾರವನ್ನೆ ನಿರಾಕರಿಸಿದಂತಾಗುತ್ತದೆ, ಅಲ್ಲದೆ ಒಬ್ಬ ಪಾರ್ಕಿನ್ಸನ್ ರೋಗ ಪಿಡಿತ 83 ವರ್ಷದ ವ್ಯಕ್ತಿಗೆ ಈ ಅಗತ್ಯ ಸಹಾಯಕಗಳನ್ನು ಒದಗಿಸದಿರುವುದು ದೇಶದ ಮತ್ತು ಅಂತರ್‍ರಾಷ್ಟ್ರೀಯವಾಗಿ ಅಂಗೀಕರಿಸಿದ ನಿಯಮಗಳ/ಕಾಯ್ದೆಗಳ ಪ್ರಕಾರವೂ “ಕ್ರೌರ್ಯ ಮತ್ತು ಅಮಾನವೀಯ ವರ್ತನೆಯಾಗುತ್ತದೆ”, ಅವರ ಘನತೆಯೆ ಉಲ್ಲಂಘನೆಯಾಗುತ್ತದೆ ಎಂದು ಎನ್‌ಪಿಆರ್‌ಡಿ ತನ್ನ ಪತ್ರದಲ್ಲಿ ಹೇಳಿದೆ.

ಆಯೋಗ ಒಂದು ತಂಡವನ್ನು ತಲೋಜ ಜೈಲಿಗೆ ಕಳಿಸಿ ಫಾದರ್ ಸ್ಟಾನ್ ಸ್ವಾಮಿಯವರ ವಯಸ್ಸು ಮತ್ತು ವಿಕಲತೆಗೆ ತಕ್ಕಂತಹ ವ್ಯವಸ್ಥೆ ಅಲ್ಲಿ ಇದೆಯೇ ಎಂದು ಪರಿಶೀಲಿಸಬೇಕು ಎಂದೂ ಎನ್‌ಪಿಆರ್‌ಡಿ ವಿನಂತಿಸಿದೆ.

# ಮಿಲಿಟರಿ ಮತ್ತು ರಾಜಪ್ರಭುತ್ವದ ವಿರುದ್ಧ ಥಾಯ್ಲೆಂಡಿನಲ್ಲಿ ಚಳುವಳಿ

ನಾಗರಾಜ ನಂಜುಂಡಯ್ಯ

**ಥಾಯ್ಲೆಂಡಿನಲ್ಲಿ 1973ರಲ್ಲಿ ರಚಿಸಲಾದ ಮತ್ತು ಹತ್ತಾರು ಬಾರಿ ಬದಲಾಯಿಸಲಾದ ಸಂವಿಧಾನ ರಾಜಕೀಯ ಮತ್ತು ಆಡಳಿತದಲ್ಲಿ ಮಿಲಿಟರಿ ಮತ್ತು ಪೋಲಿಸ್ ಗೆ ಯಾವುದೇ ಪ್ರಜಾಪ್ರಭುತ್ವದಲ್ಲಿ ಕಾಣಸಿಗದ ಪಾತ್ರವನ್ನು ಕೊಡುತ್ತದೆ. ಇದರ ವಿರುದ್ಧ ಚಳುವಳಿಗಳು ಏಳುತ್ತಲೇ ಇದ್ದವು. ಈಗಿನ ಚಳುವಳಿಗೆ 2019ರ ಚುನಾವಣೆಯಲ್ಲಿ ಫ್ಯೂಚರ್ ಫಾರ್ವರ್ಡ್ ಪಕ್ಷವನ್ನು ಭಾರೀ ಪ್ರಮಾಣದಲ್ಲಿ ಬೆಂಬಲಿಸಿದ ವಿದ್ಯಾರ್ಥಿ–ಯುವಜನರು ನಾಯಕತ್ವ ಕೊಡುತ್ತಿದ್ದಾರೆ. ಈಗ ಮಿಲಿಟರಿ ಮತ್ತು ರಾಜಪ್ರಭುತ್ವ ಗಳ ನಡುವಿನ ಹೊಂದಾಣಿಕೆ ಈ ಚಳುವಳಿಯ ಕೆಂಗಣ್ಣಿಗೆ ಗುರಿಯಾಗಿದ್ದು ಇಡೀ ರಾಜಕೀಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಯತ್ತ ಮುಖ ಮಾಡಿದೆ.**




ಥಾಯ್ಲೆಂಡಿನ ವಿದ್ಯಾರ್ಥಿಗಳು ಸಮಗ್ರ ರಾಜಕೀಯ ಬದಲಾವಣೆಗಳಿಗಾಗಿ ಸರಕಾರದ ವಿರುದ್ಧ ಬೀದಿಗಿಳಿದಿದ್ದಾರೆ. ಸರಕಾರ ಮತ್ತು ಚಳುವಳಿಗಾರರ ನಡುವೆ ನಡೆಯುತ್ತಿರುವ ಸಂಘರ್ಷ ತಾರಕಕ್ಕೇರಿದೆ. ಈ ವಾರ ರಾಜಧಾನಿಯಲ್ಲಿ ಪಾರ್ಲಿಮೆಂಟನ್ನು ಸುತ್ತುವರೆದಿದ್ದ ಸಾವಿರಾರು ಚಳುವಳಿಕಾರರನ್ನು ಚದುರಿಸಲು ಪೋಲಿಸರು ಜಲಫಿರಂಗಿ ಮತ್ತು ಅಶ್ರುವಾಯು ಬಳಸಬೇಕಾಯಿತು. ಪಾರ್ಲಿಮೆಂಟಿನ ಸುತ್ತ ಬ್ಯಾರಿಕೇಡುಗಳು ಮತ್ತು ಮುಳ್ಳು ಬೇಲಿಯನ್ನು ಹಾಕಿದ್ದರೂ, ಚಳುವಳಿಕಾರರರು ಪುನಃ ಒಂದುಗೂಡಿ ಅವುಗಳನ್ನು ಮುರಿದು ಪಾರ್ಲಿಮೆಂಟಿಗೆ ನುಗ್ಗಲು ಪ್ರಯತ್ನಿಸುತ್ತಲೇ ಇದ್ದರು. ಜಲಫಿರಂಗಿ ಮತ್ತು ಅಶ್ರುವಾಯುಗಳಿಂದ ಗಾಯಗೊಂಡ ಹಲವು ಚಳುವಳಿಕಾರರನ್ನು ಆಸ್ಪತ್ರೆಗೆ ಸಾಗಿಸಲಾಯಿತು.

2014ರಲ್ಲಿ ಮಿಲಿಟರಿ ಕ್ಷಿಪ್ರದಂಗೆಯ ಮೂಲಕ ಅಧಿಕಾರಕ್ಕೆ ಬಂದ ಮತ್ತು 2019ರಲ್ಲಿ ನಡೆದ ಚುನಾವಣೆಯ ಫಲಿತಾಂಶಕ್ಕೆ ಮಾನ್ಯತೆ ಕೊಡದೆ, ಮಿಲಿಟರಿ ನೇಮಿಸಿ ರಚಿತವಾದ ಪ್ರಧಾನಿ ಪ್ರಯುತ್ ಚಾನ್–ಒ–ಚಾನ್ ಸರಕಾರ ತೊಲಗಬೇಕು. ಪಾರ್ಲಿಮೆಂಟನ್ನು ವಿಸರ್ಜಿಸಬೇಕು. ಸಂವಿಧಾನವನ್ನು ಹೆಚ್ಚು ಪ್ರಜಾಸತ್ತಾತ್ಮಕವಾಗುವಂತೆ ಬದಲಾಯಿಸಬೇಕು. ಮಿಲಿಟರಿ ಮತ್ತು ರಾಜಪ್ರಭುತ್ವಕ್ಕೆ ಕೊಟ್ಟ ವಿಪರೀತ ಅಧಿಕಾರಗಳನ್ನು ಮೊಟಕುಗೊಳಿಸಬೇಕು. ರಾಜಕೀಯ ಭಿನ್ನಮತೀಯರ ಮೇಲೆ ದಾಳಿ, ಬಂಧನ ಮತ್ತಿತರ ನಿರ್ಬಂಧಗಳನ್ನು ತೆರವುಗೊಳಿಸಬೇಕು, ಎಂಬುದು ವಿದ್ಯಾರ್ಥಿಗಳು ನಾಯಕತ್ವ ಕೊಡುತ್ತಿರುವ ಸರಕಾರ–ವಿರೋಧಿ ಚಳುವಳಿಯ ಪ್ರಮುಖ ಹಕ್ಕೊತ್ತಾಯಗಳು. ಪಾರ್ಲಿಮೆಂಟ್ ಸಂವಿಧಾನದ ಏಳು ಪ್ರಜಾಸತ್ತಾತ್ಮಕ ಸುಧಾರಣೆಯ ಪ್ರಸ್ತಾವಗಳ ಚರ್ಚೆ ಮಾಡುತ್ತಿದ್ದು ಅವನ್ನು ಮಂಜೂರು ಮಾಡಲು ಚಳುವಳಿಕಾರರು ಒತ್ತಾಯಿಸುತ್ತಿದ್ದಾರೆ. ಪಾರ್ಲಿಮೆಂಟ್ ಅದನ್ನು ಮಂಜೂರು ಮಾಡುವ ಸಾಧ್ಯತೆ ಕಡಿಮೆಯಿದ್ದು ಹೊಸ ಸಂವಿಧಾನ ಬರೆಯಲು ಒಂದು ಸಮಿತಿಯನ್ನು ನೇಮಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಥಾಯ್ಲೆಂಡ್ ಸಾಂವಿಧಾನಿಕ ರಾಜಪ್ರಭುತ್ವವಾಗಿದೆ. ಇಲ್ಲಿ ರಾಜಪ್ರಭುತ್ವ ರಾಜಕೀಯದಿಂದ "ಮೇಲಿದೆ" ಮತ್ತು ದೈನಂದಿನ ಆಡಳಿತ.ರಾಜಕೀಯದಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ. ಆದರೆ ರಾಜಪ್ರಭುತ್ವವನ್ನು ಟೀಕೆ–ನಿಂದನೆ ಮಾಡಿದರೆ 5–15 ವರ್ಷಗಳ ವರೆಗೆ ಜೈಲುಶಿಕ್ಷೆಯ ಕಠಿಣ ಶಿಕ್ಷೆಗೆ ಸಿದ್ಧವಾಗಿರಬೇಕು. ಆದರೂ ಅದನ್ನು ಲೆಕ್ಕಿಸದೆ ವಿದ್ಯಾರ್ಥಿಗಳು ಇತರರು ದೊಡ್ಡ ಸಂಖ್ಯೆಯಲ್ಲಿ ಈಗಿನ ರಾಜಕೀಯದಲ್ಲಿ ಮಧ್ಯಪ್ರವೇಶ ಮಾಡುವ ರಾಜನ ವರ್ತನೆ ಟೀಕಿಸಿ ಆತನ ಅಧಿಕಾರಗಳ ಮತ್ತು ಖರ್ಚಿನ ಮೇಲೆ ಮಿತಿ ಹೇರಬೇಕು. ರಾಜಪ್ರಭುತ್ವದ ಟೀಕೆಯನ್ನು ಶಿಕ್ಷಾರ್ಹ ಅಪರಾಧವಾಗಿಸುವ ಕಾನೂನನ್ನು ಕಿತ್ತು ಹಾಕಬೇಕು ಎಂದು ಒತ್ತಾಯಿಸುತ್ತಿದ್ದಾರೆ ಎಂಬುದು ವಿಶೇಷ. ಹಿಂದಿನ ಎಲ್ಲಾ ರಾಜಕೀಯ ಚಳುವಳಿಗಳು ಆಗಿನ ಸರಕಾರವನ್ನು ಪ್ರಶ್ನೆ ಮಾಡಿದರೂ, ಹಿಂದೆಂದೂ ರಾಜಪ್ರಭುತ್ವದ ಪಾತ್ರವನ್ನು ಪ್ರಶ್ನಿಸಿರಲಿಲ್ಲ.

ಇದಕ್ಕೆ ಕಾರಣ ಬಹುವಾಗಿ ಗೌರವಿಸಲ್ಪಡುತ್ತಿದ್ದ ಹಿಂದಿನ ರಾಜ ಭೂಮಿಪೊಲ್.2017ರಲ್ಲಿ ನಿಧನ ಹೊಂದಿ, ಯುವರಾಜ ವಜೀರಲೊಂಗಕಾರ್ನ್ ರಾಜನಾಗಿದ್ದು. ಹಿಂದಿನ ರಾಜ ಭೂಮಿಪೊಲ್ ರಾಜಕೀಯದಿಂದ ದೂರವಿದ್ದು ಸಂವಿಧಾನದ ಪ್ರಕಾರ ಬರಿಯ ಸಾಂವಿಧಾನಿಕ ಔಪಚಾರಿಕ ಸರಕಾರದ ಮುಖ್ಯಸ್ಥನಾಗಿದ್ದ. ಆದರೆ ಈಗಿನ ರಾಜನ ಶೈಲಿ ಭಿನ್ನವಾಗಿದೆ. ಆತ ರಾಜಪ್ರಭುತ್ವದ ಶತಕೋಟ್ಯಾಂತರ ಡಾಲರುಗಳ ಮೌಲ್ಯದ ಆಸ್ತಿಯ ಮೇಲೆ ನಿಯಂತ್ರಣ ಸಾಧಿಸಿ ನೇರ ನಿರ್ವಹಣೆ ಆರಂಭಿಸಿದ್ದಾನೆ. ಥಾಯ್ಲೆಂಡಿನ ಹಲವು ಬ್ಯಾಂಕು, ಉದ್ಯಮಗಳಲ್ಲಿ ಶೇರುಗಳನ್ನು ಮತ್ತು ಅಗಾಧ ಪ್ರಮಾಣದ ಭೂಮಿಯನ್ನು ಖರೀದಿಸಿದ್ದಾನೆ. ಆತನ ಪ್ಲೇಬಾಯ್ ರೀತಿಯ ಐಶಾರಾಮಿ ಜೀವನ ಶೈಲಿ, ಹೆಚ್ಚಿನ ಸಮಯವನ್ನು ಜರ್ಮನಿಯಲ್ಲಿ ಕಳೆಯುವುದು ತೀವ್ರ ಟೀಕೆಗೆ ಒಳಗಾಗಿದೆ. ಇವಲ್ಲದೆ ರಾಜಧಾನಿ ಬ್ಯಾಂಗ್ ಕಾಕ್ ನ ಎರಡು ಮಿಲಿಟರಿ ರೆಜಿಮೆಂಟಿನ ನಾಯಕತ್ವವನ್ನು ನೇರವಾಗಿ ವಹಿಸಿಕೊಂಡಿದ್ದಾನೆ.

ಈ ಚಳುವಳಿಗಳು ಜನವರಿಯಲ್ಲೇ ಆರಂಭವಾಗಿದ್ದು ಕೊವಿದ್ ನಂತರದ ಲಾಕ್ ಡೌನ್ ಅವಧಿಯಲ್ಲಿ ಸಹಜವಾಗಿಯೇ ನಿಂತಿತ್ತು. ಆದರೆ ಜುಲೈನಿಂದ ಈ ಚಳುವಳಿ ಮತ್ತೆ ಗರಿಗೆದರಿಕೊಂಡಿದ್ದು ಸತತವಾಗಿ ಮುಂದುವರೆಯುತ್ತಿವೆ. ಸರಕಾರದ ದಮನದ ಕ್ರಮಗಳು, ಚಳುವಳಿಕಾರರ ತಾಳ್ಮೆಕೆಡಿಸುವ ಪ್ರಯತ್ನಗಳೂ ಯಾವುವೂ ಅವನ್ನು ದುರ್ಬಲಗೊಳಿಸಲು ಸಾಧ್ಯವಾಗಿಲ್ಲ. 2014ರಲ್ಲಿ ಮಿಲಿಟರಿ ಕ್ಷಿಪ್ರದಂಗೆಯಲ್ಲಿ ಮಿಲಿಟರಿ ಅಧಿಕಾರಿ ಮತ್ತು ಈಗಿನ ಪ್ರಧಾನಿ ಪ್ರಯುತ್ ಅಧಿಕಾರ ವಹಿಸಿಕೊಂಡಿದ್ದ. ಭಾರೀ ಒತ್ತಡದ ನಂತರ 2019ರಲ್ಲಿ ಚುನಾವಣೆ ನಡೆದು ಫ್ಯೂಚರ್ ಫಾರ್ವರ್ಡ್ ಎಂಬ ಪಕ್ಷ ಬಹುಮತ ಪಡೆಯಿತು. ಆದರೆ ಕ್ಷುಲ್ಲಕ ತಾಂತ್ರಿಕ–ಕಾನೂನಾತ್ಮಕ ಕಾರಣಗಳನ್ನು ಕೊಟ್ಟು ಆ ಪಕ್ಷವನ್ನೇ ಅಮಾನ್ಯಗೊಳಿಸಲಾಯಿತು. ಪಾರ್ಲಿಮೆಂಟ್ ಮತ್ತೆ ಮಿಲಿಟರಿ ಅಧಿಕಾರಿ ಪ್ರಯುತ್ ನನ್ನೇ ಪ್ರಧಾನಿಯಾಗಿ ನೇಮಿಸಿತ್ತು.

1973ರಲ್ಲಿ ರಚಿಸಲಾದ ಮತ್ತು ಹತ್ತಾರು ಬಾರಿ ಬದಲಾಯಿಸಲಾದ ಸಂವಿಧಾನ ರಾಜಕೀಯ ಮತ್ತು ಆಡಳಿತದಲ್ಲಿ ಮಿಲಿಟರಿ ಮತ್ತು ಪೋಲಿಸ್ ಗೆ ಯಾವುದೇ ಪ್ರಜಾಪ್ರಭುತ್ವದಲ್ಲಿ ಕಾಣಸಿಗದ ಪಾತ್ರವನ್ನು ಕೊಡುತ್ತದೆ. ಇದರ ವಿರುದ್ಧ ಚಳುವಳಿಗಳು ಏಳುತ್ತಲೇ ಇದ್ದವು.ಈಗಿನ ಚಳುವಳಿಗೆ 2019ರ ಚುನಾವಣೆಯಲ್ಲಿ ಫ್ಯೂಚರ್ ಫಾರ್ವರ್ಡ್ ಪಕ್ಷವನ್ನು ಭಾರೀ ಪ್ರಮಾಣದಲ್ಲಿ ಬೆಂಬಲಿಸಿದ ವಿದ್ಯಾರ್ಥಿ–ಯುವಜನರು ನಾಯಕತ್ವ ಕೊಡುತ್ತಿದ್ದಾರೆ. ಫ್ಯೂಚರ್ ಫಾರ್ವರ್ಡ್ ಕಾರ್ಯಕರ್ತರನ್ನು ನಾಯಕರನ್ನು ನಿರ್ಬಂಧಗಳು, ಬಂಧನಗಳಿಗೆ ಒಳಪಡಿಸಿದ್ದರ ವಿರುದ್ಧ ವಿಪರೀತವಾಗಿ ಆಕ್ರೋಶಗೊಂಡಿದ್ದಾರೆ. ಈಗ ಮಿಲಿಟರಿ ಮತ್ತು ರಾಜಪ್ರಭುತ್ವ ಗಳ ನಡುವಿನ ಹೊಂದಾಣಿಕೆ ಈ ಚಳುವಳಿಯ ಕೆಂಗಣ್ಣಿಗೆ ಗುರಿಯಾಗಿದ್ದು ಇಡೀ ರಾಜಕೀಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಯತ್ತ ಮುಖ ಮಾಡಿದೆ.

# ಪೆರು : ಪಾರ್ಲಿಮೆಂಟರಿ ಕ್ಷಿಪ್ರದಂಗೆ ನಡೆಸಿದ ಅಧ್ಯಕ್ಷನ ಪದಚ್ಯುತಿ

**ಪೆರು ನ ಮಧ್ಯಂತರ ಅಧ್ಯಕ್ಷರ ಬದಲಾವಣೆಯೊಂದಿಗೆ ಈ ಚಳುವಳಿ ನಿಲ್ಲುವ ಲಕ್ಷಣಗಳಿಲ್ಲ. ಸಾಮಾಜಿಕ ಚಳುವಳಿಗಳು, ಎಡ ಪಕ್ಷಗಳು, ನಾಗರಿಕ ಸಂಘಟನೆಗಳು ಸಮಗ್ರವಾಗಿ ಪ್ರಜಾಸತ್ತಾತ್ಮಕವಾಗಿರುವ ಸಂವಿಧಾನವನ್ನು ರಚಿಸಬೇಕೆಂಬ ಹಕ್ಕೊತ್ತಾಯವನ್ನು ಮಂಡಿಸಿದ್ದಾರೆ. ಎಪ್ರಿಲ್ 2021 ರ ಅಧ್ಯಕ್ಷೀಯ ಚುನಾವಣೆಯೊಂದಿಗೆ 1993ರಲ್ಲಿ ಫುಜಿಮೊರಿ ಎಂಬ ಸರ್ವಾಧಿಕಾರಿ ರಚಿಸಿದ ಸಂವಿಧಾನವನ್ನು ಬದಲಿಸಬೇಕೆ ಎಂಬುದರ ಕುರಿತು ಜನಮತಸಂಗ್ರಹ ನಡೆಯಬೇಕೆಂದು ಒತ್ತಾಯಿಸಿದ್ದಾರೆ.**

ನವೆಂಬರ್ 16ರಂದು ಪೆರು ಪಾರ್ಲಿಮೆಂಟ್ ಫ್ರಾನ್ಸಿಸ್ಕೊ ಸಗಾಸ್ತಿ ಎಂಬ ಮಧ್ಯಂತರ ಅಧ್ಯಕ್ಷನನ್ನು ನೇಮಿಸಿತು. ಇದಕ್ಕಿಂತ ಮೊದಲು ಕೇವಲ 5 ದಿನಗಳ ಕಾಲ ಮಧ್ಯಂತರ ಅಧ್ಯಕ್ಷನಾಗಿದ್ದ ಮೆನುವಲ್ ಮೆರಿನೊ ಭಾರೀ ಪ್ರತಿಭಟನೆಗಳನ್ನು ಎದುರಿಸಲಾಗದೆ ರಾಜೀನಾಮೆ ಕೊಡಬೇಕಾಯಿತು. ಆದರೆ ಸಾಮಾಜಿಕ ಚಳುವಳಿಗಳು ಮತ್ತು ಎಡ ರಾಜಕೀಯ ಪಕ್ಷಗಳು ಇದು ಒಂದು ಹೆಜ್ಜೆ ಮಾತ್ರ. ತಾವು ವ್ಯವಸ್ಥೆಯ ಸಮಗ್ರ ಬದಲಾವಣೆಯಾಗದೆ ವಿರಮಿಸುವುದಿಲ್ಲವೆಂದು ದೃಢವಾಗಿ ಸೂಚಿಸಿವೆ.

ನವೆಂಬರ್ 9ರಂದು ಹಿಂದಿನ ಅಧ್ಯಕ್ಷರಾಗಿದ್ದ ಮಾರ್ಟಿನ್ ವಿಝ್ ಕಾರ ಅವರನ್ನು ಪೆರು ನ ಪಾರ್ಲಿಮೆಂಟು ದೋಷಾರೋಪಣೆ ಮಾಡಿ ಅಧ್ಯಕ್ಷತೆಯಿಂದ ಕಿತ್ತು ಹಾಕಿತ್ತು. ಪೆರು ವಿನಾದ್ಯಂತ ಇದರ ವಿರುದ್ಧ ವ್ಯಾಪಕ ಪ್ರತಿಭಟನೆ ನಡೆದಿತ್ತು. ರಾಜಧಾನಿ ಲಿಮಾ ದಲ್ಲಿ ನಡೆದ ಪ್ರತಿಭಟನೆ ವಿರುದ್ಧ ಪೋಲಿಸರ ಕ್ರೂರ ದಮನದಲ್ಲಿ ಇಬ್ಬರು ಯುವಕರ ಸಾವು, ಆಕ್ರೋಶವನ್ನು ಇನ್ನಷ್ಟು ಹೆಚ್ಚಿಸಿತ್ತು. ಪೋಲಿಸರ ಕ್ರೂರ ದಮನದಲ್ಲಿ ನೂರಕ್ಕೂ ಹೆಚ್ಚು ಜನ ತೀವ್ರವಾಗಿ ಗಾಯಗೊಂಡಿದ್ದರು. 40 ಜನ ಕಾಣೆಯಾಗಿದ್ದರು. ಹಲವು ದಿನಗಳ ನಂತರವೂ 6 ಜನ ಇನ್ನೂ ಪತ್ತೆಯಾಗಿರಲಿಲ್ಲ. ಆಕ್ರೋಶ ಹೆಚ್ಚುತ್ತಾ ಹೋಗಿ ಪೋಲಿಸರ ಕ್ರೂರ ದಮನಕ್ಕೆ ಕಾರಣವಾದ ಮಧ್ಯಂತರ ಅಧ್ಯಕ್ಷನಾಗಿದ್ದ ಮೆನುವಲ್ ಮೆರಿನೊ ರಾಜೀನಾಮೆ ಕೊಡಬೇಕೆಂಬ ಒತ್ತಾಯ ಬಲವಾಗುತ್ತಾ ಹೋಗಿತ್ತು. ಪ್ರತಿಭಟನೆ ಬೆಳೆಯುತ್ತಾ ಹೋದ 5 ದಿನಗಳಲ್ಲಿ ಅವರ ಸಂಪುಟದ 18 ಸದಸ್ಯರಲ್ಲಿ ಸಚಿವರು ಆಕ್ರೋಶಕ್ಕೆ ಬೆದರಿ ರಾಜೀನಾಮೆ ಕೊಟ್ಟಿದ್ದರು. ಕೊನೆಗೆ ಮೆರಿನೊ ಸಹ ಆದರೆ ರಾಜೀನಾಮೆ ಕೊಡಲೇಬೇಕಾಯಿತು.

ಪೆರು ವಿನ ಪ್ರಾಂತ್ಯವೊಂದರಲ್ಲಿ ಹಿಂದಿನ ಅಧ್ಯಕ್ಷರಾಗಿದ್ದ ಮಾರ್ಟಿನ್ ವಿಝ್ ಕಾರ ಗವರ್ನರ್ ಆಗಿದ್ದಾಗಿನ ಪ್ರಕರಣವೊಂದರಲ್ಲಿ ಭ್ರಷ್ಟಾಚಾರದ ಆಪಾದನೆ ಮಾಡಲಾಗಿತ್ತು. ಪೆರು ನಲ್ಲಿ ಉನ್ನತ ವಲಯಗಳಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದ್ದು ಪಾರ್ಲಿಮೆಂಟ್ ಸದಸ್ಯರಲ್ಲೂ ಭ್ರಷ್ಟ ಸದಸ್ಯರೇ ಹೆಚ್ಚು. ಹಿಂದಿನ ಹಲವು ಅಧ್ಯಕ್ಷರು ಸಹ ಭ್ರಷ್ಟಾಚಾರದ ಆಪಾದನೆ ಎದುರಿಸಿದ್ದಾರೆ. ಮಾರ್ಟಿನ್ ವಿಝ್ ಕಾರ ಗವರ್ನರ್ ಆಗಿದ್ದಾಗಲೂ ಅಧ್ಯಕ್ಷರಾದ ಮೇಲೂ ಭ್ರಷ್ಟಾಚಾರದ ವಿರುದ್ಧ ಕ್ರಮಗಳಿಗೆ ಹೆಸರಾಗಿದ್ದವರು. ಅವರ ವಿರುದ್ಧ ಆಪಾದನೆ ಮಾಡಿದವರು ಸ್ವತಃ ಭ್ರಷ್ಟಾಚಾರದ ಕುರಿತು ಆಪಾದನೆ ಎದುರಿಸುತ್ತಿರುವವರು! ಈ ದೋಷಾರೋಪಣೆ ಮತ್ತು ಪದಚ್ಯುತಿ ಭ್ರಷ್ಟಾಚಾರದ ವಿರುದ್ಧ ಕ್ರಮಗಳಿಗೆ ಹೆಸರಾದ ಅಧ್ಯಕ್ಷರನ್ನು ಪದಚ್ಯುತಗೊಳಿಸಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ಭ್ರಷ್ಟ ರಾಜಕಾರಣಿಗಳ ಪಿತೂರಿಯೆಂದು ಪರಿಗಣಿಸಲಾಗಿದೆ. ಇದು ಮಾತ್ರವಲ್ಲದೆ ಲ್ಯಾಟಿನ್ ಅಮೆರಿಕದ ಖಂಡದಲ್ಲೇ ಅತ್ಯಂತ ತೀವ್ರ ಕೊವಿದ್ ಆರೋಗ್ಯ ಬಿಕ್ಕಟ್ಟು ಎದುರಿಸುತ್ತಿರುವ ಸಂದರ್ಭದಲ್ಲಿ ಈ ಅನಗತ್ಯ ಗೊಂದಲ ಸೃಷ್ಟಿಸಿದ ಪಾರ್ಲಿಮೇಮಟ್ ಸದಸ್ಯರ ವಿರುದ್ಧ ತೀವ್ರ ಆಕ್ರೋಶವಿತ್ತು.

ಸೆಪ್ಟೆಂಬರ್ ನಲ್ಲಿ ಈ ಕುರಿತು ನಡೆಸಲಾದವೊಂದು ಸಮೀಕ್ಷೆಯಲ್ಲಿ ಶೇ. 85 ಜನ ಈ ಆಪಾದನೆ ಹುಸಿ, ಅವರು ರಾಜೀನಾಮೆ ಕೊಡಬಾರದು. ಅವರನ್ನು ಪದಚ್ಯುತ ಗೊಳಿಸಬಾರದು ಎಂದು ಅಭಿಪ್ರಾಯ ಪಟ್ಟಿದ್ದರು. ಆಪಾದನೆಯ ತನಿಖೆಯೂ ಸಹ ಇನ್ನೂ ಆಗಿಲ್ಲ. ಮೇಲಾಗಿ ಪೆರು ನ ಕಾನೂನು ಪ್ರಕಾರ ಎಲ್ಲಾ ಸಾರ್ವಜನಿಕ ಅಧಿಕಾರಿಗಳು ಕಾನೂನು ಕ್ರಮದಿಂದ ವಿನಾಯಿತಿ ಪಡೆದಿದ್ದಾರೆ. ಹೀಗಿದ್ದರೂ ಪಾರ್ಲಿಮೆಂಟ್ ಅಧ್ಯಕ್ಷ ಮೆರಿನೊ, ಅಧ್ಯಕ್ಷ ಮಾರ್ಟಿನ್ ವಿಝ್ ಕಾರ ಅವರ ಪದಚ್ಯುತಿಗೆ "ಶಾಶ್ವತ ನೈತಿಕ ಅಸಾಮರ್ಥ್ಯ' ಎಂಬ ಕಲಮು ಬಳಸಿ ಪಾರ್ಲಿಮೆಂಟಿನ ಮುಂದೆ ದೋಷಾರೋಪಣೆಯನ್ನು ಮಂಡಿಸಿದ್ದರು. ಇದು ಪಾರ್ಲಿಮೆಂಟರಿ ಕ್ಷಿಪ್ರದಂಗೆಯಲ್ಲದೆ ಮತ್ತೇನಲ್ಲವೆಂದು ಸಾರ್ವಜನಿಕರಿಗೆ ಸ್ಪಷ್ಟವಿತ್ತು. ಆ ಮೇಲೆ ಮೆರಿನೊ ತಾನೇ ಮಧ್ಯಂತರ ಅಧ್ಯಕ್ಷರಾದರು. ಆದ್ದರಿಂದ ಸಾರ್ವಜನಿಕ ಆಕ್ರೋಶ ಮೆರಿನೊ ವಿರುದ್ಧ ಅಷ್ಟು ತೀವ್ರವಾಗಿತ್ತು.

ಮಧ್ಯಂತರ ಅಧ್ಯಕ್ಷರ ಬದಲಾವಣೆಯೊಂದಿಗೆ ಈ ಚಳುವಳಿ ನಿಲ್ಲುವ ಲಕ್ಷಣಗಳಿಲ್ಲ. ಸಾಮಾಜಿಕ ಚಳುವಳಿಗಳು, ಎಡ ಪಕ್ಷಗಳು, ನಾಗರಿಕ ಸಂಘಟನೆಗಳು ಸಮಗ್ರವಾಗಿ ಪ್ರಜಾಸತ್ತಾತ್ಮಕವಾಗಿರುವ ಸಂವಿಧಾನವನ್ನು ರಚಿಸಬೇಕೆಂಬ ಹಕ್ಕೊತ್ತಾಯವನ್ನು ಮಂಡಿಸಿದ್ದಾರೆ. ಎಪ್ರಿಲ್ 2021 ರ ಅಧ್ಯಕ್ಷೀಯ ಚುನಾವಣೆಯೊಂದಿಗೆ 1993ರಲ್ಲಿ ಫುಜಿಮೊರಿ ಎಂಬ ಸರ್ವಾಧಿಕಾರಿ ರಚಿಸಿದ ಸಂವಿಧಾನವನ್ನು ಬದಲಿಸಬೇಕೆ ಎಂಬುದರ ಕುರಿತು ಜನಮತಸಂಗ್ರಹ ನಡೆಯಬೇಕೆಂದು ಒತ್ತಾಯಿಸಿದ್ದಾರೆ. ಶಿಕ್ಷಣ, ಆರೋಗ್ಯ, ಮನೆ ಮತ್ತು ಉದ್ಯೋಗದ ಹಕ್ಕುಗಳು ಮೂಲಭೂತ ಹಕ್ಕಾಗಿರುವ ಸಂವಿಧಾನವೊಂದು ಬೇಕು. ಸಂವಿಧಾನ ನವ–ಉದಾರವಾದ ಸೃಷ್ಟಿಸಿರುವ ಅಸಮಾನತೆಯನ್ನು ಮೂಲೋತ್ಪಾಟನೆ ಮಾಡುವ ಸಂವಿಧಾನ ಬೇಕು ಎಂದು ಒತ್ತಾಯಿಸುತ್ತಿದ್ದಾರೆ.



JANASHAKTHI KANNADA VARA PATRIKE November 23-29, 2020 Price: Rs. 10/- Date of Publication: 20 November 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

## ‘ನೂರು ಅಡಿ ಬಣ್ಣದ ನಡೆ’, ಉತ್ಸವ್ ರಾಕ್ ಗಾರ್ಡನ್ ಖ್ಯಾತಿಯ

# ಸೊಲಬಕ್ಕನವರ್ ಇನ್ನಿಲ್ಲ!



**ಹಿರಿಯ ಜನಪದ ಕಲಾವಿದರು, ವರ್ಣಚಿತ್ರ ಕಲಾವಿದರು ಮತ್ತು ಗೋಟಗೋಡಿದಲ್ಲಿ ಗ್ರಾಮೀಣ ಪರಿಸರದ ಮ್ಯೂಸಿಯಂ (ಉತ್ಸವ್ ರಾಕ್ ಗಾರ್ಡನ್) ಮಾಡಿರುವ, ಸಮುದಾಯ ಸಂಘಟನೆಯ ಸದಸ್ಯರೂ ಆಗಿದ್ದ ಸೊಲಬಕ್ಕನವರ್ ಇನ್ನಿಲ್ಲ!**

ಸೊಲಬಕ್ಕನವರ್ ಮೂಲತಃ ದಾವಣಗೆರೆಯಲ್ಲಿ ತಮ್ಮ ಸಾಂಸ್ಕೃತಿಕ ಕೃಷಿಯನ್ನು ಮಾಡಿದವರು. ದಾವಣಗೆರೆ ಚಿತ್ರಕಲಾ ಶಾಲೆಯ ವಿದ್ಯಾರ್ಥಿಯಾಗಿ ಕಾರ್ಯಚಟುವಟಿಕೆಗಳನ್ನು ಪ್ರಾರಂಭ ಮಾಡಿದವರು. ದಾವಣಗೆರೆ ಸಮುದಾಯ ಮತ್ತು ರಾಜ್ಯ ಕೇಂದ್ರ ಸಮುದಾಯ ಸಂಘಟನೆಯೊಟ್ಟಿಗೆ ಗುರುತಿಸಿಕೊಂಡಿದ್ದವರು.

ದೇಶದಲ್ಲೇ ಪ್ರಥಮ ಎನ್ನಿಸಿಕೊಳ್ಳುವ ವಿಶೇಷ ರೀತಿಯ ಜಾತಾ ಕಾರ್ಯಕ್ರಮ, ‘ನೂರು ಅಡಿ ಬಣ್ಣದ ನಡೆ, ಅಣು ಸಮರಕ್ಕೆ ಜನತೆಯ ತಡೆ’ ಎನ್ನುವ ವರ್ಣಚಿತ್ರ ಜಾತಾದ ರುವಾರಿ. 120 ಅಡಿ ಉದ್ದದ ಆರು ಅಡಿ ಅಗಲದ ಕ್ಯಾನ್ವಾಸ್ ನಲ್ಲಿ ಅಣುಶಕ್ತಿ ಯ ಪ್ರಕೋಪಗಳನ್ನು, ಅಣುಯುದ್ದ ನಡೆದರೆ ದೇಶ ದೇಶದ ಗಡಿಗಳನ್ನು ದಾಟೀ ಅದು ಮನುಕುಲದ ಮೇಲೆ ಮಾಡುವ ಊಹೆಗೂ ನಿಲುಕದ ದುಷ್ಪರಿಣಾಮದ ವರ್ಣಚಿತ್ರ ತಯಾರಿಸಿ ಕೊಟ್ಟ ಶ್ರೇಷ್ಠ ಕಲಾವಿದ. ದಾವಣಗೆರೆ ಕಲಾಶಾಲೆಯ ಮತ್ತೊಬ್ಬ ವರ್ಣಚಿತ್ರ ಕಲಾವಿದ ಕರಿರಾಜು ಮತ್ತು ಕಲಾಶಾಲೆಯ ವಿದ್ಯಾರ್ಥಿಗಳು ಸೊಲಬಕ್ಕನವರ್ ಅವರ ಮುಂದಾಳತ್ವದಲ್ಲಿ ತಯಾರಿಸಿ ಕೊಟ್ಟ ವರ್ಣಚಿತ್ರ ವನ್ನು ಸಮುದಾಯ ಮೊದಲಿಗೆ ಇಡೀ ರಾಜ್ಯದಲ್ಲಿ, ನಂತರ ದೇಶದ ಎಲ್ಲ ಪ್ರಮುಖ ರಾಜ್ಯ ಕೇಂದ್ರಗಳಲ್ಲಿ ಮತ್ತು ಅಂತಿಮವಾಗಿ ಜಪಾನ್ ದೇಶದಲ್ಲೂ ಪ್ರದರ್ಶನಗೊಂಡು ಅದು ಸೊಲಬಕ್ಕನವರ್ ಅವರ ಮ್ಯೂಸಿಯಂ ಅನ್ನು ಸೇರಿತು.

ಸಣ್ಣಾಟ, ದೊಡ್ಡಾಟ ಕಲಾಪ್ರಾಕಾರಗಳಲ್ಲೂ ಸೊಲಬಕ್ಕನವರ್ ಅವರು ತಮ್ಮನ್ನು ಗುರುತಿಸಿಕೊಂಡು, ಆ ಪ್ರಕಾರಗಳ ಆಳವಾದ ಅಧ್ಯಯನ ಮತ್ತು ಪ್ರದರ್ಶನಗಳಲ್ಲೂ ತಮ್ಮನ್ನು ತೊಡಗಿಸಿಕೊಂಡು, ಪ್ರದರ್ಶನಗಳ ಸಂಘಟನೆಯನ್ನೂ ದಾವಣಗೆರೆ, ಬಳ್ಳಾರಿ, ತುಮಕೂರು ಜಿಲ್ಲೆಗಳ ಸುತ್ತಮುತ್ತ ಆಯೋಜಿಸಿದ್ದರು.

ಇವರ ಬದ್ದತೆ ಕಲಾ ಮಾಧ್ಯಮ ಮತ್ತು ರಂಗಭೂಮಿ ಕಡೆ ಎಷ್ಟರಮಟ್ಟಿಗೆ ಇತ್ತೆಂದರೆ, ಅವರ ಮಗ, ಎಸ್.ಎಸ್..ಎಲ್.ಸಿ ಓದುತ್ತಿದ್ದ ಹುಡುಗನನ್ನು ಶಾಲೆ ಬಿಡಿಸಿ, ತಮ್ಮ ಸಾಂಸ್ಕೃತಿಕ ಸಂಘಟನೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು.

ಬಾಗಲಕೋಟೆ ಜಿಲ್ಲೆ ಮುಳುಗಡೆಗೆ ಒಳಗಾಗಿ, ನವ ಬಾಗಲಕೋಟೆ ಉದಯವಾದಾಗ, ನವ ಬಾಗಲಕೋಟೆ ವಿನ್ಯಾಸದಲ್ಲೂ ಸೊಲಬಕ್ಕನವರ್





ಅವರ ಶ್ರಮ ಮತ್ತು ಕ್ರಿಯಾಶೀಲ ಕೊಡುಗೆ ಇದೆ. ಜಾನಪದ ಅಕಾಡಮಿ ಸದಸ್ಯರಾಗಿ ಸಹ ಕಾರ್ಯನಿರ್ವಹಿಸಿದವರು.

ಈ 2020 ನಮ್ಮ ಅತ್ಯಂತ ಆತ್ಮೀಯ ವಲಯದ ಹಲವಾರು ರಂಗ ನಟರು, ಸಂಘಟಕರು, ಸಾಹಿತಿಗಳು, ಚಲನಚಿತ್ರ ರಂಗ, ಕಿರುತೆರೆ ಎಲ್ಲಾ ಪ್ರಕಾರಗಳ ಆತ್ಮೀಯರನ್ನು ಕ್ರೂರ ಕಾಲ ತನ್ನ ಅಪ್ಪುಗೆಯಿಂದ ಬರಸೆಳೆದಿದ್ದಾನೆ.... ದಿನಕ್ಕೆ ಒಬ್ಬರು ಕಡ್ಡಾಯವಾಗಿ ನಮ್ಮನ್ನು ಅಗಲುತಿದ್ದಾರೆ...

ಅಗಲಿದ ಆತ್ಮೀಯ ಗೆಳೆಯ ಸೊಲಬಕ್ಕನವರ್ ಅವರಿಗೆ ನಮನಗಳು.....

***– ಗುಂಡಣ್ಣ ಚಿಕ್ಕಮಗಳೂರು***

### ರಾಕ್ ಗಾರ್ಡನ್ ನಲ್ಲಿ ಜೀವಂತ

ನೀವು ಹಾವೇರಿ ಜಿಲ್ಲೆಯ ಶಿಗ್ಗಾಂವ ಗೊಟಗೋಟೆಯ ಅಂತರಾಷ್ಟ್ರೀಯ ರಾಕ್ ಗಾರ್ಡನ್ ನೋಡಿಲ್ಲವೆಂದರೆ ಖಂಡಿತ ಕುಟುಂಬ ಸಮೇತ ಹೋಗಿ....ಅಲ್ಲಿ ಖಂಡಿತ ಸೋಲಬಕ್ಕನವರ ಜೀವಂತವಾಗಿಯೇ ನಿಮಗೆ ಅಲ್ಲಿ ಭೇಟಿಯಾಗುತ್ತಾರೆ.

***–ಮಹಾಂತೇಶ ಕೆ.***

### "ನೂರು ಅಡಿಗಳಣ್ಣ, ಇದು ಬಣ್ಣದ ನಡೆಯಣ್ಣ. ನೂರು ಅಡಿಗಳ ನಡೆಯು, ನಮ್ಮ ಸಮುದಾಯದ ಈ ಕರೆಯು...."

ನಾನು ಎಸ್.ಎಸ್.ಎಲ್.ಸಿ. ಯಲ್ಲಿರುವಾಗಲೇ ಈ ಹಾಡು ಕೇಳಿದ್ದೆ, ಗುನುಗಿದ್ದೆ. ನಮ್ಮೂರಿನ ಸೊಪ್ಪಿನ ಮಲ್ಲಪ್ಪನವರ ಧರ್ಮ ಛತ್ರದಲ್ಲಿ ಆಗ ಬಂದಿದ್ದ ಯುದ್ಧ ವಿರೋಧಿ ಜಾಥಾದ ನೂರಾ ಹತ್ತು ಅಡಿಗಳ ಒಂದೇ ಪೇಂಟಿಂಗನ್ನು ಬೆರಗಿನಿಂದ ನೋಡಿದ್ದೆ. ಆಗಲೇ ಈ ಕಲಾಕೃತಿಯನ್ನು ರಚಿಸಿದ ಸೊಲಬಕ್ಕನವರ್ ಅವರ ಹೆಸರು ಅಚ್ಚರಿಯ ಕಾರಣದಿಂದಲೇ ಅಚ್ಚಳಿಯದೆ ಉಳಿದಿತ್ತು. ಆ ನಂತರ ನಾನು1987ರಲ್ಲಿ "ಸಮುದಾಯ" ಸೇರಿದ ನಂತರ ನೂರೇಕೆ, ಸಾವಿರ ಬಾರಿ ಆ ಹಾಡನ್ನು ಹಾಡಿರಬಹುದು. ಹಾಗೆ ಸೊಲಬಕ್ಕನವರ್ ನಮ್ಮ ಮನಸ್ಸಿನಲ್ಲಿ ಉಳಿದಿದ್ದರು.

ಅವರದು ಹಾಗೆಯೇ, ಹರಿವ ಹಾರುವ ಸ್ವಚ್ಛಂದದ ಸೃಜನಶೀಲ ಮನಸ್ಸು. ಅವರ ಮನೋವಿಸ್ತಾರಕ್ಕೆ ನೌಕರಿಕೆಯ ಗೋಡೆಗಳು ಅಡ್ಡಿಯಾಗಿದ್ದವು. ಹಾಗೆಂದೇ ನೌಕರಿ ಬಿಟ್ಟು "ದೊಡ್ಡಾಟದ ಸಂಸ್ಥೆ ಕಟ್ಟುವ ಹುಚ್ಚು ಹತ್ತಿಸಿಕೊಂಡು ಕುಟುಂಬದ ಪಾಡನ್ನೇ ಬಯಲಾಟದಂತಾಗಿಸಿದ್ದರು. ಅವು ಅವರ ಬದುಕಿನ ಅತ್ಯಂತ ಕಷ್ಟದ ದಿನಗಳಾಗಿರಬೇಕು. .. ..ಅದ್ಹೇಗೆ ಸಂಸಾರದ ನೌಕೆ ತೂಗಿಸಿದರೋ ಅವರಿಗೇ ಗೊತ್ತು. ಅವರ ಬದುಕಿನ ಉತ್ತರಾರ್ಧದಲ್ಲಿ ಯಶಸ್ಸಿನ ದಾರಿ ಹೊರಳಿದ್ದು ಮಗಳು ವೇದರಾಣಿಯ ಮದುವೆಯ ನಂತರ.

ಅವರ ಅಳಿಯ ಒಳ್ಳೆಯ ದುಡಿಮೆಯಲ್ಲಿದ್ದರು. ಮಾವನವರ



ಕನಸಿಗೆ ಬಂಡವಾಳ ಜೋಡಿಸಿದರು. ಕನಸು ಮತ್ತು ಬಂಡವಾಳಗಳ ಸಂಗಮ ’ಅಸಾಧ್ಯ ಸಾಧನೆ’ಗಳಿಗೆ ಕಾರಣವಾಯಿತು. ರಾಕ್ ಗಾರ್ಡನ್ ಎಂಬ ಶಿಲ್ಪಲೋಕ ಸೃಷ್ಟಿಯಾಯಿತು. ಕಲೆಯನ್ನು ಮತ್ತು ಉದ್ಯಮವಾಗಿ ಮಾರ್ಪಡಿಸುವಿಕೆ ಅವರಿಗೆ ಅಪಾರ ಹಣವನ್ನಷ್ಟೇ ತಂದುಕೊಡಲಿಲ್ಲ. ಹಲವು "ವಿಶ್ವದಾಖಲೆ"ಗಳನ್ನು ಅವರಿಂದ ಮಾಡಿಸಿತು. ಮಗ ದೊಡ್ಡವನಾಗಿ, ಶಿಲ್ಪರಚನಾ ಕೆಲಸಗಾರರನ್ನು ಕೈಯಲ್ಲಿಟ್ಟುಕೊಂಡು ಶಿಲ್ಪ ನಿರ್ಮಾಣದ ಗುತ್ತಿಗೆಯನ್ನು ಸ್ವಯಂ ನಿರ್ವಹಿಸುವಷ್ಟು ಸಮರ್ಥನಾಗಿದ್ದ ಆ ಬಳಿಕ ಸೊಲಬಕ್ಕನವರ್ ಅವರ ಜೀವನ "ಸಾಧನಾನಂದ"ದಿಂದ ಕೂಡಿದ್ದು.

***– ಬಿ. ಪೀರ್ ಬಾಷ.***

*(ಕವನ ಪುಟ 5 ರಲ್ಲಿ)*

### ನಾನೇಕೆ ಚಿತ್ರ ಬರೆಯುತ್ತಿದ್ದೇನೆ?

ನಾನು ನಿಮ್ಮ ಬಗ್ಗೆ ಚಿಂತಿಸಿದರೆ
ನೀವು ನನ್ನ ಬಗ್ಗೆ ಚಿಂತಿಸುತ್ತೀರಿ
ಕಲೆ ನಿಮ್ಮ ಬಗ್ಗೆ ಚಿಂತಿಸಿದಲ್ಲಿ
ಕಲೆ ನಿಮ್ಮದಾಗುತ್ತದೆ
ಕಲಾವಿದ ನಿಮ್ಮವನಾಗುತ್ತಾನೆ
ನೀವು ಕಲಾಭಿಮಾನಿಗಳಾಗುತ್ತೀರಿ.

ಜನಸಮುದಾಯದ ಅಸಮಾನತೆಗಳು ನನ್ನ ಬಾಲ್ಯದಿಂದಲೂ ನನಗೊಂದು ಒಗಟಾಗಿದ್ದನ್ನು ಕಂಡುಕೊಳ್ಳಲು ಬಹಳ ಕಾಲ ಹಿಡಿಯಲಿಲ್ಲ. ನನ್ನ ಸಹಕಲಾಮಾಧ್ಯಮಗಳಾದ ಸಾಹಿತ್ಯ, ನಾಟಕಗಳು

ತುಂಬಾ ಸಹಾಯಕವಾದವು. ಅವುಗಳ ದಾರಿಯಲ್ಲಿ ಸತ್ಯದ ಸೌಂದರ್ಯವನ್ನು ಹೇಳಲು ಚಿತ್ರಕಲಾವಿದರೇಕೆ

ಪ್ರಯತ್ನಿಸುತ್ತಿಲ್ಲವೆಂದು ವಿಚಾರ ಹೊತ್ತು ಚಿಂತನೆಯನ್ನು ಪ್ರಾರಂಭಿಸಿದಾಗ ಪ್ಲೆಖನೋವ್ ನ ‘ಕಲೆ ಮತ್ತು ಸಾಮಾಜಿಕ ಜೀವನ’ ಎಂಬ ಸಾಹಿತ್ಯ ಕೃತಿ ನನಗೆ ಬಹಳ ಸಹಕಾರಿಯಾಯಿತೆಂದರೆ ತಪ್ಪಾಗಲಾರದು.

ಸಮಾಜದ ಒಳಿತು ಕೆಡಕುಗಳನ್ನು ತೆರೆದ ಕಣ್ಣುಗಳಿಂದ ಚಿತ್ರಿಸುವುದೇ ನಿಜವಾದ ಕಲೆ. ಸಮಾಜದಿಂದ

ದೂರವಿರುವ ಕಲಾವಿದನಿಂದ ಸಮಾಜಕ್ಕೆ ಏನೂ ಪ್ರಯೋಜನವಾಗದೇ ಇದ್ದಾಗ ಸಮಾಜ ಅವನನ್ನು

ನಿರುಪಯೋಗಿ ವ್ಯಕ್ತಿ ಎನ್ನುತ್ತದೆ. “ಕಲೆ ಕೇವಲ ಸೌಂದರ್ಯ ಪ್ರಜ್ಞೆಯಾಗಿರದೇ ಸಾಮಾಜಿಕ ಚಿಂತನೆ” ಯೆಂದು ಕಲಾವಿದ ಸಮಯಕ್ಕೆ ಸರಿಯಾಗಿ ಪ್ರತಿಕ್ರಿಯಿಸಲೇಬೇಕು. ಆಗ ಮಾತ್ರ ಕಲಾಕೃತಿ ಉಳಿಯುತ್ತದೆ, ಜನಪರವಾಗುತ್ತದೆ, ಕಲಾವಿದ ಗೌರವಿಸಲ್ಪಡುತ್ತಾನೆ. ಒಬ್ಬ ಕಲಾವಿದ ಎಷ್ಟು ಚಿತ್ರಗಳನ್ನು ಬರೆದಿದ್ದಾನೆ ಎನ್ನುವುದಕ್ಕಿಂತ ಎಂಥ ಚಿತ್ರಬರೆದಿದ್ದಾನೆ ಎನ್ನುವುದು ಮುಖ್ಯವಾಗುತ್ತದೆ. ಇಂದು ವ್ಯವಸ್ಥೆಯನ್ನು ಹಿಡಿತದಲ್ಲಿಟ್ಟುಕೊಂಡು, ನಿಸರ್ಗವನ್ನೇ ತಿರುಚಿಹಾಕಲು ಹೊಂಚು ಹೂಡಿರುವ ದುಷ್ಟ ಶಕ್ತಿಗಳ ಅಮಾನವೀಯ ಕಾರ್ಯದ ವಿರುದ್ಧ ಎಲ್ಲಾ ಕಲಾವಿದರು ಕಾರ್ಯನಿರತರಾಗಬೇಕಾಗಿದೆ. ಅಣುಸಮರದಿಂದ ಇಡೀ ವಿಶ್ವವನ್ನೇ ನಾಶಮಾಡುವಂಥ ಹೇಯ ಕೆಲಸಕ್ಕೆ ಹೊರಟಿರುವವರಿಗೆ ನಾವೆಲ್ಲಾ ಉತ್ತರ ಹೇಳಬೇಕಾಗಿದೆ.

ಬನ್ನಿ..................
ನೀವೂ...............!
ಜೊತೆಗೂಡಿ!!

***ಸೊಲಬಕ್ಕನವರ***

***ಉಪನ್ಯಾಸಕ–ಸರ್ಕಾರಿ ಚಿತ್ರಕಲಾ ವಿಧ್ಯಾಲಯ, ದಾವಣಗೆರೆ.***

(ಇದು ಸೊಲಬಕ್ಕನವರ ಕಲಾಕೃತಿಯನ್ನು ಜನತೆಗೆ ಮುಟ್ಟಿಸಿದ ಸಮುದಾಯದ ‘ನೂರು ಅಡಿಗಳ ಬಣ್ಣದ ನಡೆ, ಅಣು ಸಮರಕ್ಕೆ ತಡೆ’ ಜಾಥಾದ ಸಂದರ್ಭದಲ್ಲಿ ಅವರು ಬರೆದ ಕಿರು ಲೇಖನ **ಕೃಪೆ: ಸಮುದಾಯ ವಾರ್ತಾಪತ್ರ**) (

**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**